ಉಪನಿಷತ್ ಮಾಲಾ. ೨

# ನಾರಾಯಣೋಪನಿಷತ್ತು

ಕನ್ನಡ ಟೀಕಾ ತಾತ್ಪರ್ಯ ಸಹಿತ


ರಾ. ಅ. ಸಂಪತ್ಕುಮಾರಾಚಾರ್ಯ.

ಪುರುಷಸೂಕ್ತ ಕನ್ನಡ ಅನುವಾದಕ

(All Rights Reserved.)

2951 ವಾಣೀವಿಲಾಸಮೊಹಲ್ಲಾ, ಬೆಲೆ 12 ಆಣೆ
ಮೈಸೂರು.

ಮುದ್ರಕರು :
ಜಿ. ಆರ್. ಜೋಸ್ಯರ್
ಕಾರೊನೇಷನ್ ಪ್ರೆಸ್, ಮೈಸೂರು.
೧೯೫೩.



ಓಂ ನಮೋ ನಾರಾಯಣಾಯ

ಹರಿಃ ಓಮ್

# ನಾರಾಯಣೋಪನಿಷತ್

## ಪ್ರಸ್ತಾವನೆ

ಉಪನಿಷತ್ತುಗಳು ಅನೇಕವಾಗಿವೆ. ಅವುಗಳಲ್ಲಿ ದಶೋಪನಿಷತ್ತೆಂಬ ಹತ್ತು ಮುಖ್ಯವಾದವು. ಉಪನಿಷತ್ತುಗಳ ಸಮುದಾಯವೇ ವೇದಾಂತ, ಅದನ್ನು ಜ್ಞಾನಕಾಂಡವೆಂದೂ ಹೇಳುವುದುಂಟು.

ಉಪನಿಷತ್ತುಗಳು ಪರಬ್ರಹ್ಮವಿಚಾರ, ಪರಬ್ರಹ್ಮನಿಗೂ ಚರಾಚರಾತ್ಮಕವಾದ ಪ್ರಪಂಚಕ್ಕೂ ಇರುವ ಸಂಬಂಧ, ಚಿತ್ತು, ಅಚಿತ್ತು, ಈಶ್ವರ ಇವರುಗಳ ಪರಸ್ಪರ ಸಂಬಂಧ, ಮೋಕ್ಷೋಪಾಯ ಇವೇ ಮುಂತಾದ ಜ್ಞಾನಪ್ರದವಾದ ವಿಷಯಗಳನ್ನು ಬೋಧಿಸುತ್ತವೆ. ಪೂರ್ವೀಕರಾದ ಅನೇಕ ಮಹರ್ಷಿಗಳು ತಮ್ಮ ಜೀವಮಾನವೆಲ್ಲಾ ತಪಸ್ಸು ಮಾಡಿ ಧ್ಯಾನಮಗ್ನರಾಗಿದ್ದು ಸಾಕ್ಷಾತ್ಕಾರ ಮಾಡಿದ ತತ್ವಗಳು ಉಪನಿಷತ್ತಿನಲ್ಲಿ ಅಡಕವಾಗಿವೆ. ಆ ತತ್ವಗಳನ್ನು ಸ್ಪಷ್ಟವಾಗಿ ತಿಳಿದು ಕೊಳ್ಳಬೇಕೆಂಬ ಆಸಕ್ತಿಯುಳ್ಳವನು ಒಬ್ಬ ಗುರುವಿನ ಸಮೀಪದಲ್ಲಿ ಕುಳಿತು ಶ್ರದ್ಧಾಭಕ್ತಿಯಿಂದ ಕೇಳಿ ತಿಳಿದುಕೊಳ್ಳುವುದೇ ಆ ಕಾಲದ ಸಂಪ್ರದಾಯವಾಗಿತ್ತು. ಗುರುಗಳ ಉಪದೇಶದಿಂದಲೇ ಅವುಗಳ ಅರಿವು ಉಂಟಾಗಬೇಕಾದುದರಿಂದ ಅವುಗಳಿಗೆ ಉಪನಿಷತ್ತೆಂಬ ಹೆಸರು ಬಂದಿದೆ ಯೆಂದು ಹೇಳಿದೆ.

"ಉಪ + ನಿ + ಸದ್" ಎಂಬ ಮೂರೂ ಕೂಡಿ "ಉಪನಿಷತ್" ಎಂಬ ಪದವಾಗಿದೆ. ಉಪ = ಸಮೀಪ, ನಿ = ಕೆಳಗಡೆ, ಸದ್ = ಕುಳಿತುಕೊಳ್ಳುವುದು. ಎಂದರೆ ಸಮೀಪದಲ್ಲಿ ಕೆಳಗಡೆ ಕುಳಿತುಕೊಳ್ಳುವುದು, ಎಂದು ಅರ್ಥವಾಗುತ್ತದೆ. ಉಪನಿಷತ್ತುಗಳ ಬೋಧನೆಯು ಬಹಳ ಗಹನವಾಗಿರುವುದರಿಂದ ಅವುಗಳಲ್ಲಿ ಸ್ಪಷ್ಟವಾದ ಜ್ಞಾನ ಸಂಪಾ

ದನೆ ಮಾಡಬೇಕೆಂಬ ಕುತೂಹಲವುಳ್ಳವನು ಒಬ್ಬ ಗುರುವಿನ ಸಮೀಪಕ್ಕೆ ಹೋಗಿ ವಿನಯದಿಂದ ಕೆಳಗೆ ಕುಳಿತುಕೊಂಡು, ಭಕ್ತಿ ವಿಶ್ವಾಸದಿಂದ ಕೂಡಿದವನಾಗಿ ಒಂದೇ ಮನಸ್ಸಿನಿಂದ ಅವರ ಉಪದೇಶವನ್ನು ಕೇಳಿ ತಿಳಿದುಕೊಳ್ಳಬೇಕೆಂದು ಆ ಪದಕ್ಕೆ ತಾತ್ಪರ್ಯವಾಗುತ್ತದೆ.

ಉಪನಿಷತ್ ಎಂದರೆ ಅಜ್ಞಾನವನ್ನು ಪರಿಹಾರಮಾಡಿ ಬ್ರಹ್ಮಜ್ಞಾನವನ್ನು ಪ್ರಕಾಶಪಡಿಸುತ್ತದೆಂದು ಇನ್ನೊಂದು ಅರ್ಥವಾಗುತ್ತದೆ.

ಶಂಕರಾಚಾರ್ಯರ ತೈತ್ತಿರೀಯೋಪನಿಷತ್ ವ್ಯಾಖ್ಯಾನದಲ್ಲಿ "ಪರಂ ಶ್ರೇಯೋಽಸ್ಯಾಮ್ ನಿಷಣ್ಣಮ್" = "ಅತ್ಯುತ್ತಮವಾದ ಶ್ರೇಯಸ್ಸು ಅವುಗಳಲ್ಲಿವೆ" ಎಂದು ಹೇಳಿದೆ.

"ಸದ್" ಎಂದರೆ ನಾಶಪಡಿಸುವುದು ಎಂದು ಬೇರೊಂದು ಅರ್ಥ. ಆದರಿಂದ ಉಪನಿಷತ್ತು ಅಜ್ಞಾನವನ್ನು ನಾಶಮಾಡಿ ಬ್ರಹ್ಮಜ್ಞಾನವನ್ನುಂಟುಮಾಡುವುದೆಂದಾಗುತ್ತದೆ.

"ಸದ್" ಸಮೀಪಿಸು ಎಂದು ಮತ್ತೊಂದು ಅರ್ಥ. ಉಪನಿಷತ್ತುಗಳು ಬ್ರಹ್ಮಜ್ಞಾನವು ಸಮೀಪಿಸುವಂತೆ ಮಾಡುತ್ತವೆ. ಅಥವ ಅವುಗಳ ಸಹಾಯದಿಂದ ಬ್ರಹ್ಮವನ್ನು ಸಮೀಪಿಸುತ್ತೇವೆಂದು ಆಗುತ್ತದೆ. ಹೀಗೆ 'ಉಪನಿಷತ್ತು' ಪದಕ್ಕೆ ನಾನಾರ್ಥಗಳು ಹೇಳಲ್ಪಟ್ಟಿವೆ.

ಉಪನಿಷತ್ತು ಮುಖ್ಯವಾಗಿ ಉಪದೇಶಮಾಡುವಂತಾದ್ದು ಪರಬ್ರಹ್ಮ ವಿಚಾರ. ಪರಬ್ರಹ್ಮಜ್ಞಾನವನ್ನು ಪಡೆಯಬೇಕಾದರೆ ಉಪನಿಷತ್ತಲ್ಲದೆ ಮತ್ತಾವುದರಿಂದಲೂ ಸಾಧ್ಯವಿಲ್ಲ.

ವೇದವನ್ನರಿಯದವನು ಶ್ರೇಷ್ಠನಾದ ಭಗವಂತನನ್ನು ಎಂದಿಗೂ ಚಿಂತಿಸುವದಿಲ್ಲವೆಂದು ತೈತ್ತಿರೀಯ ಬ್ರಾಹ್ಮಣದಲ್ಲಿ ಹೇಳಿದೆ. [3.12.9]

ಮೋಕ್ಷಾಪೇಕ್ಷೆಯಿಂದ ನಶ್ವರವಾದವುಗಳನ್ನೆಲ್ಲಾ ತ್ಯಜಿಸಿ ಉಪನಿಷತ್ತುಗಳಲ್ಲಿ ಸಂಪೂರ್ಣವಾದ ಜ್ಞಾನವನ್ನು ಪಡೆದಿರುವವರು, ಸಂಸಾ

ದಕ್ಕೆ ಕಾರಣವಾದ ಅಜ್ಞಾನದಿಂದಲೂ ಇತರ ದೋಷಗಳಿಂದಲೂ ಬಿಡುಗಡೆ ಹೊಂದುತ್ತಾರೆ. ಇದೇ 'ಸದ್' ಎಂಬುದರ ಧಾತು ಅರ್ಥ. ಆದುದರಿಂದಲೇ ಇದಕ್ಕೆ ಉಪನಿಷತ್ ಶಾಸ್ತ್ರವೆಂದು ಹೆಸರು. ಹೀಗೆಂದು ಶಂಕರಾಚಾರ್ಯರ "ಕಠೋಪನಿಷತ್" ವ್ಯಾಖ್ಯಾನದಲ್ಲಿ ಹೇಳಿದೆ.

ಉಪನಿಷತ್ ಪದಕ್ಕೆ ಉಪಯೋಗವಾಗಿರುವ ಅರ್ಥಗಳು:— (1) ಗುಹ್ಯಾರ್ಥನಿರೂಪಣೆ. (2) ಅದರ ವಿವರಣೆಯಿಂದುಂಟಾಗುವ ಜ್ಞಾನ. (3) ಆ ಜ್ಞಾನದಿಂದುಂಟಾಗುವ ಫಲ.

ಉಪನಿಷತ್ತುಗಳು ಅನೇಕವಾಗಿದ್ದರೂ ನಮ್ಮ ನಿತ್ಯ ಜೀವನದಲ್ಲಿ ಮುಖ್ಯವಾಗಿ ಬಳಕೆಯಲ್ಲಿರುವವು, "ಪುರುಷಸೂಕ್ತ" ಮತ್ತು "ನಾರಾಯಣೋಪನಿಷತ್". ಪ್ರತಿದಿನವೂ ಮನೆಗಳಲ್ಲೂ ದೇವಾಲಯಗಳಲ್ಲೂ ದೇವರ ಪೂಜಾಕಾಲದಲ್ಲಿ ಅವು ಪಾರಾಯಣ ಮಾಡಲ್ಪಡುತ್ತವೆ. ಅವು ಸಕಲ ದೇವತೆಗಳ ಸಾರವಾಗಿರುವುದೇ ಅದಕ್ಕೆ ಕಾರಣವಾಗಿದೆ.

ಮಂತ್ರಪಾರಾಯಣ ಅಥವಾ ಮಂತ್ರಪಠಣವೆಂದರೆ ನಾವು ಮಾಡುವ ದೇವರ ಸ್ತೋತ್ರ, ದೇವರ ಪ್ರಾರ್ಥನೆ, ದೇವರ ಪೂಜೆ. ಈ ಪಾರಾಯಣ ಕಾಲವು ನಮ್ಮ ಜೀವನದಲ್ಲಿ ಅತ್ಯಂತ ಪವಿತ್ರವಾದುದು, ಏಕೆಂದರೆ ಹೊರಗಿನ ವ್ಯಾಪಾರಗಳಲ್ಲೇ ಸದಾ ತೊಳಲುತ್ತಿರುವ ನಮ್ಮ ಮನಸ್ಸು ಆಗ ಅಂತರ್ಮುಖವಾಗಿ ಸ್ವಲ್ಪಕಾಲವಾದರೂ ಭಗವಂತನ ಕಡೆಗೆ ತಿರುಗಿ ಶಾಂತವಾಗಿರುತ್ತದೆ. ನಾವು ಅಲ್ಪಜ್ಞರು, ಅಶಕ್ತರು ಅನೇಕ ದೋಷಗಳಿಂದ ಕೂಡಿದವರು. ಭಗವಂತನು ಸರ್ವಜ್ಞ, ಸರ್ವಶಕ್ತ, ಸಮಸ್ತ ಕಲ್ಯಾಣಗುಣಪರಿಪೂರ್ಣ, ಜಗತ್ತಿನಲ್ಲಿ ನಡೆಯುವುದೆಲ್ಲವೂ ಅವನ ಸಂಕಲ್ಪಾನುಸಾರ ಇದೇ ಮುಂತಾದ ಅವನ ಸ್ವಭಾವದ ಅರಿವು ಉಂಟಾಗಲು ಸಹಾಯ ಮಾಡುತ್ತದೆ. ಮನೋವಾಕ್ಕಾಯಗಳಿಂದ ನಾವು ಹಿಂದೆ ಮಾಡಿರುವ, ಈಗ ಮಾಡುತ್ತಿರುವ, ಮುಂದೆ ಮಾಡಬಹುದಾದ ಅಪರಾಧಗಳನ್ನು ಸ್ಮರಿಸಿಕೊಂಡು ಅವಶ್ಯವಾಗಿ ಭಗವಂತನ ಕ್ಷಮೆಯನ್ನು ಬೇಡಿ ಮುಂದೆ ಹಾಗೆ ಮಾಡದಿರಲು ಅವಶ್ಯಕವಾದ

ಶಕ್ತಿ, ಜ್ಞಾನ, ವಿಶ್ವಾಸಗಳನ್ನು ಕೊಟ್ಟು ಕಾಪಾಡಬೇಕೆಂದು ಪ್ರಾರ್ಥಿಸುತ್ತೇನೆ. ಈ ವಿಧವಾದ ಪ್ರಾರ್ಥನೆಯೇ ನಮ್ಮ ಜೀವನದ ತಿರುಳು. ಅದು ನಮ್ಮ ಹೃದಯದ ಅಂತರಾಳವನ್ನು ಮುಟ್ಟಬೇಕು. ಪ್ರಾರ್ಥನೆಯಲ್ಲಿ ನಮ್ಮ ಮನಸ್ಸು ತನ್ಮಯವಾಗಬೇಕು. ಹೀಗೆ ಮಾಡುವ ಪ್ರಾರ್ಥನೆಯಿಂದ ಇಹಲೋಕದಲ್ಲಿ ಬರುವ ಅನುಕೂಲ್ಯವು ಅವರವರ ಭಕ್ತಿ ವಿಶ್ವಾಸಾನುಸಾರವಾಗಿರುವುದು. ಪರಲೋಕದಲ್ಲಿ ಬರುವ ಅನುಕೂಲ್ಯವು ಅವರವರ ಭಕ್ತಿ ವಿಶ್ವಾಸಾನುಸಾರವಾಗಿರುವುದು.

ಮೇಲೆ ಹೇಳಿರುವ ಫಲಗಳು ಪ್ರಾರ್ಥನೆಯಿಂದ ಉಂಟಾಗಬೇಕಾದರೆ ಅದರ ಅರ್ಥಜ್ಞಾನವು ಸ್ಪಷ್ಟವಾಗಿರಬೇಕಾದುದು ಅತ್ಯವಶ್ಯಕ. ಅರ್ಥವತ್ತಾಗಿ ಪಾರಾಯಣ ಮಾಡುವಾಗ ಮಂತ್ರದಲ್ಲಿ ಹೇಳಿರುವುದೆಲ್ಲ ನಮ್ಮ ಮನಸ್ಸು ಗ್ರಹಿಸಲು ಸುಲಭವಾಗುವುದು.

ಅದರಲ್ಲಿ ಹೇಳಿರುವ ಭಗವಂತನ ದಿವ್ಯವಾದ ಅನಂತ ಕಲ್ಯಾಣಗುಣಗಳ ಮಹಿಮೆಯ ಅರಿವು ಕ್ರಮೇಣ ಉಂಟಾಗಿ ಅದರಿಂದ ದೇವರಲ್ಲಿ ನಮ್ಮ ಭಕ್ತಿ ನೆಲೆಯಾಗಿ ನಿಲ್ಲಲು ಸಹಾಯವಾಗುತ್ತದೆ. ಪದೆಪದೆ ಪಾರಾಯಣ ಮಾಡುವುದರಿಂದ ಕಲ್ಯಾಣಗುಣಗಳ ಮಹಿಮೆಯ ಪ್ರಕಾಶವು ಕ್ರಮೇಣ ವೃದ್ಧಿಯಾಗಿ ಅವುಗಳ ಅನುಭವವು ಮನಸ್ಸಿಗೆ ನಿರ್ಮಲತ್ವ, ಆನಂದ, ಸುಖ, ಶಾಂತಿಗಳನ್ನು ಕೊಡುತ್ತದೆ.

ವೇದಗಳಲ್ಲಿ ಜಗತ್ಕಾರಣ ವಸ್ತುವಿಚಾರವನ್ನು ಹೇಳುವಾಗ "ಬ್ರಹ್ಮನ್" "ಇದಮ್" ಎಂಬ ಸಾಮಾನ್ಯ ಶಬ್ದಗಳು ಪ್ರಯೋಗವಾಗಿವೆ. "ಬ್ರಹ್ಮನ್" ಎಂಬ ಶಬ್ದ ವಿಚಾರವಾಗಿ ತೈತ್ತಿರೀಯೋಪನಿಷತ್ತು ಹೀಗೆ ಹೇಳುತ್ತದೆ.

ಯತೋ ವಾ ಇಮಾನಿ ಭೂತಾನಿ ಜಾಯನ್ತೇ ।
ಯೇನ ಜಾತಾನಿ ಜೀವನ್ತಿ ।
ಯತ್ಪ್ರಯನ್ತ್ಯಭಿ ಸಂವಿಶನ್ತಿ ।
ತದ್ವಿಜಿಜ್ಞಾಸಸ್ವ ತದ್ಬ್ರಹ್ಮೇತಿ ॥

ಯಾವಾತನಿಂದ ಈ ಭೂತಾದಿಗಳೆಲ್ಲಾ ಉಂಟಾದವೋ ಯಾವಾತನಿಂದ ಅವೆಲ್ಲವೂ ಜೀವಿಸಿರುವುವೋ ಯಾವಾತನಲ್ಲಿ ಪ್ರಳಯಕಾಲದಲ್ಲಿ ಅವು ಹೋಗಿ ಸೇರುವುವೋ, ಅವನನ್ನು ತಿಳಿದುಕೊಳ್ಳುವನಾಗು. ಅವನೇ ಬ್ರಹ್ಮನ್ (ಪರಬ್ರಹ್ಮನು) ಹೀಗೆಂದು ವರುಣನು ತನ್ನ ಮಗನಾದ ಭೃಗುವಿಗೆ ಉಪದೇಶ ಮಾಡಿದನು. ಈ ಜಗತ್ತನ್ನು ಸೃಷ್ಟಿಸುವುದು, ಸೃಷ್ಟಿಸಿದ ಜಗತ್ತನ್ನು ಕಾಪಾಡುವುದು, ಕೊನೆಯಲ್ಲಿ ಅದನ್ನು ಸಂಹಾರ ಮಾಡುವುದು ಎಂದರೆ ತನ್ನಲ್ಲಿ ಸೇರಿಸಿಕೊಳ್ಳುವುದು ಈ ಕಾರ್ಯಗಳು ಬ್ರಹ್ಮನಿಂದಲೇ ನಡೆಯುತ್ತವೆ ಎಂದು ಇಲ್ಲಿ ಹೇಳಿದೆ.

" ಕಾರಣಂತು ಧ್ಯೇಯಃ " [ಬ್ರಹ್ಮಸೂತ್ರ] ಸಮಸ್ತಕ್ಕೂ ಕಾರಣವಾದುದನ್ನೇ ಧ್ಯಾನಮಾಡತಕ್ಕದ್ದು. ಕಾರ್ಯವನ್ನು ಉಂಟುಮಾಡುವ ವಸ್ತು ಕಾರಣವೆನಿಸುವುದು. ಕಾರ್ಯರೂಪವಾದ ಸಮಸ್ತ ಪ್ರಪಂಚ ಸೃಷ್ಟಿಗೂ ಕಾರಣವು ಬ್ರಹ್ಮನ ಸಂಕಲ್ಪ ಮಾತ್ರವೇ ಆಗಿದೆ. ಆದುದರಿಂದ ಧ್ಯಾನಮಾಡತಕ್ಕದ್ದು ಪರಬ್ರಹ್ಮನನ್ನೇ ಎಂದು ಹೇಳಿದಂತಾಯಿತು.

" ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ " (ಈಶಾವಾಸ್ಯೋಪನಿಷತ್) ಚರಾಚರಾತ್ಮಕವಾದ ಜಗತ್ತು ಸಮಸ್ತಕ್ಕೂ ಸ್ವಾಮಿಯಾದವನಿಂದ ವ್ಯಾಪಿಸಲ್ಪಟ್ಟಿದೆ. ಸೃಷ್ಟಿಗೆ ಕಾರಣವಾದ ಪರಬ್ರಹ್ಮನು ಪ್ರಪಂಚವನ್ನೆಲ್ಲಾ ವ್ಯಾಪಿಸಿಕೊಂಡಿದ್ದಾನೆ, ಎನ್ನುವುದರಿಂದ ಪರಬ್ರಹ್ಮನು ಚೇತನಾಚೇತನ ವಸ್ತುಗಳಿಗಿಂತ ಬೇರೆ, ಆವನು ಸರ್ವವ್ಯಾಪಿ, ಅವನು ಸಮಸ್ತ ವಸ್ತುಗಳ ಒಳಗೆ ಪ್ರವೇಶಿಸಿ ಅಂತರ್ಯಾಮಿಯಾಗಿದ್ದು ಎಲ್ಲವನ್ನು ನಡೆಸುವನು. ಎಂದು ಹೇಳಿದೆ.

" ಪುರುಷ ಏವೇದಗ್ಂ ಸರ್ವಂ " (ಪುರುಷಸೂಕ್ತ) ಸಮಸ್ತವನ್ನೂ ವ್ಯಾಪಿಸಿಕೊಂಡಿರುವ ಬ್ರಹ್ಮನೇ ಪುರುಷ ಶಬ್ದ ವಾಚ್ಯನೆಂದು ಹೇಳುತ್ತದೆ.

" ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ " (ಪುರುಷಸೂಕ್ತ) ಪುರುಷವಾಚ್ಯನಾದ ಪರಬ್ರಹ್ಮನು ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಎಂದು ಹೇಳಿದೆ.

ಬ್ರಹ್ಮ ಶಬ್ದದಿಂದ ಹೇಳಲ್ಪಟ್ಟಿರುವ ಪ್ರಪಂಚದ ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣನೂ ಧ್ಯಾನಮಾಡಲ್ಪಡತಕ್ಕವನೂ, ಸಮಸ್ತವನ್ನೂ ವ್ಯಾಪಿಸಿಕೊಂಡಿರುವವನೂ, ಪುರುಷನಾಮ್ಯನೂ ಲಕ್ಷ್ಮೀಪತಿಯೂ ಆದವನು ಶ್ರೀಮನ್ನಾರಾಯಣನೇ ಎಂದು ಈ ನಾರಾಯಣೋಪನಿಷತ್ತು ನಿರ್ಣಯಮಾಡುತ್ತದೆ.

ನಾರಾಯಣೋಪನಿಷತ್ತಿನಲ್ಲಿ ನಾಲ್ಕು ಭಾಗಗಳಿವೆ, ಒಂದೊಂದು ಭಾಗವೂ ಒಂದೊಂದು ವೇದಶಿರಸ್ಸೆಂದು ಹೇಳಿದೆ.

ಮೊದಲನೇ ಭಾಗವು ಋಗ್ವೇದ ಶಿರಸ್ಸು. ಪುರುಷನಾಮ್ಯನಾದ ಶ್ರೀಮನ್ನಾರಾಯಣನು ಪ್ರಜೆಗಳನ್ನು ಸೃಜಿಸಬೇಕೆಂದು ಸಂಕಲ್ಪ ಮಾಡಿದನು. ಅದರಂತೆ ಮೊದಲು ಪ್ರಾಣ, ಇಂದ್ರಿಯ, ಭೂತಾದಿಗಳನ್ನು ಸೃಷ್ಟಿಸಿ, ಅನಂತರ ಬ್ರಹ್ಮ, ರುದ್ರ, ಇಂದ್ರಾದಿಗಳನ್ನು ಸೃಷ್ಟಿಸಿದನು. ಜಗತ್ತಿನ ಉತ್ಪತ್ತಿ, ರಕ್ಷಣೆ, ಲಯಗಳಿಗೆ ಅವನೇ ಕಾರಣನೆಂದು ಈ ಭಾಗವು ತಿಳಿಸುತ್ತದೆ.

ಎರಡನೇ ಭಾಗವು ಯಜುರ್ವೇದ ಶಿರಸ್ಸು. ನಾರಾಯಣನು ಸರ್ವಸ್ವರೂಪನು. ಅವನು ಶಾಶ್ವತವಾಗಿ ಎಲ್ಲಾ ಕಾಲಗಳಲ್ಲಿ ಇರುವಂತವನು. ಬ್ರಹ್ಮ, ಶಿವ, ಇಂದ್ರ ಇವರೆಲ್ಲರೂ ನಾರಾಯಣನೇ, ದಿಕ್ಕುಗಳೆಲ್ಲವೂ ನಾರಾಯಣನೇ. ಭೂತ, ಭವಿಷ್ಯತ್ತು, ವರ್ತಮಾನಕಾಲಗಳಲ್ಲಿರುವ ಸಮಸ್ತವಸ್ತುಗಳೂ ಅವನೇ, ಅವನು ಕಳಂಕವಿಲ್ಲದವನು, ಪಾಪರಹಿತನು, ನಾಶವಿಲ್ಲದವನು, ಇಂಥಾ ಸ್ವರೂಪವುಳ್ಳವನೆಂದು ಮಾತುಗಳಿಂದ ಹೇಳಲಾರದವನು, ನಿರ್ಮಲನು, ಸ್ವಯಂಪ್ರಕಾಶನು ಹೀಗಿರುವಂತವನು ನಾರಾಯಣನು ಒಬ್ಬನೇ. ಈ ವಿಧವಾದ ಅಭಿಪ್ರಾಯವುಳ್ಳವನು ವಿಷ್ಣುವಿನ ಸಾಯುಜ್ಯವನ್ನು ಪಡೆಯುತ್ತಾನೆ.

ಮೂರನೇ ಭಾಗವು ಸಾಮವೇದ ಶಿರಸ್ಸು, "ಓಂ ನಮೋ ನಾರಾಯಣಾಯ" ಎಂಬ ಅಷ್ಟಾಕ್ಷರಮಂತ್ರದ ಭಾಗಗಳನ್ನು ತಿಳಿಸಿ, ಅದರ

ಉಚ್ಚಾರಣೆಯ ಕ್ರಮವನ್ನು ಹೇಳಿ ಅದನ್ನು ಭಕ್ತಿ ವಿಶ್ವಾಸದಿಂದ ಪಾರಾಯಣ ಮಾಡುವವರಿಗೆ ಉಂಟಾಗುವ ಇಹಲೋಕ ಪರಲೋಕ ಫಲಗಳನ್ನು ಹೇಳುತ್ತದೆ.

ನಾಲ್ಕನೇ ಭಾಗವು ಅಥರ್ವವೇದ ಶಿರಸ್ಸು. ಶ್ರೀಮನ್ನಾರಾಯಣನ ಕಲ್ಯಾಣ ಗುಣಗಳನ್ನು ತಿಳಿಸಿ, ಅವನು ಓಂಕಾರ ಸ್ವರೂಪನು, ಆ ಸ್ವರೂಪವನ್ನು ಧ್ಯಾನ ಮಾಡುವ ಯೋಗಿಯು ಜನನ ಮರಣವೆಂಬ ಸಂಸಾರ ಬಂಧನದಿಂದ ಬಿಡುಗಡೆ ಹೊಂದುತ್ತಾನೆ. ಅಷ್ಟಾಕ್ಷರವನ್ನು ಉಪಾಸನೆ ಮಾಡುವಂಥವನಿಗೆ ವೈಕುಂಠವು ಪ್ರಾಪ್ತವಾಗುವುದು. ಆ ವೈಕುಂಠ ಲೋಕವು ಶ್ರೇಷ್ಠವಾದುದು, ಆನಂದಕರವಾದುದು, ಜ್ಞಾನಮಯವಾದುದು, ಪ್ರಕಾಶಮಾನವಾದುದು, ಎಂದು ಹೇಳುತ್ತದೆ.

ಕೊನೆಯಲ್ಲಿ ಈ ಉಪನಿಷತ್ತನ್ನು ಶ್ರದ್ಧಾಭಕ್ತಿಯಿಂದ ಮೂರು ಕಾಲಗಳಲ್ಲೂ ಅಧ್ಯಯನ ಮಾಡುವವರಿಗುಂಟಾಗುವ ಫಲವನ್ನು ಹೇಳಿ ಮುಕ್ತಾಯವಾಗುತ್ತದೆ.

ಹಿಂದು ಧರ್ಮದ ಸದ್ಯದ ಸ್ಥಿತಿಯನ್ನು ಕುರಿತು ಹೇಳಬೇಕಾದ ಒಂದೆರಡು ಮಾತುಗಳು. ಹಿಂದೂ ಧರ್ಮದ ಪ್ರಮಾಣ ಗ್ರಂಥಗಳಲ್ಲಿ ಉಪನಿಷತ್ತು ಮುಖ್ಯವಾದುದು. ಈ ಕಾಲದ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರು ನಮ್ಮ ಧರ್ಮಗ್ರಂಥಗಳನ್ನು ಓದುವುದೇ ಇಲ್ಲ. ಓದುವುದಕ್ಕೂ ಇಷ್ಟವಿಲ್ಲ. ಆಧುನಿಕ ವಿದ್ಯಾಭ್ಯಾಸದಿಂದ ಜ್ಞಾನವಂತರಾಗಿರುವವರೂ ಸಹ ನಮ್ಮ ಧರ್ಮ ಗ್ರಂಥವನ್ನು ಅನಾದರಣೆ ಮಾಡಿರುವುದರಿಂದ ಸಮಾಜದಲ್ಲಿ ಅನೇಕ ವಿಧವಾದ ಲೋಪದೋಷಗಳು ಬೆಳೆಯುತ್ತಾ ಬರುತ್ತಿವೆ. ಅನ್ಯದೇಶಗಳಲ್ಲಿ ಹೀಗಿಲ್ಲವೆಂದು ತಿಳಿದು ಬರುತ್ತದೆ. ಅಲ್ಲಿ ವಿದ್ಯಾವಂತರು ತಮ್ಮ ಸಮಾಜದ ಪುರಾತನ ಗ್ರಂಥಗಳನ್ನು ಅಲಕ್ಷ್ಯಮಾಡಿರುವದಿಲ್ಲ. ಆದುದರಿಂದ ಆ ದೇಶದವರ ಧರ್ಮ ಸಂಪ್ರದಾಯವೂ ಪುರಾತನವಾದ ಜ್ಞಾನವೂ ವಿದ್ಯಾವಂತರಿಂದ ಆದರಿಸಲ್ಪಟ್ಟು ಅವರಿಂದ ಕಾಪಾಡಲ್ಪಡುತ್ತಿವೆ. ನಮ್ಮ ಸಮಾಜವೂ, ಧರ್ಮವೂ ಕುಂಠಿ

ರಿಸಬೇಕಾದರೆ ವಿದ್ಯಾವಂತರು ನಮ್ಮ ಧರ್ಮ ಗ್ರಂಥಗಳನ್ನು ಚೆನ್ನಾಗಿ ಓದಿ, ತಿಳಿದು ತಾವೂ ಅಭ್ಯಾಸ ಮಾಡಿ, ತಾವು ತಿಳಿದುಕೊಂಡುದನ್ನು ಇತರರಿಗೆ ಬೋಧಿಸುವ ಶಕ್ತಿಯನ್ನು ಪಡೆಯಬೇಕು. ಹಾಗೆ ಹೊಂದಿದ ಶಕ್ತಿಯನ್ನು ವಿನಿಯೋಗಿಸಿ ಸಮಾಜದ ಅಭ್ಯುದಯಕ್ಕಾಗಿ ಸೇವೆ ಮಾಡಬೇಕು.

ನಾರಾಯಣೋಪನಿಷತ್ತಿನ, ಟೀಕು ತಾತ್ಪರ್ಯಗಳೊಡನೆ ಕೂಡಿದ ಈ ಕನ್ನಡಾನುವಾದವು ವಿದ್ವಾಂಸರಿಗಾಗಿ ಅಲ್ಲ. ಪರಂಪರಾನುಗತವಾಗಿ ಬಂದಿರುವ ನಮ್ಮ ಸಂಸ್ಕೃತಿಯಲ್ಲಿ ತೀರ ಅನಾದರಣೆಯಿಂದಿರುವವರಿಗೂ, ಅಕ್ಕರೆ ಇಲ್ಲದವರಿಗೂ ಅಲ್ಲ. ಇದು ಕೇವಲ ಸಂಸ್ಕೃತ ಪರಿಚಯವಿಲ್ಲದ ಕನ್ನಡಿಗರಿಗಾಗಿ. ಅವರಲ್ಲಿ ಈ ಉಪನಿಷತ್ತನ್ನು ನಿತ್ಯಪಾರಾಯಣ ಮಾಡುವವರಿಗೂ, ಅದರಲ್ಲಿ ಹೇಳಿರುವ ವಿಷಯವನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿಯುಳ್ಳ ಈ ಕಾಲದ ವಿದ್ಯಾವಂತರಿಗೂ, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ ಈ ಉಪನಿಷತ್ತಿನ ವಿಷಯಗಳನ್ನು ಪರಿಚಯ ಮಾಡಿಕೊಡುವುದಕ್ಕಾಗಿ ಬರೆದಿರುತ್ತೆ. ಈ ಪುಸ್ತಕದಲ್ಲಿರುವ ಲೋಪದೋಷಗಳನ್ನು ಓದುಗರು ಕ್ಷಮಿಸಬೇಕಾಗಿ ಪ್ರಾರ್ಥನೆ.

ರಾ. ಅ. ಸಂಪತ್ಕುಮಾರಾಚಾರ್ಯ.

|| ಓಮ್ ||

ನಾರಾಯಣ ಪರಬ್ರಹ್ಮಣೇ ನಮಃ ||

# ನಾರಾಯಣೋಪನಿಷತ್ತು

ಸೃಷ್ಟಿ, ಸ್ಥಿತಿ, ಲಯಗಳು ಅನಾದಿಯಾಗಿ ಪರಂಪರೆಯಾಗಿ ನಡೆದು ಬರುತ್ತಲೇ ಇವೆ. ಮಹಾಪ್ರಳಯ ಕಾಲದಲ್ಲಿ ಅಚೇತನಪ್ರಪಂಚದ ಸಮಸ್ತವಸ್ತುಗಳೂ, "ಅಸದ್ವಾ ಇದಮಗ್ರ ಆಸೀತ್." (ತೈ. ಆರಣ್ಯಕ) (ಪ್ರಪಂಚವು ಹುಟ್ಟುವುದಕ್ಕೆ ಮೊದಲು ನಾಮರೂಪವಿಲ್ಲದುದಾಗಿತ್ತು.) ಎಂಬಂತೆ ಅವುಗಳ ಹೆಸರೂ ಆಕಾರವೂ ಬೇರೆಬೇರೆ ಎನಿಸಿ ತೋರಿ ಅಳಿಯದಂತೆ ರೂಪಾಂತರವಾಗಿ ಸೂಕ್ಷ್ಮಾವಸ್ಥೆಯನ್ನು ಹೊಂದಿ ಜೀವರೊಡನೆ ಪರಮಾತ್ಮನಾದ ನಾರಾಯಣನಲ್ಲಿ ಹುದುಗಿ ಅವನ ಶರೀರವಾಗಿರುತ್ತವೆ. ಇಂತಹ ಸೂಕ್ಷ್ಮಾವಸ್ಥೆಯಲ್ಲಿರುವ ಚೇತನ, ಅಚೇತನ ಎಂದರೆ ಜ್ಞಾನವುಳ್ಳ ಮತ್ತು ಜ್ಞಾನವಿಲ್ಲದ ವಸ್ತುಗಳನ್ನು ಶರೀರವಾಗುಳ್ಳವನೇ ಪರಬ್ರಹ್ಮನಾದ ನಾರಾಯಣನು. ಇದೇ ಪರಬ್ರಹ್ಮನ ಕಾರಣಾವಸ್ಥೆ.

"ಆತ್ಮಾವಾ ಇದಮೇಕ ಏವ ಅಗ್ರ ಆಸೀತ್, ನಾನ್ಯತ್ಕಿಂಚ." (ಐ. I.1.1.) = ಸೃಷ್ಟಿಗೆ ಮೊದಲು ಚಿದಚಿಚ್ಛರೀರಿಯಾದ ಪರಬ್ರಹ್ಮನೊಬ್ಬನೇ ಇದ್ದವನು. ಇನ್ನೊಂದೂ ಇರಲಿಲ್ಲ. "ಸದೇವ ಸೋಮ್ಯೇದಮಗ್ರಮಾಸೀತ್." (ಛಾಂ. VI.2.1.) ಸೃಷ್ಟಿಗೆ ಮೊದಲು ಚಿದಚಿದಾತ್ಮಕಪ್ರಪಂಚಶರೀರಿಯಾದ ಪರಬ್ರಹ್ಮನೊಬ್ಬನೇ ಇದ್ದನು. "ಏಕೋಹ ವೈ ನಾರಾಯಣ ಆಸೀತ್." ಸೃಷ್ಟಿಗೆ ಮೊದಲು ನಾರಾಯಣನೊಬ್ಬನೇ ಇದ್ದನು. ಮೇಲಿನ ಶ್ರುತಿಗಳು ಹೇಳುವಂತೆ ಸೃಷ್ಟಿಗೆ ಮೊದಲು ಇದ್ದವನು ಪರಬ್ರಹ್ಮನು ಒಬ್ಬನೇ.

ಪರಮಾತ್ಮನ ಶರೀರವಾಗಿ ಹುದುಗಿರುವ ಜೀವಾತ್ಮರ ಸಹಜವಾದ ಸ್ವರೂಪವು ಜ್ಞಾನಾನಂದಮಯವಾದುದು. "ಆತ್ಮಾ ಜ್ಞಾನಮಯಃ"

ಆತ್ಮನು ಜ್ಞಾನಮಯನು, "ವಿಜ್ಞಾನಘನಃ" = ವಿಜ್ಞಾನದಿಂದ ಪೂರ್ಣನು. ಹೀಗೆಂದು ಶ್ರುತಿಗಳು ಹೇಳುತ್ತವೆ. ಜ್ಞಾನಸ್ವರೂಪನೆಂದರೆ ಸ್ವಯಂಪ್ರಕಾಶನು. ಆನಂದಸ್ವರೂಪನೆಂದರೆ ಸ್ವಯಂ ಸುಖರೂಪನು. ಚೇತನನು ಪರಮಪದವನ್ನು ಹೊಂದಿ ನಿತ್ಯಸೂರಿಗಳಂತೆ ನಿರತಿಶಯಾನಂದಯುಕ್ತನಾದ ಪರಮಾತ್ಮನನ್ನು ಅನುಭವಿಸಿ ಅವನ ನಿತ್ಯಸೇವೆಯಲ್ಲಿ ಪ್ರೀತನಾಗಿ ಸರ್ವದಾ ಆನಂದಿಸುತ್ತಿರಲು ಅರ್ಹನಾದವನು. ಹೀಗಿದ್ದಾಗ್ಯೂ ಅನಾದಿಕರ್ಮಸಂಬಂಧದಿಂದ ಉಂಟಾದ ಅಜ್ಞಾನವೆಂಬ ಅಂಧಕಾರದಿಂದ ಮರೆಸಲ್ಪಟ್ಟ ತನ್ನ ಆತ್ಮಸ್ವರೂಪ ಸ್ವಭಾವಗಳು ಪ್ರಕೃತಿಗಿಂತ ಬೇರೆಯಾಗಿ, ಸ್ವಯಂಪ್ರಕಾಶವುಳ್ಳವನು, ಪರಿಪೂರ್ಣಾನಂದವುಳ್ಳವನು, ಪರಮಾತ್ಮನ ಸಂಕಲ್ಪಾನುಸಾರ ವ್ಯಾಪಾರವುಳ್ಳವನು, ನಿತ್ಯನು, ನಿರ್ಮಲನು, ಜ್ಞಾನಾಶ್ರಯನು. ಪರಮಾತ್ಮನಿಂದ ಧರಿಸಲ್ಪಡತಕ್ಕವನು ಮತ್ತು ಅವನ ಇಷ್ಟಬಂದಂತೆ ಉಪಯೋಗಿಸಲ್ಪಡತಕ್ಕವನು ಇವೇ ಮುಂತಾದ ಆತ್ಮಗುಣಗಳನ್ನು ತಿಳಿಯಲರಿಯದೆ, ಅಲ್ಪವೂ ಅಸ್ಥಿರವೂ ದೋಷಮಯವೂ ಆದ ಶಬ್ದಾದಿ ಭೋಗಗಳಲ್ಲಿಯೇ ನಿರತನಾಗಿ ಜನನಮರಣವೆಂಬ ಸಂಸಾರ ಚಕ್ರದಲ್ಲಿ ತೊಳಲುತ್ತಿದ್ದನು. ಪ್ರಳಯಕಾಲದಲ್ಲಿ ಕರಣ (ಕಣ್ಣು, ಕಿವಿ ಮೊದಲಾದವು) ಕಳೇಬರ (ದೇಹ) ಗಳಿಲ್ಲದವನಾಗಿ, ಭೋಗ ಮೋಕ್ಷಗಳಿಲ್ಲದೆ ಅಚೇತನಕ್ಕೆ ಸಮಾನನಾಗಿ ಬಿದ್ದಿರುವ ಚೇತನನ ಕಷ್ಟವನ್ನು ಚಿಂತಿಸಿದ ಭಗವಂತನು ಅತ್ಯಂತ ವ್ಯಾಕುಲಚಿತ್ತನಾಗಿ, ಅವನು (ಆತ್ಮನು) ಕರಣ ಕಳೇಬರಾದಿಗಳಿಲ್ಲದೆ ರೆಕ್ಕೆ ಮುರಿದ ಪಕ್ಷಿಯಂತೆ ಬಿದ್ದಿರುವ ದೆಶೆಯಲ್ಲಿ ಅವನನ್ನು ಉದ್ಧರಿಸಬೇಕೆಂದು ಪರಮಕಾರುಣಿಕನಾದ ಪರಮಾತ್ಮನು ಅತ್ಯಂತ ದಯೆಯಿಂದ ಕೂಡಿದವನಾಗಿ, ತನ್ನನ್ನು ಹೊಂದಲು ಅಡ್ಡಿಯಾಗಿರುವ ಕರ್ಮರೂಪವಾದ ದೋಷವನ್ನು ನಾಶಮಾಡಿಕೊಳ್ಳಲು ಅನುಕೂಲವಾಗುವಂತೆಯೂ, ತನ್ನನ್ನು ಆರಾಧಿಸಲು ಯೋಗ್ಯತೆಯನ್ನು ಸಂಪಾದಿಸಿಕೊಳ್ಳಲು ಸಹಕಾರಿಯಾಗುವಂತೆಯೂ, ಕರಣ ಕಳೇಬರಾದಿಗಳನ್ನು ದಯಪಾಲಿಸಿ ಅನುಗ್ರಹಿಸಬೇಕೆಂದು ಸೃಷ್ಟಿಸಂಕಲ್ಪವನ್ನು ಮಾಡಿದನು.

ಸೃಷ್ಟಿ ಎಂದರೆ ನಾಮ, ರೂಪವೆಂಬ ವಿಭಜನೆಗೆ ಅರ್ಹವಾಗುವಂತೆ ಸ್ಥೂಲಾವಸ್ಥೆಯಲ್ಲಿರುವ ಚೇತನ ಅಚೇತನಗಳನ್ನು ಶರೀರವಾಗುಳ್ಳ ಪರಬ್ರಹ್ಮನು. ಇದೇ ಪರಬ್ರಹ್ಮನ ಕಾರ್ಯಾವಸ್ಥೆ. ಸೃಷ್ಟಿಯೆಂದರೇನು, ಪ್ರಳಯವೆಂದರೇನು ಎಂಬುದರ ಅರಿವು ಸ್ಪಷ್ಟವಾಗಿರಬೇಕಾದ್ದು ಅವಶ್ಯಕ. ಚಿದಚಿತ್ತುಗಳು ನಾಮರೂಪಗಳಿಂದ ವಿಭಾಗಿಸಲ್ಪಡುವುದಕ್ಕೆ ಅರ್ಹವಾದವುಗಳಾಗಿ ಸ್ಥೂಲಾಕಾರವನ್ನು ಹೊಂದಿ ಪರಮಾತ್ಮನ ಶರೀರವಾಗಿರುವುದೇ ಸೃಷ್ಟಿ. ನಾಮರೂಪಗಳಿಂದ ವಿಭಾಗಿಸಲ್ಪಡುವುದಕ್ಕೆ ಅರ್ಹವಲ್ಲದವುಗಳಾಗಿ ಸೂಕ್ಷ್ಮದೆಶೆಯನ್ನು ಹೊಂದಿ ಪರಮಾತ್ಮನ ಶರೀರವಾಗಿರುವುದೇ ಪ್ರಳಯ. ಸೃಷ್ಟಿಯಲ್ಲೂ ಪ್ರಳಯದಲ್ಲೂ ಚಿದಚಿದಾತ್ಮಕವಾದ ಪ್ರಪಂಚವು ಇದ್ದೇ ಇರುತ್ತದೆ. ಮತ್ತು ಅದಕ್ಕೂ ಪರಬ್ರಹ್ಮನಿಗೂ ಬೇರೆಯಾಗಲಾರದ ಸಂಬಂಧವೂ ಇರುತ್ತದೆ. ಹೇಗೆಂದರೆ ಸೂರ್ಯನನ್ನು ಬಿಟ್ಟು ಅವನ ಕಾಂತಿಯು ಹೇಗೆ ಬೇರೆಯಾಗಲಾರದೋ ಹಾಗೆಯೇ ಪರಮಾತ್ಮನನ್ನು ಬಿಟ್ಟು ಚೇತನ ಅಚೇತನಗಳಿಂದ ಕೂಡಿದ ಪ್ರಪಂಚವು ಬೇರೆಯಾಗಲಾರದು. ಎಂದರೆ ಸಮಸ್ತ ವಸ್ತುಗಳಲ್ಲಿಯೂ ಪರಮಾತ್ಮನ ಸಂಬಂಧವು ಇದ್ದೇ ಇರುತ್ತದೆ. ಸೂರ್ಯನು ತನ್ನ ಕಾಂತಿಯನ್ನು ಬಿಟ್ಟು ಹೇಗೆ ಇರಲಾರನೋ ಹಾಗೆಯೇ ಪರಬ್ರಹ್ಮನು ಚೇತನಾಚೇತನಗಳಿಂದ ಕೂಡಿದ ಪ್ರಪಂಚದ ಸಂಬಂಧವನ್ನು ಬಿಟ್ಟು ಬೇರೆಯಾಗಲಾರನು. ಎಂದರೆ ಪರಮಾತ್ಮನಲ್ಲಿ ಸಮಸ್ತ ವಸ್ತುಗಳ ಸಂಬಂಧವು ಇದ್ದೇ ಇರುತ್ತದೆ. ಈ ವಿಧವಾದ ಸಂಬಂಧವನ್ನೇ ಶರೀರ ಶರೀರಿ ಸಂಬಂಧವೆನ್ನುವುದು. ಹಾಗೆಂದರೆ ಚೇತನಾಚೇತನ ಪ್ರಪಂಚವು ಶರೀರವೆಂತಲೂ ಪರಮಾತ್ಮನು ಶರೀರವನ್ನುಳ್ಳವನೆಂತಲೂ ಅರ್ಥ.

ಈ ಉಪನಿಷತ್ತಿನ ಮೊದಲನೇ ಯುಕ್ತಿನಲ್ಲಿ ಪರಬ್ರಹ್ಮನಾದ ನಾರಾಯಣನು ಸೃಷ್ಟಿಮಾಡಬೇಕೆಂದು ಸಂಕಲ್ಪಮಾಡಿರುತ್ತಾನೆ.

ಹರಿಃ ಓಮ್ ॥ ಅಥ ಪುರುಷೋ ಹ ವೈ ನಾರಾಯಣೋಽಕಾಮ
ಯತ ಪ್ರಜಾಸ್ಸೃಜೇಯೇತಿ ॥

ಅಥ — ಮಂಗಳವಾಚಕ
ಅಥ — ಅನಂತರ, ಎಂದರೆ ಪ್ರಕೃತಿಮಂಡಲವನ್ನು ಸೃಷ್ಟಿಸಿದ ತರುವಾಯ.
ಪುರುಷಃ — ಪುರುಷ ವಾಚ್ಯನಾದ
ನಾರಾಯಣೋಽಹವೈ — ಪ್ರಸಿದ್ಧನೂ, ಶ್ರೇಷ್ಠನೂ ಆದ ನಾರಾಯಣನು
ಪ್ರಜಾಸ್ಸೃಜೇಯೇತಿ — ಪ್ರಜೆಗಳನ್ನು ಸೃಷ್ಟಿಸಬೇಕೆಂದು
ಅಕಾಮಯತ — ಸಂಕಲ್ಪಮಾಡಿದನು. ಅಪೇಕ್ಷಿಸಿದನು.

ಇಲ್ಲಿ 'ಪುರುಷ' ಶಬ್ದವು ನಾರಾಯಣನ ವಿಭೂತಿಯನ್ನು ಪ್ರಕಾಶಪಡಿಸುತ್ತದೆ. 'ಪುರುಷಃ' ಎಂದರೆ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನು, ಪರಿಪೂರ್ಣನು, ವಿಶ್ವಶರೀರಿಯು, ಸರ್ವಾಂತರ್ಯಾಮಿಯು, ಅಧಿಕ ಫಲಪ್ರದನು, ಭಕ್ತರ ಪಾಪನಾಶಕನು ಇವೇ ಮೊದಲಾದ ಅನಂತ ಕಲ್ಯಾಣ ಗುಣಗಳಿಂದ ಕೂಡಿದವನು. ಆತನೇ ನಾರಾಯಣನು. ಆತನಿಂದ ಪ್ರಕೃತಿಮಂಡಲವು ಮೊದಲು ಸೃಷ್ಟಿಸಲ್ಪಟ್ಟಿತು. ಅನಂತರ ಆತನು ಪ್ರಜೆಗಳನ್ನು ಸೃಷ್ಟಿಸಬೇಕೆಂದು ಸಂಕಲ್ಪಮಾಡಿದನು. ಈ ಮಂತ್ರವು ಪರಬ್ರಹ್ಮನಾದ ಶ್ರೀಮನ್ನಾರಾಯಣನ ಅನಂತ ಕಲ್ಯಾಣ ಗುಣಗಳನ್ನು ವಿವರಿಸಿ ಆತನ ಸೃಷ್ಟಿಸಂಕಲ್ಪವನ್ನು ತಿಳಿಸುತ್ತದೆ. ಆ ಸೃಷ್ಟಿಯು ಅವನ ಸಂಕಲ್ಪದಿಂದಲೇ ನಡೆಯುತ್ತದೆ.

ಪರಬ್ರಹ್ಮನ ಸೃಷ್ಟಿಸಂಕಲ್ಪವು ಬೇರೆ ಉಪನಿಷತ್ತುಗಳಲ್ಲಿಯೂ ಅನುವಾದ ಮಾಡಲ್ಪಟ್ಟಿದೆ:—

(1) "ತತ್ಕುರುತಾತ್ಮನ್ವೀಸ್ಯಾಮ್" (ಬೃ- ಬ್ರಾಹ್ಮಣ) ಆ ಬ್ರಹ್ಮವು (ಚರಾಚರಾತ್ಮಕವಾದ) ಪ್ರಪಂಚವನ್ನು ಶರೀರವಾಗಿ ಹೊಂದುತ್ತೇನೆಂದು ಯೋಚಿಸಿತು (ಸಂಕಲ್ಪಮಾಡಿತು). ಹಾಗೆಂದರೆ ಸೂಕ್ಷ್ಮಚಿದಚಿತ್ ಶರೀರಿಯಾದ ಪರಬ್ರಹ್ಮನು ಸ್ಥೂಲಚಿದಚಿತ್ ಶರೀರಿಯಾಗುವುದಾಗಿ ಸಂಕಲ್ಪಮಾಡಿದನು. (2) "ಪ್ರಜಾಕಾಮೋ ವೈ ಪ್ರಜಾ

ಪತಿಃ" (ಪ್ರಶ್ನ 1-4) ಪರಮಾತ್ಮನು ಸೃಷ್ಟಿಮಾಡಲು ಯೋಚಿಸಿದನು. (3) "ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯೇತಿ." (ತೈ.ಆ) ಆ ಪರಮಾತ್ಮನು ಅನೇಕವಾಗಿ ಸೃಷ್ಟಿಯಾಗುವೆನು ಎಂದು ಸಂಕಲ್ಪ ಮಾಡಿದನು. (4) "ಸ ಈಕ್ಷತ ಲೋಕಾನ್ನುಸೃಜಾ ಇತಿ." (ಐ. 1. 1. 1.) ಆವನು (ಪರಬ್ರಹ್ಮನು) ಲೋಕಗಳನ್ನು ಸೃಷ್ಟಿಮಾಡುವೆನೆಂದು ಆಲೋಚಿಸಿದನು.

ಮೊದಲಿನ ಮಂತ್ರವು ಪುರುಷನಾಮಕನೂ ಪರಬ್ರಹ್ಮನೂ ಆದ ನಾರಾಯಣನು ಸೃಷ್ಟಿಸಂಕಲ್ಪ ಮಾಡಿದನೆಂದು ಹೇಳಿತು. ಪರಬ್ರಹ್ಮನು ಸೃಷ್ಟಿಸಂಕಲ್ಪ ಮಾಡಿದನಂತರ ಸೃಷ್ಟಿಮಾಡುತ್ತಾನೆಂದು ಕೆಳಗಿನ ವಾಕ್ಯಗಳು ಹೇಳುತ್ತವೆ: "ಅಸದ್ವಾ ಇದಮಗ್ರ ಆಸೀತ್ ತತೋ ವೈ ಸದಜಾಯತ." (ತೈ-ಆನಂದವಲ್ಲಿ) ಸೃಷ್ಟಿಗೆ ಮೊದಲು ನಾಮರೂಪ ಅಸತ್ತಾದ ಸೂಕ್ಷ್ಮ ಚೇತನ ಅಚೇತನಶರೀರಿಯಾದ ಪರಬ್ರಹ್ಮನು ಸೃಷ್ಟಿಯಲ್ಲಿ ನಾಮರೂಪ ವಿಭಾಗಕ್ಕೆ ತಕ್ಕ ಸ್ಥೂಲಾವಸ್ಥೆಯಲ್ಲಿರುವ ಚೇತನ ಅಚೇತನ ಶರೀರಿಯಾದನು. (1) "ಇದಗ್ಂ ಸರ್ವಮಸೃಜತ ಯದಿದಂ ಕಿಂಚ" (ತೈ-ಆ.) ಇದೆಲ್ಲವನ್ನೂ ಎಂದರೆ ಏನೇನಿದೆಯೋ ಅದೆಲ್ಲವನ್ನೂ ಸೃಷ್ಟಿಸಿದನು. (2) "ಸ ಇಮಾಲ್ಲೋಕಾನಸೃಜತ" (ಐ I.1.2.) ಪರಬ್ರಹ್ಮನು ಈ ಲೋಕಗಳನ್ನೆಲ್ಲಾ ಸೃಷ್ಟಿಸಿದನು.

ಸೃಷ್ಟಿಸಂಕಲ್ಪ ಮಾಡಿದನಂತರ ಮೊದಲು ಉಂಟಾದವಸ್ತುಗಳನ್ನು ಎರಡನೇ ಮಂತ್ರ ಹೇಳುತ್ತದೆ.

**ನಾರಾಯಣಾತ್ಪ್ರಾಣೋ ಜಾಯತೇ । ಮನಸ್ಸರ್ವೇಂದ್ರಿಯಾಣಿ ಚ । ಖಂವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ ॥**

**ನಾರಾಯಣಾತ್** = ನಾರಾಯಣನಿಂದ
**ಪ್ರಾಣಃ** = ಪ್ರಾಣವು

ಜಾಯತೇ — ಉಂಟಾಗುತ್ತದೆ
ಮನಃ — ಮನಸ್ಸು, ಚ — ಮತ್ತು
ಸರ್ವ — ಸಮಸ್ತ
ಇಂದ್ರಿಯಾಣಿ — ಇಂದ್ರಿಯಗಳೂ ( ಉಂಟಾಗುತ್ತವೆ )
ಖಂ — ಆಕಾಶ, ವಾಯುಃ — ಗಾಳಿ,
ಜ್ಯೋತಿಃ — ಅಗ್ನಿ, ತೇಜಸ್ಸು
ವಿಶ್ವಸ್ಯ — ವಿಶ್ವವ್ಯವಸ್ಥೆಯನ್ನು
ಧಾರಿಣೀ — ಧರಿಸಿರುವ
ಪೃಥಿವೀ — ಭೂಮಂಡಲವು ( ಪ್ರಕೃತಿಮಂಡಲವು ) ( ಉಂಟಾಗುತ್ತವೆ )

ಪ್ರಾಣಿಗಳ ಉತ್ಪತ್ತಿಗೆ ಬೇಕಾದ ವಸ್ತುಗಳು ಮೊದಲು ಸೃಷ್ಟವಾಗುವುವೆಂದು ಈ ಮಂತ್ರವು ಹೇಳುತ್ತದೆ. ಪ್ರಾಣಿಗಳಿಗೆ ದೇಹಧಾರಕವಾದ ಪ್ರಾಣ, ಜ್ಞಾನಸಂಪಾದನೆಗೆ ಅವಶ್ಯಕವಾದ ಮನಸ್ಸೇ ಮೊದಲಾದ ಅಂತಃಕರಣಗಳು, ಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ನಾಲಗೆ, ಮೂಗು, ಚರ್ಮ ಇವುಗಳ ಸೂಕ್ಷ್ಮರೂಪಗಳು, ಕರ್ಮೇಂದ್ರಿಯಗಳಾದ ಕೈ, ಕಾಲು, ಬಾಯಿ, ಪಾಯು, ಉಪಸ್ಥ ಇವುಗಳ ಸೂಕ್ಷ್ಮರೂಪಗಳು, ಹೀಗೆ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳಾದ ಹತ್ತು ಇಂದ್ರಿಯಗಳು ಮತ್ತು ಪಂಚಭೂತಗಳಾದ ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ ಇವುಗಳ ಸೂಕ್ಷ್ಮರೂಪಗಳು ಸೃಷ್ಟವಾಗುತ್ತವೆ.

ಈ ವಿಷಯವನ್ನೇ ಇತರ ಉಪನಿಷತ್ತುಗಳು ಹೇಳುತ್ತವೆ:—

(1) ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ ।
ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ ॥
(ಮುಂ. 1, 2, 3.)

ಪ್ರಾಣ, ಮನಸ್ಸು, ಸಮಸ್ತ ಇಂದ್ರಿಯಗಳು, ಆಕಾಶ, ವಾಯು, ಜ್ಯೋತಿಸ್ಸು, ನೀರು, ಎಲ್ಲವನ್ನು ಧರಿಸುವ ಭೂಮಿ ಇವೆಲ್ಲವೂ ಪರ

ಬ್ರಹ್ಮನಿಂದ ಉಂಟಾದವು. (2) "ಆತ್ಮನ ಏಷ ಪ್ರಾಣೋ ಜಾಯತೇ" (ಪ್ರಶ್ನ 3-3.) ಪರಮಾತ್ಮನಿಂದ ಈ ಪ್ರಾಣವು ಉಂಟಾಗುತ್ತದೆ. (3) ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ । ಆಕಾಶಾದ್ವಾಯುಃ । ವಾಯೋರಗ್ನಿಃ । ಅಗ್ನೇರಾಪಃ । ಅದ್ಭ್ಯಃ ಪೃಥಿವೀ । (ತೈ. 2. 1) ಪರಬ್ರಹ್ಮನಿಂದ ಆಕಾಶ ಉಂಟಾಯಿತು. ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ನೀರು, ನೀರಿನಿಂದ ಭೂಮಿ ಉಂಟಾದವು.

ಹಿಂದಿನ ಎರಡು ವಾಕ್ಯಗಳಲ್ಲಿ ಪರಬ್ರಹ್ಮನ ಸೃಷ್ಟಿ ಸಂಕಲ್ಪವೂ ಮೊದಲು ಸೃಷ್ಟವಾದ ವಸ್ತುಗಳೂ ಹೇಳಲ್ಪಟ್ಟವು. ಮುಂದಿನ ಮಂತ್ರವು ಪ್ರಪಂಚಸೃಷ್ಟಿಯನ್ನು ಹೇಳಿ ಪರಬ್ರಹ್ಮನಾದ ನಾರಾಯಣನೇ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನೆಂದು ತಿಳಿಸುತ್ತದೆ.

ನಾರಾಯಣಾದ್ಬ್ರಹ್ಮಾ ಜಾಯತೇ । ನಾರಾಯಣಾದ್ರುದ್ರೋ ಜಾಯತೇ । ನಾರಾಯಣಾದಿಂದ್ರೋ ಜಾಯತೇ । ನಾರಾಯಣಾತ್ಪ್ರಜಾಪತಯಃ ಪ್ರಜಾಯನ್ತೇ । ನಾರಾಯಣಾದ್ದ್ವಾದಶಾದಿತ್ಯಾ ರುದ್ರಾ ವಸವಸ್ಸರ್ವಾಣಿ ಚ ಛಂದಾಗ್ಂಸಿ । ನಾರಾಯಣಾದೇವ ಸಮುತ್ಪದ್ಯನ್ತೇ । ನಾರಾಯಣೇ ಪ್ರಲೀಯನ್ತೇ । ನಾರಾಯಣೇ ಪ್ರವರ್ತನ್ತೇ ॥

[ ಏತದೃಗ್ವೇದ ಶಿರೋಽಧೀತೇ ]

ನಾರಾಯಣಾತ್ = ನಾರಾಯಣನಿಂದ ಬ್ರಹ್ಮಾ = ಬ್ರಹ್ಮನು ಜಾಯತೇ = ಉಂಟಾಗುವನು. ನಾರಾಯಣಾತ್ = ನಾರಾಯಣನಿಂದ ರುದ್ರಃ = ರುದ್ರನು ಜಾಯತೇ = ಉಂಟಾಗುವನು. ನಾರಾಯಣಾತ್ = ನಾರಾಯಣನಿಂದ ಇಂದ್ರಃ = ಇಂದ್ರನು ಜಾಯತೇ = ಉಂಟಾಗುವನು. ನಾರಾಯಣಾತ್ = ನಾರಾಯಣನಿಂದ ಪ್ರಜಾಪತಯಃ = ಪ್ರಜಾಪತಿಗಳು ಪ್ರಜಾಯಂತೇ = ಉಂಟಾಗುವರು. ನಾರಾಯಣಾತ್ = ನಾರಾಯಣ

ನಿಂದ **ದ್ವಾದಶಾದಿತ್ಯಾಃ** = ಹನ್ನೆರಡು ಆದಿತ್ಯರು **ರುದ್ರಾಃ** = ರುದ್ರರು **ಚ** = ಮತ್ತು **ಸರ್ವಾಣಿ** = ಸಕಲವಾದ **ಛಂದಾಂಸಿ** = ವೇದಗಳೂ **(ಉಂಟಾಗುವುವು). ನಾರಾಯಣಾತ್ ಏವ** = ನಾರಾಯಣನಿಂದಲೇ **ಸಮುತ್ಪದ್ಯಂತೇ** = ಸಮಸ್ತವೂ ಉತ್ಪತ್ತಿಯಾಗುವುದು. **ನಾರಾಯಣೇ** = ನಾರಾಯಣನಲ್ಲೇ **ಪ್ರಲೀಯಂತೇ** = ಲಯವನ್ನು ಹೊಂದುತ್ತವೆ. **ನಾರಾಯಣೇ** = ನಾರಾಯಣನಲ್ಲೇ **ಪ್ರವರ್ತಂತೇ** = ಸ್ಥಿತಿಯನ್ನು ಹೊಂದುತ್ತದೆ ಎಂದರೆ ರಕ್ಷಿಸಲ್ಪಡುತ್ತದೆ.

[ಇದು ಋಗ್ವೇದಶಿರಸ್ಸಾಗಿ ಅಧ್ಯಯನಮಾಡಲ್ಪಡುತ್ತದೆ.]

ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವು ಬ್ರಹ್ಮವೆಂದು ವೇದವಾಕ್ಯಗಳು ಹೇಳುತ್ತವೆ. ನಾರಾಯಣನೇ ಆ ಬ್ರಹ್ಮವೆಂದು ಈ ಮಂತ್ರವು ನಿರ್ಧರಿಸುತ್ತದೆ. ಹಿಂದಿನ ಮಂತ್ರದಲ್ಲಿ ಪ್ರಜೆಗಳ ಸೃಷ್ಟಿಗೆ ಅವಶ್ಯಕವಾದ ವಸ್ತುಗಳನ್ನು ಸೃಷ್ಟಿಸಿದ ತರುವಾಯ ಪ್ರಜೆಗಳನ್ನು ಸೃಷ್ಟಿಸಿದನು. ಹಾಗೆ ಸೃಷ್ಟಿಸಲ್ಪಟ್ಟ ಪ್ರಜೆಗಳು ಯಾರು? ಪ್ರಪಂಚಕ್ಕೆ ಪಿತಾಮಹನೆಂದೂ, ಸೃಷ್ಟಿಕರ್ತನೆಂದೂ ಪ್ರಸಿದ್ಧನಾದ ಚತುರ್ಮುಖ ಬ್ರಹ್ಮನನ್ನು ನಾರಾಯಣನು ಮೊದಲು ಸೃಷ್ಟಿಸಿದನು. ಸೃಷ್ಟಿಕರ್ತನಾದ ಬ್ರಹ್ಮನನ್ನು ಸೃಷ್ಟಿಸಿದವನು ನಾರಾಯಣನೇ. ಆದುದರಿಂದ ಸೃಷ್ಟಿಕಾರ್ಯವು ಅವನಿಗೇ ಸೇರಿದ್ದು. ಅವನ ನಿಯಮನಾನುಸಾರ, ಅವನ ಪ್ರತಿನಿಧಿಯಾಗಿ ಬ್ರಹ್ಮನು ತನ್ನ ಕಾರ್ಯವನ್ನು ಮಾಡುತ್ತಾನೆ. ಅನಂತರ ಲಯಕರ್ತನಾದ ರುದ್ರನೂ, ತ್ರಿಲೋಕಾಧಿಪತಿಯಾದ ಇಂದ್ರನೂ, ಸೃಷ್ಟರಾದರು. ಅವರು ನಾರಾಯಣನಿಂದ ಒಂದೊಂದು ಪದವಿಯನ್ನು ಪಡೆದು ಅವನ ನಿಯಮನಾನುಸಾರ ಆಯಾ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಮತ್ತು ಒಂಬತ್ತುಮಂದಿ ಪ್ರಜಾಪತಿಗಳು, ಹನ್ನೆರಡುಮಂದಿ ಆದಿತ್ಯರು, ಹನ್ನೊಂದುಮಂದಿ ರುದ್ರರು, ಎಂಟುಮಂದಿ ವಸುಗಳು, ಇವರೆಲ್ಲರೂ ನಾರಾಯಣನಿಂದ ಉಂಟಾದವರು. ನಾಲ್ಕುವೇದಗಳೂ ಅವನಿಂದ ಸೃಷ್ಟಿಸಲ್ಪಟ್ಟವು. ಆದುದರಿಂದ ಸಕಲ

ಸೃಷ್ಟಿಗೂ ನಾರಾಯಣನೇ ಕಾರಣನೆಂದಾಯಿತು. ಕೊನೆಯಲ್ಲಿ ನಾರಾಯಣನಿಂದಲೇ ಜಗತ್ತು ಸೃಷ್ಟಿಯಾಗುವುದು, ಅವನಲ್ಲಿಯೇ ಲಯವಾಗುವುದು, ಅವನಿಂದಲೇ ರಕ್ಷಿಸಲ್ಪಡುವುದು ಎಂದು ಹೇಳುವುದರಿಂದ “ಯತೋ ವಾ ಇಮಾನಿ ಭೂತಾನಿ ಜಾಯನ್ತೇ” ಎಂಬ ತೈತ್ತಿರೀಯೋಪನಿಷತ್ತಿನ ಮಂತ್ರದಲ್ಲಿ ಹೇಳಿರುವ “ಬ್ರಹ್ಮ” ಶಬ್ದವು ನಾರಾಯಣನಿಗೆ ಅನ್ವಯವಾಗುತ್ತೆಂದು ನಿಶ್ಚಯಿಸಲ್ಪಡುತ್ತದೆ. ‘ಕಾರಣಂತು ಧ್ಯೇಯಃ’ ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ ವಸ್ತುವನ್ನೇ ಧ್ಯಾನ ಮಾಡಬೇಕೆಂಬ ವಾಕ್ಯವು ನಾರಾಯಣನಲ್ಲಿ ಸಮನ್ವಯವಾಗುತ್ತದೆ. ನಾರಾಯಣನೇ ಉಪಾಸನೆ ಮಾಡಲ್ಪಡತಕ್ಕವನೆಂದು ನಿರ್ಧರವಾಗುತ್ತದೆ.

ಮೇಲಿನ ಮಂತ್ರದಲ್ಲಿ ಹೇಳಿರುವ ವಿಷಯಗಳನ್ನು ನಿರೂಪಿಸಿ ಹೇಳಿರುವ ಇತರ ಉಪನಿಷತ್ತುಗಳು :—

(1) “ಸ ಈಕ್ಷತೇಮೇನು ಲೋಕಾ ಲೋಕಪಾಲಾನ್ನು ಸೃಜಾ ಇತಿ” (ಐ. I- 1- 3.) ಈ ಲೋಕಗಳು ಸೃಷ್ಟಿಸಲ್ಪಟ್ಟವು. ಈ ಲೋಕಗಳನ್ನು ಪಾಲನೆ ಮಾಡುವವರನ್ನು ಉಂಟುಮಾಡುವೆನೆಂದು ಆ ಪರಬ್ರಹ್ಮನು ಯೋಚಿಸಿದನು. ಇಲ್ಲಿ ಬ್ರಹ್ಮ, ರುದ್ರ, ಇಂದ್ರ ಮೊದಲಾದ ಲೋಕಪಾಲಕರ ಸೃಷ್ಟಿಯನ್ನು ಸೂಚಿಸುತ್ತದೆ. (2) “ತಸ್ಮಾಚ್ಚ ದೇವಾ ಬಹುಧಾ ಸಂಪ್ರಸೂತಾಃ ಸಾಧ್ಯಾ ಮನುಷ್ಯಾಃ.” (ಮುಂ. 2. 1. 7.) ಆ ಪರಬ್ರಹ್ಮನಿಂದ ಅನೇಕ ಪ್ರಕಾರವಾಗಿ ದೇವತೆಗಳೂ, ಸಾಧ್ಯರೂ ಮನುಷ್ಯರೂ ಉಂಟಾದರು.

ದೇವತೆಗಳಲ್ಲಿ ಮೊದಲು ಸೃಷ್ಟಿಯಾದವನು ಚತುರ್ಮುಖ ಬ್ರಹ್ಮನು. (1) “ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ” (ಮುಂ. I. 1. 1.) ದೇವತೆಗಳಲ್ಲಿ ಬ್ರಹ್ಮನು ಮೊದಲು ಸೃಷ್ಟಿಸಲ್ಪಟ್ಟನು. (2) “ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ” (ಶ್ವೇ. 6. 12.) ಪರಮಾತ್ಮನು

ಮೊದಲು ಬ್ರಹ್ಮನನ್ನು ಸೃಷ್ಟಿಸಿದನು. ಅವನಿಗೆ ವೇದಗಳನ್ನು ಉಪದೇಶ ಮಾಡಿದನು. (3) "ಯಃ ಪೂರ್ವಂ ತಪಸೋಜಾತ ಮದ್ಭ್ಯಃ ಪೂರ್ವ ಮಜಾಯತ" (ಕಠ. 4. 6.) ಜಲತತ್ತ್ವದಲ್ಲಿ ತನ್ನ ಸಂಕಲ್ಪದಿಂದ ಚತುರ್ಮುಖಬ್ರಹ್ಮನನ್ನು ಮೊದಲು ಸೃಷ್ಟಿಸಿದನು.

ವೇದಗಳು ಪರಬ್ರಹ್ಮನಿಂದಲೇ ಉಂಟಾದವು :—

(1) "ಋಚಸ್ಸಾಮಾನಿ ಜಜ್ಞಿರೇ |
ಛಂದಾಗ್ಂಸಿ ಜಜ್ಞಿರೇ ತಸ್ಮಾತ್ |
ಯಜುಸ್ತಸ್ಮಾದಜಾಯತ |" (ಪುರುಷ ಸೂಕ್ತ) ಋಗ್ವೇದ, ಸಾಮವೇದ, ಛಂದಸ್ಸು, ಯಜುರ್ವೇದಗಳು ಅವನಿಂದ ಉಂಟಾದವು. (2) "ವಾಗ್ವಿವೃತಾಶ್ಚ ವೇದಾಃ" (ಮುಂ. 2.1.4.) ಪರಮಾತ್ಮನ ವಾಕ್ಕಿನಿಂದ ವೇದಗಳು ಪ್ರಕಾಶವಾದವು. (3) "ತಸ್ಮಾದೃಚಃ ಸಾಮ ಯಜೂಂಷಿ" (ಮುಂ. 2. 1. 6.) ಪರಬ್ರಹ್ಮನಿಂದ ಋಗ್ವೇದ, ಸಾಮವೇದ, ಯಜುರ್ವೇದ ಉಂಟಾದವು.

ಸೃಷ್ಟಿ, ಸ್ಥಿತಿ, ಲಯಗಳಿಗೆ ಪರಬ್ರಹ್ಮನಾದ ನಾರಾಯಣನೇ ಕಾರಣನು :—

(1) ಯತೋ ವಾ ಇಮಾನಿ ಭೂತಾನಿ ಜಾಯಂತೇ | ಯೇನ
ಜಾತಾನಿ ಜೀವಂತಿ | ಯತ್ಪ್ರಯಂತ್ಯಭಿಸಂ ವಿಶಂತಿ |
ತದ್ವಿಜಿಜ್ಞಾಸಸ್ವ | ತದ್ಬ್ರಹ್ಮೇತಿ (ತೈ. 3.1) ಯಾವನಿಂದ ಈ ಸಮಸ್ತಭೂತಗಳೂ ಸೃಷ್ಟಿಸಲ್ಪಡುತ್ತವೋ, ಯಾವನಿಂದ ಸೃಷ್ಟಿಸಲ್ಪಟ್ಟ ಇವು ರಕ್ಷಿಸಲ್ಪಡುತ್ತವೋ, ಯಾವನಲ್ಲಿ ಪ್ರಳಯಕಾಲದಲ್ಲಿ ಇವು ಲಯವಾಗುತ್ತವೋ ಅವನನ್ನು ಅರಿಯುವನಾಗು. ಅವನೇ ಪರಬ್ರಹ್ಮನು. (2) "ಏಷಸರ್ವೇಶ್ವರ ಏಷಸರ್ವಜ್ಞ ಏಷೋಂತರ್ಯಾಮ್ಯೇಷಯೋನಿಸ್ಸರ್ವಸ್ಯ ಪ್ರಭವಾಪ್ಯಯೌಹಿಭೂತಾನಾಮ್" (ಮಾಂಡೂಕ್ಯ. 2. 4.) ಇವನು ಸಮಸ್ತಕ್ಕೂ ಈಶ್ವರನು, ಸಕಲ

ವನ್ನು ಅರಿತವನು, ಅಂತರ್ಯಾಮಿಯಾಗಿದ್ದು ಸಕಲವನ್ನೂ ನಿಯಮಿಸುವವನು. ಸಮಸ್ತಕ್ಕೂ ಕಾರಣನು. ಪ್ರಾಣಿಗಳ ಸೃಷ್ಟಿ ಲಯಗಳನ್ನು ಮಾಡುವವನು. (3) "ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನ್" (ಛಾ. 3.4) ಪರಬ್ರಹ್ಮನಿಂದ ಉಂಟಾಗುವುದರಿಂದಲೂ, ಅವನಲ್ಲೇ ಲಯವಾಗುವುದರಿಂದಲೂ, ಈ ಸ್ಥೂಲಚಿದಚಿದಾತ್ಮಕವಾದ ಪ್ರಪಂಚವು ಸೂಕ್ಷ್ಮಚಿದಚಿದಾತ್ಮಕ ಬ್ರಹ್ಮವೇ ಆಗಿರುವುದು. (4) "ಯಥೋರ್ಣನಾಭಿಸ್ಸೃಜತೇ ಗೃಹ್ಣತೇಚ....ತಥಾಕ್ಷರಾತ್ಸಂಭವತೀಹ ವಿಶ್ವಮ್" (ಮುಂ. 1.1.7) ಜೇಡರಹುಳವು ಹೇಗೆ ತನ್ನ ಶರೀರದಿಂದ ನೂಲನ್ನುಂಟುಮಾಡಿ ಪುನಃ ಹಿಂದಕ್ಕೆ ಎಳೆದುಕೊಳ್ಳುತ್ತದೆಯೋ ಹಾಗೆಯೇ ಪರಬ್ರಹ್ಮನಿಂದ ಸಮಸ್ತವೂ ಉಂಟಾಗುತ್ತದೆ ಮತ್ತು ಅವನಲ್ಲೇ ಲಯವಾಗುತ್ತದೆ. ಹೇಗೆ ತನ್ನ ಕೆಲಸದಿಂದ ಜೇಡರ ಹುಳುವಿನಲ್ಲಿ ಯಾವ ವಿಕಾರವು ಇಲ್ಲವೋ ಹಾಗೆಯೇ ಸೃಷ್ಟಿ ಲಯಗಳಿಂದ ಪರಮಾತ್ಮನು ಯಾವ ವಿಕಾರವನ್ನೂ ಹೊಂದುವದಿಲ್ಲ. (5) "ಯಃ ಸರ್ವಜ್ಞಃ ಸರ್ವವಿದ್ಯಸ್ಯ ಜ್ಞಾನಮಯಂ ತಪಃ। ತಸ್ಮಾದೇತದ್ಬ್ರಹ್ಮ ನಾಮರೂಪಮನ್ನಂಚ ಜಾಯತೇ॥" (ಮುಂ. 1.1.9.) ಸರ್ವಜ್ಞನೂ ಎಲ್ಲವನ್ನು ಪಡೆದವನೂ ಜ್ಞಾನಮಯವಾದ ಸಂಕಲ್ಪವುಳ್ಳವನೂ ಆದ ಪರಬ್ರಹ್ಮನಿಂದ ನಾಮರೂಪಾತ್ಮಕವಾದ ಪ್ರಪಂಚವು ಉಂಟಾಯಿತು. (6) "ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್" (ಶ್ವೇ. 4.10) ಆಶ್ಚರ್ಯಗುಣಚೇಷ್ಟಿತನಾದ ಪರಬ್ರಹ್ಮನು ಈ ವಿಶ್ವವನ್ನು ಸೃಷ್ಟಿಸುತ್ತಾನೆ. (7) "ಸ ಇಮಾನ್ ಲೋಕಾನಸೃಜತ" (ಐ. 1. 1.) ಆ ಪರಮಾತ್ಮನು ಈ ಎಲ್ಲಾ ಲೋಕಗಳನ್ನೂ ಸೃಷ್ಟಿಸಿದನು. (8) "ತಮಃ ಪರೇ ದೇವೇ ಏಕೀಭವತಿ" (ಸುಬಾಲ.2) ಪ್ರಕೃತಿಯು (ಪ್ರಳಯದಲ್ಲಿ) ಪರಮ ಪುರುಷನಲ್ಲಿ ಒಂದಾಗಿ ಸೇರುವುದು. (9) "ಜ್ಞಸ್ಸರ್ವಗೋ ಭುವನಸ್ಯ ಗೋಪ್ತಾ" (ಶ್ವೇ 6. 17.) ಸರ್ವಜ್ಞನೂ ಸರ್ವವ್ಯಾಪಕನೂ ಆದ ಪರಮಾತ್ಮನು ಪ್ರಪಂಚಕ್ಕೆಲ್ಲಾ ರಕ್ಷಕನು. (10) "ಪ್ರಜಾಪತಿಃ ಪ್ರಜಾ ಅಸೃಜತ" (ಯಜು.) ಪ್ರಜಾಪತಿಯಾದ ಪರಮಾತ್ಮನು ಪ್ರಜೆಗಳನ್ನು ಸೃಷ್ಟಿಸಿದನು. (11)

"ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ" (ಮುಂ. 2. 25.) ಚರಾಚರಾತ್ಮಕ ಪ್ರಪಂಚವು ಯಾವನಿಂದ ಸಂಹಾರ ಮಾಡಲ್ಪಡುತ್ತದೋ ಅವನೇ ಪರಬ್ರಹ್ಮನು.

ಸೃಷ್ಟಿಗೆ ಮೊದಲು ಪ್ರಳಯಕಾಲದಲ್ಲಿ ಸೂಕ್ಷ್ಮ ಚೇತನಾಚೇತನ ಶರೀರಿಯಾದ ಪರಬ್ರಹ್ಮನೊಬ್ಬನೇ ಇದ್ದನು. ಆಗ ಬದ್ಧಾತ್ಮರು ಕರಣ ಕಳೇಬರಾದಿಗಳು ಅಳಿದು ಅಚೇತನ ಸಮಾನರಾಗಿ ಆತನಲ್ಲಿ ಹುದುಗಿದ್ದರು. ನಿತ್ಯಮುಕ್ತರಂತೆ ನಿರತಿಶಯಾನಂದಯುಕ್ತರಾಗಿ ಉಜ್ಜೀವಿಸಲು ಅನುಕೂಲವಾಗುವಂತೆ ಪರಮಕಾರುಣಿಕನಾದ ಭಗವಂತನು ತನ್ನ ನಿರ್ಹೇತುಕಕೃಪೆಯಿಂದ ಅವರಿಗೆ ಕರಣಕಳೇಬರಾದಿಗಳನ್ನುಂಟು ಮಾಡಲು ಸೃಷ್ಟಿಸಂಕಲ್ಪವನ್ನು ಮಾಡಿದನು. ಪ್ರಜಾ ಸೃಷ್ಟಿಗೆ ಆವಶ್ಯಕವಾದ ವಸ್ತುಗಳನ್ನು ಮೊದಲು ಸೃಷ್ಟಿಸಿ ಅನಂತರ ಪ್ರಜೆಗಳನ್ನು ಸೃಷ್ಟಿ ಮಾಡಿದನು. ಸೃಷ್ಟಿಸ್ಥಿತಿಲಯಗಳಿಗೆ ಅವನೇ ಕಾರಣನು. ಹೀಗೆಂದು ಹಿಂದಿನ ಮಂತ್ರಗಳಿಂದ ನಿರ್ಣಯವಾಯಿತು.

ಹೀಗೆ ಸೃಷ್ಟನಾದ ಸಮಸ್ತ ಚೇತನಾಚೇತನಾತ್ಮಕವಾದ ಜಗತ್ತು ಆ ಪರಬ್ರಹ್ಮನಾದ ನಾರಾಯಣನೇ. ಎಂದರೆ ಆತನು ಸಮಸ್ತವನ್ನು ವ್ಯಾಪಿಸಿ ಕೊಂಡಿರುವವನು. ಅವನಿಲ್ಲದ ವಸ್ತುವೇ ಇಲ್ಲ ಎಂಬುವುದನ್ನು ಈ ಮಂತ್ರವು ತಿಳಿಸುತ್ತದೆ.

ಓಂ ಅಥ ನಿತ್ಯೋ ನಾರಾಯಣಃ | ಬ್ರಹ್ಮಾ ನಾರಾಯಣಃ | ಶಿವಶ್ಚ ನಾರಾಯಣಃ | ಶಕ್ರಶ್ಚ ನಾರಾಯಣಃ | ದ್ಯಾವಾಪೃಥಿವ್ಯೌ ಚ ನಾರಾಯಣಃ | ಕಾಲಶ್ಚ ನಾರಾಯಣಃ | ದಿಶಶ್ಚ ನಾರಾಯಣಃ | ಊರ್ಧ್ವಶ್ಚ ನಾರಾಯಣಃ | ಅಧಶ್ಚ ನಾರಾಯಣಃ | ಅನ್ತರ್ಬಹಿಶ್ಚ ನಾರಾಯಣಃ | ನಾರಾಯಣ ಏವೇದಗ್ಂ ಸರ್ವಮ್ | ಯದ್ಭೂತಂ ಯಚ್ಚ ಭವ್ಯಮ್ | ನಿಷ್ಕಲೋ ನಿರಂಜನೋ ನಿರ್ವಿಕಲ್ಪೋ ನಿರಾಖ್ಯಾತಃ ಶುದ್ಧೋ ದೇವ ಏಕೋ ನಾರಾಯಣಃ | ನ ದ್ವಿತೀಯೋಽಸ್ತಿ ಕಶ್ಚಿತ್ | ಯ ಏವಂ ವೇದ |

ಸ ವಿಷ್ಣುರೇವ ಭವತಿ । ಸ ವಿಷ್ಣುರೇವ ಭವತಿ । [ಇತ್ಯಥರ್ವ ವೇದ ಶಿರೋಽಧೀತೇ]

ನಾರಾಯಣಃ — ನಾರಾಯಣನು ಓಮ್ — ಓಂಕಾರ ಸ್ವರೂಪನು ಅಥ — ಮಂಗಳಕರನು ನಿತ್ಯಃ — ಉತ್ಪತ್ತಿ ನಾಶ ವಿಲ್ಲದವನು ಶಾಶ್ವತನು ಎಂದರೆ ಎಲ್ಲಾಕಾಲಗಳಲ್ಲೂ ಇರುವವನು. ಬ್ರಹ್ಮಾ ನಾರಾಯಣಃ — ಬ್ರಹ್ಮನು ನಾರಾಯಣನೇ, ಶಿವಶ್ಚ ನಾರಾಯಣಃ — ಶಿವನು ನಾರಾಯಣನೇ, ಶಕ್ರಶ್ಚ ನಾರಾಯಣಃ — ಇಂದ್ರನು ನಾರಾಯಣನೇ, ದ್ಯಾವಾಪೃಥಿವ್ಯೌ ಚ ನಾರಾಯಣಃ — ಅಂತರಿಕ್ಷ, ಭೂಮಿಗಳೂ ನಾರಾಯಣನೇ, ಕಾಲಶ್ಚ ನಾರಾಯಣಃ — ಕಾಲವು ನಾರಾಯಣನೇ, ದಿಶಶ್ಚ ನಾರಾಯಣಃ — ದಿಕ್ಕುಗಳು ನಾರಾಯಣನೇ, ಊರ್ಧ್ವಶ್ಚ ನಾರಾಯಣಃ — ಮೇಲುಭಾಗವೂ ನಾರಾಯಣನೇ, ಅಧಶ್ಚ ನಾರಾಯಣಃ — ಕೆಳಭಾಗವೂ ನಾರಾಯಣನೇ, ಅಂತರ್ಬಹಿಶ್ಚ ನಾರಾಯಣಃ — ಒಳಭಾಗವೂ ಹೊರಭಾಗವೂ ನಾರಾಯಣನೇ, ಇದಗ್ಂ ಸರ್ವಮ್ — ಈಗಿರುವ ಸಮಸ್ತವಸ್ತುಗಳೂ, ಯದ್ಭೂತಮ್ — ಹಿಂದಿನಕಾಲದಲ್ಲಿ ಇದ್ದವೂ, ಯಚ್ಚ ಭವ್ಯಮ್ — ಮುಂದಿನಕಾಲದಲ್ಲಿ ಇರುವವೂ, ನಾರಾಯಣ ಏವ — ನಾರಾಯಣನೇ, (ಆತನು) ನಿಷ್ಕಳಃ — ಕಳಂಕವಿಲ್ಲದವನು, ನಿರಂಜನಃ — ಪಾಪವಿಲ್ಲದವನು, ನಿರ್ವಿಕಲ್ಪಃ — ಅಜ್ಞಾನವಿಲ್ಲದವನು, ವಿಕಾರವಿಲ್ಲದವನು, ನಿರಾಖ್ಯಾತಃ — ಅವನ ಸ್ವರೂಪ ರೂಪ, ಗುಣಗಳು ಇಂಥಹವೆಂದು ನಿರ್ಣಯಿಸಿ ಹೇಳಲು ಸಾಧ್ಯವಾಗಲಾರದವನು, ಶುದ್ಧಃ — ಪವಿತ್ರನಾದವನು, ದೇವಃ — ಸ್ವಯಂಪ್ರಕಾಶನು ಈ ವಿಧವಾದ ಮಹಿಮೆಯುಳ್ಳ, ನಾರಾಯಣಃ — ನಾರಾಯಣನು ಏಕಃ — ಒಬ್ಬನೇ (ಆತನಂತೆ) ದ್ವಿತೀಯಃ — ಎರಡನೆಯವನು, ಕಶ್ಚಿತ್ — ಯಾವನೂ, ನ ಅಸ್ತಿ — ಇರುವುದಿಲ್ಲ ಯ ಏವಂ — ಈ ರೀತಿ ಯಾಗಿ, ಯಃ — ಯಾವನು, ವೇದ — ತಿಳಿಯುತ್ತಾನೆಯೋ ಸಃ — ಅವನು, ವಿಷ್ಣುಃ ಏವ — ವಿಷ್ಣುವೇ. ಭವತಿ — ಆಗುತ್ತಾನೆ,

ಸಃ ವಿಷ್ಣುಃ ಏವ ಭವತಿ — ವಿಷ್ಣುವೇ ಆಗುತ್ತಾನೆ. ಹೇಳಿದ ಅರ್ಥವನ್ನು ಮುಂದೆಷ್ಟು ನೋಡಲು ಎರಡಾವರ್ತಿ ಹೇಳಿದೆ. ಹೀಗೆ ಯಜುರ್ವೇದಶಿರಸ್ಸು ಹೇಳುತ್ತದೆ.

ಪ್ರಪಂಚದ ಸಮಸ್ತ ವಸ್ತುವು ಮೂರುವಿಧವಾದ ಮಿತಿಗೆ ಒಳಪಟ್ಟಿದೆ, ಎಂದರೆ ಮೂರುವಿಧವಾದ ಅಳತೆಯಿಂದ ನಿರ್ಣಯವಾಗುತ್ತದೆ. ಅವು ಯಾವುವೆಂದರೆ:— ದೇಶ, ಕಾಲ, ವಸ್ತು. (1) ಈ ವಸ್ತು ಈ ಸ್ಥಳದಲ್ಲಿದೆ, ಆ ಸ್ಥಳದಲ್ಲಿಲ್ಲ. ಒಂದುಕಡೆ ಇರುವ ಒಂದುವಸ್ತು ಇನ್ನೊಂದುಕಡೆ ಅದೇ ಇರುವುದಿಲ್ಲ. ವಿಂಧ್ಯ, ಗಂಗೆ, ದಕ್ಷಿಣಸಮುದ್ರ ಇತ್ಯಾದಿ. ಇವು ಇಂತಾಕಡೆ ಇಷ್ಟು ದೂರದಲ್ಲಿವೆ ಎಂಬ ಅಳತೆಗೆ ಒಳಪಟ್ಟಿವೆ. (೨) ಈ ವಸ್ತು ಆ ಕಾಲದಲ್ಲಿತ್ತು, ಈ ಕಾಲದಲ್ಲಿಲ್ಲ ಎಂಬ ಕಾಲದಿಂದ ಮಿತಿ. ದಶರಥನು ತ್ರೇತಾಯುಗದಲ್ಲಿದ್ದನು, ಈಗ ಇಲ್ಲ, ಧರ್ಮರಾಯನು ದ್ವಾಪರಯುಗದಲ್ಲಿ ಇಲ್ಲಿಂದ ಇಲ್ಲಿಯವರೆವಿಗೆ ಇದ್ದನು. ಹೀಗೆ ಇಂಥಾಕಾಲ, ಇಷ್ಟು ಕಾಲವೆಂಬ ಅಳತೆಗೆ ಸಮಸ್ತವೂ ಒಳಪಟ್ಟಿವೆ. (೩) ವಸ್ತುಗಳ ಸ್ವರೂಪದಿಂದ ನಿರ್ಣಯ: ನಾಯಿ, ಮನುಷ್ಯ, ಸರ್ಪ, ಇತ್ಯಾದಿ. ಇಲ್ಲಿ ಒಂದುವಸ್ತು ಇನ್ನೊಂದಲ್ಲ. ಈ ಮೂರು ಮಿತಿ ಅಥವ ಅಳತೆಗೆ ಎಲ್ಲಾವಸ್ತುವೂ ಸಿಕ್ಕುವುದು.

ಪರಬ್ರಹ್ಮನು ಈ ವಿಧವಾದ ಮಿತಿಇಲ್ಲದವನು. ಆತನು ಈ ಮೂರರ ಅಳತೆಗೆ ಒಳಪಡದವನು. ಆತನು ಎಲ್ಲಾಜಾಗದಲ್ಲಿಯೂ ಇದ್ದುಕೊಂಡು ಆತನಿಲ್ಲದಿರುವ ಜಾಗವೇ ಇಲ್ಲ ಎಂಬಂತೆ ಸರ್ವವ್ಯಾಪಕನಾಗಿರುವುದರಿಂದ ದೇಶದ ಮಿತಿಗೆ ಒಳಪಡುವದಿಲ್ಲ. ನಿತ್ಯನಾಗಿ ಯಾವಾಗಲೂ ಶಾಶ್ವತನಾಗಿರುವುದರಿಂದ ಆತನು ಈಕಾಲದಲ್ಲಿದ್ದನು. ಆ ಕಾಲದಲ್ಲಿರಲಿಲ್ಲವೆಂಬ ಅಳತೆಗೆ ಸಿಲುಕದವನು. ಸರ್ವಾಂತರ್ಯಾಮಿಯಾಗಿ ಎಲ್ಲಾಪದಾರ್ಥಗಳಲ್ಲೂ ಇದ್ದುಕೊಂಡಿರುವುದರಿಂದ ಆತನು ವಸ್ತುವಿನಿಂದ ಮಿತಿ ಮಾಡಲ್ಪಡಲಾಗದವನು. ಆತನಿಲ್ಲದ ಜಾಗವೂ ಇಲ್ಲ. ಆತನಿಲ್ಲದ ಕಾಲವೂ ಇಲ್ಲ. ಆತನಿಲ್ಲದ ವಸ್ತುವೂ ಇಲ್ಲ. ಎಲ್ಲಾ ವಸ್ತುವೂ ಆತನ ಶರೀರವೇ. ಆತನ ರೂಪವೇ ಎಂದಾಯಿತು.

"ಓಂ ಅಥ ನಿತ್ಯೋ ನಾರಾಯಣಃ." ಎನ್ನುವದರಿಂದ ಪ್ರಣವ ಸ್ವರೂಪನೂ, ಮಂಗಳಕರನೂ ಆದ ನಾರಾಯಣನು ನಿತ್ಯನು. ಹಾಗೆಂದರೆ ಉತ್ಪತ್ತಿ ವಿನಾಶವಿಲ್ಲದೆ ಭೂತ, ವರ್ತಮಾನ, ಭವಿಷ್ಯತ್ ಎಂಬ ಎಲ್ಲಾಕಾಲದಲ್ಲೂ ಶಾಶ್ವತನಾಗಿರುವದರಿಂದ ಆತನು ಕಾಲದ ಮಿತಿಗೆ ಒಳಪಡದವನು. "ನಾರಾಯಣ ಏವೇದಗ್ಂ ಸರ್ವಂ | ಯದ್ಭೂತಂ ಯಚ್ಚ ಭವ್ಯಮ್ |" ಎಂಬುದು ಇದನ್ನೇ ವಿವರಿಸುತ್ತದೆ. ಈಗಿರುವ ಸಮಸ್ತ ಚೇತನಾಚೇತನ ಪ್ರಪಂಚವನ್ನು ಶರೀರವಾಗಿ ಉಳ್ಳ ನಾರಾಯಣನೇ ಪ್ರಳಯಕ್ಕೆ ಮೊದಲಿದ್ದ ಪ್ರಪಂಚದಲ್ಲೂ ಹಾಗೆಯೇ ಇದ್ದು, ಮುಂದೆ ಪ್ರಳಯವಾದ ನಂತರ ಸೃಷ್ಟಿಯಾಗುವ ಪ್ರಪಂಚದಲ್ಲೂ ಇರುವನು.

ಎಲ್ಲಾ ದಿಕ್ಕುಗಳೂ ನಾರಾಯಣನೇ ಎನ್ನುವುದರಿಂದ ಆತನು ಸರ್ವವ್ಯಾಪಿಯಾಗಿ ಎಲ್ಲಾ ಸ್ಥಳಗಳಲ್ಲೂ ಇರುವಂತಹವನು. "ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ" ಎಂಬಂತೆ ಸಮಸ್ತ ವಸ್ತುಗಳ ಒಳಗೂ ಹೊರಗೂ ವ್ಯಾಪಿಸಿ ಕೊಂಡಿರುವಂತಹವನು. "ಸರ್ವಂ ವಿಷ್ಣುಮಯಂ ಜಗತ್" ಎಂಬಂತೆ ಜಗತ್ತೆಲ್ಲಾ ವಿಷ್ಣುಮಯವಾಗಿರುವದರಿಂದ, ಆತನಿಲ್ಲದ ಸ್ಥಳವೇ ಇಲ್ಲ. ಇದರಿಂದ ದೇಶದ ಮಿತಿಗೆ ಒಳಪಡದವನೆಂದು ನಿರ್ಧಾರವಾಯಿತು.

ಬ್ರಹ್ಮನು, ಶಿವನು, ಇಂದ್ರನು ನಾರಾಯಣನೇ ಎನ್ನುವುದರಿಂದ, ಅವರು ಮಾಡಬೇಕಾದ ಪ್ರಪಂಚದ ಕಾರ್ಯಗಳಿಗೆ, ಅವರ ಅಂತರ್ಯಾಮಿಯಾಗಿದ್ದುಕೊಂಡು ತಾನೇ ನಿಯಾಮಕನಾಗಿರುವನು. ಅವನಿಲ್ಲದ ಕಾಲವೇ ಇಲ್ಲದಿರುವದರಿಂದ ಕಾಲಕ್ಕೂ ಆತನೇ ಒಡೆಯನೂ ನಿಯಾಮಕನೂ ಆಗಿರುವನು.

ವಿಶ್ವರೂಪಿಯೂ, ಸರ್ವವ್ಯಾಪಕನೂ ಆದ ನಾರಾಯಣನು ಸಮಸ್ತ ವಸ್ತುಗಳಿಗೂ ಅಂತರ್ಯಾಮಿಯಾಗಿರುವುದರಿಂದ ಎಲ್ಲವೂ ಆತನಸೊತ್ತು, ಆತನು ಸ್ವಾಮಿ, ಆತನ ಸಂಕಲ್ಪಕ್ಕೆ ಅಧೀನವಾದುದು. ಆತನ ನಿಯಮಾನುಸಾರ ನಡೆಯುವಂತೆ ಮಾಡುತ್ತಿರುವನು.

ಇಂಥಾ ಭಗವಂತನಲ್ಲಿ ಯಾವ ವಿಧವಾದ ದೋಷವೂ ಇರುವುದಿಲ್ಲ. ಅಷ್ಟೇ ಅಲ್ಲದೆ ತನ್ನ ಆಶ್ರಿತರ ದೋಷವನ್ನು ನೀಗಿಸುವವನು. ಸಮಸ್ತ ವಸ್ತುಗಳ ಯಾವ ದೋಷವೂ ತನ್ನ ಹತ್ತಿರಕ್ಕೆ ಸುಳಿಯದಂತೆ ಸಮಸ್ತ ದೋಷರಹಿತನಾಗಿರುವವನು. ಹೇಗೆಂದರೆ ಪ್ರಕಾಶವು ಇರುವಕಡೆ ಕತ್ತಲೆ ಹೇಗೆ ಇರಲಾರದೋ ಹಾಗೆಯೇ ಪರಮಾತ್ಮನಲ್ಲಿ ದೋಷಗಳಿರಲಾರವು. ಆತನು ಜ್ಞಾನಾನಂದಮಯನಾದುದರಿಂದ ಅಜ್ಞಾನವು ಆತನಲ್ಲಿರಲಾರದು. ಚೇತನಾಚೇತನಗಳು ವಿಕಾರಗಳಿಗೆ ಅಧೀನವಾದವು. ಪರಮಾತ್ಮನು ವಿಕಾರವಿಲ್ಲದವನು. ಹೀಗೆ ದೋಷಗುಣಗಳಾವುವೂ ಇಲ್ಲದ, ಸಮಸ್ತ ಕಲ್ಯಾಣಗುಣಪರಿಪೂರ್ಣನಾದ ಭಗವಂತನು ಪರಿಶುದ್ಧನು, ತೇಜೋಮಯನು. ಆತನ ಸ್ವರೂಪ, ರೂಪ, ಗುಣ ವಿಭವಗಳು ಇಷ್ಟೇ ಯೆಂದಾಗಲೀ, ಇಂತಹವೇ ಯೆಂದಾಗಲೀ ನಿರ್ಣಯಿಸಿ ಹೇಳಲಸಾಧ್ಯನಾದವನು. "ಯತೋವಾಚೋ ನಿವರ್ತಂತೇ। ಅಪ್ರಾಪ್ಯ ಮನಸಾ ಸಹ" (ತೈ. ಆ.) ಪರಮಾತ್ಮನ ಆನಂದವನ್ನು ಇಷ್ಟೇ ಎಂದು ಅದರ ಅಂತವನ್ನು ಕಾಣಲು ಸಾಧ್ಯವಿಲ್ಲದೆ, ವಾಕ್ಕೂ ಮನಸ್ಸೂ ಹಿಂತಿರುಗುತ್ತವೆ. ಎಂದರೆ ಆತನ ವೈಭವವು ಯಾವ ಅಳತೆಗೂ ಸಿಲುಕಲಾರದು.

ಸಮಸ್ತ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನೂ, ವಿಶ್ವರೂಪಿಯೂ, ಸರ್ವ ವ್ಯಾಪಕನೂ, ಸರ್ವಾಂತರ್ಯಾಮಿಯೂ, ಉತ್ಪತ್ತಿ ವಿನಾಶವಿಲ್ಲದವನೂ, ನಿತ್ಯನೂ, ದೋಷರಹಿತನೂ ಸಮಸ್ತ ಕಲ್ಯಾಣ ಗುಣ ಪರಿಪೂರ್ಣನೂ ಆದ ಪರಬ್ರಹ್ಮನಾದ ನಾರಾಯಣನು ಒಬ್ಬನೇ, ಅವನಂತೆ ಎರಡನೆಯವರಿಲ್ಲ. ಇಂಥಾ ಪರಮಾತ್ಮನನ್ನು ನಿಶ್ಚಲವಾದ ಭಕ್ತಿಯಿಂದ ಕೂಡಿದವನಾಗಿ ಸತತ ಧ್ಯಾನದಿಂದ ಸಾಕ್ಷಾತ್ಕಾರ ಮಾಡಿಕೊಂಡವನು ಪರಮ ಪದವನ್ನು ಹೊಂದಿ, ಭಗವಂತನಂತೆ ಜ್ಞಾನಾನಂದವೇ ಮೊದಲಾದ ಸಕಲ ಕಲ್ಯಾಣ ಗುಣಗಳನ್ನು ಪಡೆದವನಾಗಿ ಶಂಖ, ಚಕ್ರ ಮೊದಲಾದ ಆಯುಧಗಳನ್ನು ಪಡೆದು ಆತನ ರೂಪವನ್ನೇ ಹೊಂದುವನು.

**ಇತರ ಉಪನಿಷತ್ತುಗಳ ವಾಕ್ಯಗಳು:—**

ಬ್ರಹ್ಮನೇ ಮೊದಲಾದವರಿಗೆ ಅಂತರ್ಯಾಮಿಯಾಗಿರುವವನು ನಾರಾಯಣನೇ. (1) "ಏಷ ಬ್ರಹ್ಮೈಷ ಇಂದ್ರ ಏಷ ಪ್ರಜಾಪತಿ ರೇತೇ ಸರ್ವೇ ದೇವಾಃ." ಈತನೇ (ನಾರಾಯಣನೇ) ಬ್ರಹ್ಮನು, ಇಂದ್ರನು, ಈತನೇ ಪ್ರಜಾಪತಿ, ಸಮಸ್ತ ದೇವತೆಗಳೂ ಈತನೇ. (2) "ಸ ಬ್ರಹ್ಮಾ ಸ ಶಿವಸ್ಸೇಂದ್ರಃ." (ನಾರಾಯಣ ಸೂಕ್ತ) ಬ್ರಹ್ಮ, ಶಿವ, ಇಂದ್ರ ಇವರುಗಳಿಗೆ ಅಂತರ್ಯಾಮಿಯಾಗಿರುವವನು ನಾರಾಯಣನೇ.

ಪರಬ್ರಹ್ಮನಾದ ನಾರಾಯಣನಿಗೆ ದೇಶ ಪರಿಚ್ಛೇದವಿಲ್ಲ. ಎಂದರೆ ಅವನು ಎಲ್ಲಾ ಕಡೆಯೂ ವ್ಯಾಪಿಸಿಕೊಂಡಿರುವನು :— (1) ಸ ಏವಾಧಸ್ತಾತ್ | ಸ ಉಪರಿಷ್ಟಾತ್ | ಸ ಪಶ್ಚಾತ್ ಸ ದಕ್ಷಿಣತಃ | ಸ ಉತ್ತರತಃ | ಸ ಏವೇದಂ ಸರ್ವಮಿತಿ | (ಛಾಂ 7. 25. 1) ಪರಬ್ರಹ್ಮನು ಕೆಳಗೆ, ಮೇಲೆ, ಹಿಂದೆ, ಮುಂದೆ, ಬಲಗಡೆ, ಎಡಗಡೆ, ಎಲ್ಲಾ ಕಡೆಯೂ ಸಮಸ್ತವೂ ಆಗಿ ಪ್ರಕಾಶಿಸುತ್ತಾನೆ. (3) ಬ್ರಹ್ಮೈವೇದ ಮಮೃತಂ | ಪುರಸ್ತಾದ್ಬ್ರಹ್ಮ | ಪಶ್ಚಾದ್ಬ್ರಹ್ಮ | ದಕ್ಷಿಣತಶ್ಚೋತ್ತರೇಣ | ಅಧಶ್ಚೋರ್ಧ್ವಂಚ ಪ್ರಸೃತಂ ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್ || (ಮುಂ-2-2-1) ಮೋಕ್ಷವನ್ನು ಕೊಡುವಂತಾವನು ಪರಬ್ರಹ್ಮನಾದ ನಾರಾಯಣನೇ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಮೇಲೆ, ಕೆಳಗೆ ಎಲ್ಲಾ ಕಡೆಯೂ ವ್ಯಾಪಿಸಿಕೊಂಡಿರುವವನು ಅವನೇ.

ಪರಬ್ರಹ್ಮನಾದ ನಾರಾಯಣನಿಗೆ ವಸ್ತು ಪರಿಚ್ಛೇದವಿಲ್ಲ. ಅವನು ಸಮಸ್ತ ವಸ್ತುವನ್ನು ವ್ಯಾಪಿಸಿಕೊಂಡಿದ್ದಾನೆ. 1. "ಅಂತಃ ಪ್ರವಿಷ್ಟಶ್ಶಾಸ್ತಾ ಜನಾನಾಂ ಸರ್ವಾತ್ಮಾ." (ಯಜು. 3. 24) ಸರ್ವಾತ್ಮನಾದ ಪರಬ್ರಹ್ಮನು ಸಮಸ್ತ ಜೀವಗಳಿಗೂ ಅಂತರ್ಯಾಮಿಯಾಗಿದ್ದು ನಿಯಮಿಸುತ್ತಾನೆ. (2) "ಈಶಾವಾಸ್ಯ ಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್." (ಈಶ. 1.) ಚರಾಚರಾತ್ಮಕವಾದ ಸಮಸ್ತ ಜಗತ್ತನ್ನೂ ಪರಬ್ರಹ್ಮನು ವ್ಯಾಪಿಸಿಕೊಂಡಿದ್ದಾನೆ. (3) "ಯ ಆತ್ಮಾನಮಂತ

ರೋ ಯಮಯತಿ." (ಬೃ. 3.7.22) ಪರಮಾತ್ಮನು ಅಂತರ್ಯಾಮಿಯಾಗಿದ್ದು ಜೀವಾತ್ಮರನ್ನು ನಿಯಮಿಸುತ್ತಾನೆ. (4) "ಏತದಾತ್ಮ್ಯಮಿದಗ್ಂ ಸರ್ವಮ್." (ಛಾ. 4. 8. 7) ಚರಾಚರಾತ್ಮಕ ಪ್ರಪಂಚವು ಪರಮಾತ್ಮನನ್ನು ತನ್ನ ಆತ್ಮನಾಗುಳ್ಳದ್ದು. (5) ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥ (ತೈ. ನಾ. 11. 8.) ಈ ಪ್ರಪಂಚದಲ್ಲಿ ಯಾವುದೊಂದು ಕಾಣಲ್ಪಡುತ್ತದೋ, ಯಾವುದೊಂದು ಕೇಳಲ್ಪಡುತ್ತದೋ ಆ ಸಮಸ್ತವನ್ನೂ ಪರಮಾತ್ಮನಾದ ನಾರಾಯಣನು ಒಳಗೂ ಹೊರಗೂ ವ್ಯಾಪಿಸಿಕೊಂಡಿದ್ದಾನೆ. (6) "ಸರ್ವವ್ಯಾಪಿನ ಮಾತ್ಮಾನಂ ಕ್ಷೀರೇ ಸರ್ಪಿರಿವಾರ್ಪಿತಮ್" (ಶ್ವೆ. 2. 8.) ಹಾಲಿನಲ್ಲಿರತಕ್ಕ ತುಪ್ಪದ ಹಾಗೆ ಪರಮಾತ್ಮನು ಸಮಸ್ತ ಜೀವರಾಶಿಗಳಲ್ಲೂ ಅಂತರ್ಯಾಮಿಯಾಗಿರುವನು. (7) "ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ." (ಈಶ. 5.) ಪರಬ್ರಹ್ಮನು ಸಮಸ್ತ ವಸ್ತುಗಳ ಹೊರಗೂ ಒಳಗೂ ವ್ಯಾಪಿಸಿಕೊಂಡಿರುವನು. (8) "ಸರ್ವಗತಃ ಸರ್ವಗಮ್." (ಮುಂ. 3. 2. 5.) ಎಲ್ಲಾ ವಸ್ತುಗಳಲ್ಲೂ, ಎಲ್ಲಾ ಕಡೆಯಲ್ಲೂ, ತುಂಬಿಕೊಂಡಿರುವ ಪರಮಾತ್ಮನು. (9) "ತೇನೇದಂ ಪೂರ್ಣಂ ಪುರುಷೇಣ ಸರ್ವಮ್." (ಶ್ವೆ 3. 9. 10.) ಆ ಪರಬ್ರಹ್ಮನಿಂದಲೇ ಸಮಸ್ತ ವಸ್ತುಗಳೂ ಪೂರ್ಣವಾಗಿ ವ್ಯಾಪಿಸಲ್ಪಟ್ಟಿವೆ. (10) "ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮ್." (ತೈ. ನಾ.) ಈ ಪ್ರಪಂಚದಲ್ಲಿ ಅರಿಯಬೇಕಾದವನೂ, ಸಮಸ್ತಕ್ಕೂ ಆತ್ಮನಾಗಿಯೂ, ಗತಿಯಾಗಿಯೂ ಇರುವವನು ನಾರಾಯಣನೇ (11) ಏಕೋ ದೇವಸ್ಸರ್ವಭೂತೇಷು ಗೂಢಸ್ಸರ್ವವ್ಯಾಪೀ ಸರ್ವಭೂತಾಂತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥ (ಶ್ವೇ 6. 10.) ಒಬ್ಬನೇ ಆದ ಪರಮಾತ್ಮನು ಸಮಸ್ತ ಪ್ರಾಣಿಗಳಲ್ಲೂ ಗುಪ್ತನಾಗಿದ್ದುಕೊಂಡು ಎಲ್ಲವನ್ನೂ ವ್ಯಾಪಿಸಿಕೊಂಡಿರುವನು. ಸರ್ವಾಂತರ್ಯಾಮಿ, ಕರ್ಮಗಳಿಗೆಲ್ಲಾ ನಿಯಾಮಕನು. ಸರ್ವ ಪ್ರಾಣಿಗಳಲ್ಲೂ ವಾಸಿಸುವನು, ಸಾಕ್ಷಿ

ಯಾಗಿರುವನು, ಸರ್ವಜ್ಞನು, ಅಂಥವನು ಒಬ್ಬನೇ, ಅವನು ಹೇಯ ಗುಣಗಳಿಲ್ಲದವನು.

ಪರಬ್ರಹ್ಮನಾದ ನಾರಾಯಣನಿಗೆ ಕಾಲಪರಿಚ್ಛೇದವಿಲ್ಲ. ಎಂದರೆ ಎಲ್ಲಾಕಾಲದಲ್ಲೂ ಇರುವವನು. "ಪುರುಷ ಏವೇದಗ್ಂ ಸರ್ವಮ್ । ಯದ್ಭೂತಂ ಯಚ್ಚ ಭವ್ಯಂ ।" (ಪುರುಷಸೂಕ್ತ) ಈಗ ಕಾಣುತ್ತಿರುವ ಸಮಸ್ತ ಜಗತ್ತು, ಹಿಂದಿನಕಾಲದಲ್ಲಿದ್ದದ್ದೂ ಮುಂದಿನಕಾಲದಲ್ಲಿ ಉಂಟಾಗುವುದೂ ಪರಬ್ರಹ್ಮನೇ ಎಂದರೆ ವರ್ತಮಾನ, ಭೂತ, ಭವಿಷ್ಯತ್ಕಾಲಗಳಲ್ಲಿರುವ ಜಗತ್ತಿಗೆ ಅಂತರ್ಯಾಮಿ ಯಾಗಿರುವನು.

ಕಾಲಕ್ಕೆ ನಿಯಾಮಕನು ಪರಮಾತ್ಮನು:—

(1) "ಈಶಾನಂ ಭೂತಭವ್ಯಸ್ಯ" (ಕಠ 4. 5.) ಭೂತಭವ್ಯ ಕಾಲ ನಿಯಾಮಕನು.

(2) "ಸರ್ವೇ ನಿಮೇಷಾ ಜಜ್ಞಿರೆ ವಿದ್ಯುತಃ ಪುರುಷಾದಧಿ" (ತೈ. ನಾ. 8.) ಮಿಂಚಿನಂತೆ ತೇಜೋಮಯನಾದ ಪರಮ ಪುರುಷನಿಂದ ನಿಮಿಷವೆಂದು ಹೇಳಲ್ಪಡುವ ಎಲ್ಲಾ ಕಾಲವೂ ಉಂಟಾಯಿತು.

(3) "ಸಂವತ್ಸರೋ ವೈ ಪ್ರಜಾಪತಿಃ" (ಪ್ರಶ್ನ 1.9.) ಸಂವತ್ಸರವು (ವರ್ಷ) ಪ್ರಜಾಪತಿಯಾದ ಬ್ರಹ್ಮನು-ಎಂದರೆ ಅದಕ್ಕೆ ನಿಯಾಮಕನು.

(4) "ಏತಸ್ಯವಾ ಅಕ್ಷರಸ್ಯ ಪ್ರಶಾಸನೇ, ಗಾರ್ಗಿ ನಿಮೇಷಾ ಮುಹೂರ್ತಾ ಅಹೋರಾತ್ರಾಣ್ಯರ್ಧಮಾಸಾ ಮಾಸಾ ಋತವಸ್ಸಂವತ್ಸರ ಇತಿ ವಿಧೃತಾಸ್ತಿಷ್ಠಂತಿ" ಆ ಅಕ್ಷರ ಪರಬ್ರಹ್ಮನ ಆಜ್ಞಾನುಸಾರ, ಗಾರ್ಗಿಯೇ, ನಿಮಿಷ, ಮುಹೂರ್ತ, ರಾತ್ರಿ ಹಗಲು, ಪಕ್ಷ, ತಿಂಗಳು, ಋತು, ವರ್ಷ ಇವೆಲ್ಲವೂ ಅವುಗಳ ಸ್ಥಾನದಲ್ಲಿ ನಿಂತಿರುವುವು.

ನಾರಾಯಣನಿಗೆ ಸಮಾನರಾಗಲೀ ಅಧಿಕರಾಗಲೀ ಯಾರೂ ಇಲ್ಲ :—

(1) " ಪುರುಷಾನ್ನಪರಂ ಕಿಂಚಿತ್ಸಾಕಾಷ್ಠಾ ಸಪರಾ ಗತಿಃ " ( ಕಠ. 3. 11.) ಪರಮಪುರುಷನಿಗಿಂತ ಮೇಲಾದುದು ಒಂದೂ ಇಲ್ಲ. ಅವನು ಎಲ್ಲದಕ್ಕಿಂತಲೂ ಶ್ರೇಷ್ಠನಾದವನು. ಅವನೇ ಉತ್ತಮ ಗತಿಯು.

(2) " ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ " (ಶ್ವೇ. 6.8.) ಆ ಪರಮಾತ್ಮನಿಗೆ ಸಮಾನವಾದುದೂ ಮೇಲಾದುದೂ ಯಾವುದೂ ಕಾಣಲ್ಪಡುವುದಿಲ್ಲ. (3) " ನ ತಸ್ಯ ಕಶ್ಚಿತ್ ಪತಿರ್ ಅಸ್ತಿ ಲೋಕೇ .... .... ನಚಾಸ್ಯ ಕಶ್ಚಿತ್ ಜನಿತಾ ನಚಾಧಿಪಃ " (ಶ್ವೇ. 6.9.) ಪ್ರಪಂಚದಲ್ಲಿ ಪರಮಾತ್ಮನಿಗೆ ಯಜಮಾನನು ಯಾರೂ ಇಲ್ಲ. ಅವನನ್ನು ಸೃಜಿಸಿದವನೂ ಇಲ್ಲ. ಅವನಿಗೆ ಅಧಿಕನೂ ಇಲ್ಲ.

(4) " ಯಸ್ಮಾತ್ಪರಂ ನಾಪರಮಸ್ತಿ ಕಿಂಚಿತ್ " (ಶ್ವೇ. ನಾ.) ಪರಬ್ರಹ್ಮನಿಗಿಂತ, ಉತ್ಕೃಷ್ಟವಾದುದು ಬೇರೊಂದೂ ಇಲ್ಲ. (5) ಅಥಾತ ಆದೇಶೋ ನೇತಿ ನೇತಿ ನಹ್ಯೇತಸ್ಮಾದಿತಿ ನೇತ್ಯನ್ಯತ್ ಪರಮಸ್ತಿ." (ಬೃ. 4. 6.) ಪರಮಾತ್ಮನು (ಹಿಂದೆ ವರ್ಣಿಸಿರುವ) ಅಷ್ಟು ಮಾತ್ರವೇ ಅಲ್ಲ, ಅಂಥಾ ವಸ್ತುವೇ ಇಲ್ಲ. ಆ ಪರಮಾತ್ಮನಿಗಿಂತ ಬೇರೆ ಉತ್ಕೃಷ್ಟವಾದುದೂ ಇಲ್ಲ. (9) " ಅತಃ ಪರಂ ನಾನ್ಯತ್ " (ಶ್ವೇ. ನಾ. 5) ಪರಬ್ರಹ್ಮನಿಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ.

(7) ತಂ ಈಶ್ವರಾಣಾಂ ಪರಮಂ ಮಹೇಶ್ವರಮ್ | ತಂ ದೇವತಾನಾಂ ಪರಮಂಚ ದೈವತಮ್ | ಪತಿಂ ಪತೀನಾಂ ಪರಮಂ ಪರಸ್ತಾತ್ | ವಿದಾಮ ದೇವಂ ಭುವನೇಶಂ ಈಡ್ಯಮ್ | (ಶ್ವೇ. 9. 7.) ಈಶ್ವರರೆಂದು ಹೆಸರುಪಡೆದಿರುವವರಿಗೆಲ್ಲಾ ಶ್ರೇಷ್ಠನಾಗಿ ಮಹಾ ಈಶ್ವರನಾಗಿರುವ ಭಗವಂತನಿಗೆ ಸಮಾನರಾದವರಾಗಲೀ, ಅಧಿಕರಾದವರಾಗಲೀ ಕಾಣಲ್ಪಡಲಿಲ್ಲ.

ಸ ವಿಷ್ಣುರೇವ ಭವತಿ:—

(1) ತದಾವಿದ್ವಾನ್ ಪುಣ್ಯಪಾಪೇವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ (ಮುಂ. 3.1.3.) ಆ ಪರಬ್ರಹ್ಮನನ್ನು ಸಾಕ್ಷಾತ್ಕಾರ

ಮಾಡಿದವನು ಪ್ರಕೃತಿ ಸಂಬಂಧವಿಲ್ಲದವನಾಗಿ ಪುಣ್ಯಪಾಪಗಳನ್ನು (ಒದರಿಬಿಟ್ಟು) ಬಿಟ್ಟವನಾಗಿ ಪೂರ್ಣ ಸಾಮ್ಯವನ್ನು ಹೊಂದುವನು. (2) "ಬ್ರಹ್ಮವೇದ ಬ್ರಹ್ಮೈವ ಭವತಿ" (ಮುಂ. 3.2.) ಪರಬ್ರಹ್ಮನನ್ನು ತಿಳಿದುಕೊಂಡವನು ಬ್ರಹ್ಮನಂತೆ ಆಗುತ್ತಾನೆ.

ಹಿಂದಿನ ಮಂತ್ರದಲ್ಲಿ ಪರಮಾತ್ಮನಾದ ನಾರಾಯಣನು ಯಾವಾಗಲೂ ಶಾಶ್ವತವಾಗಿರುವಂಥವನು, ಲೋಕಪಾಲಕನು ಅಂತರ್ಯಾಮಿಯಾಗಿದ್ದು ಅವರವರು ಮಾಡುವ ನಿಯಮಿತ ಕಾರ್ಯಗಳಿಗೆ ನಿಯಾಮಕನಾಗಿರುವನು. ಎಲ್ಲಾ ಸ್ಥಳಗಳಲ್ಲೂ ಇರುವನು, ಎಲ್ಲಾ ವಸ್ತುಗಳನ್ನು ವ್ಯಾಪಿಸಿಕೊಂಡಿರುವನು. ಭೂತ, ವರ್ತಮಾನ, ಭವಿಷ್ಯತ್ ಎಂಬ ಎಲ್ಲಾ ಕಾಲಗಳಲ್ಲೂ ಇರುವನು, ಕಾಲಕ್ಕೆ ನಿಯಾಮಕನು, ಯಾವವಿಧವಾದ ದೋಷಗಳೂ ಇಲ್ಲದೆ ಸಮಸ್ತ ಕಲ್ಯಾಣ ಗುಣಗಳಿಂದ ಕೂಡಿದವನು. ಇಂಥಾ ವಿಭವಗಳಿಂದ ಕೂಡಿದವನು ಪರಬ್ರಹ್ಮನಾದ ನಾರಾಯಣನು ಒಬ್ಬನೇ. ಅವನಂತೆ ಇನ್ನೊಬ್ಬನೂ ಇರುವದಿಲ್ಲ. ಇಂಥಾ ಭಗವಂತನನ್ನು ಅರಿತು ಧ್ಯಾನಮಾಡುವವನಿಗೆ ಪರಮಪದವುಂಟಾಗಿ ಅಲ್ಲಿ ಭಗವಂತನಿಗೆ ಸಮಾನವಾದ ಜ್ಞಾನಾನಂದ ಐಶ್ವರ್ಯ ಯುಕ್ತನಾಗಿರುವನು ಎಂದು ಹೇಳಿದೆ.

ಈ ಮಂತ್ರವು "ಓಂ ನಮೋ ನಾರಾಯಣಾಯ." ಎಂಬ ಅಷ್ಟಾಕ್ಷರ ಮಂತ್ರದ ವಿಭಾಗಗಳನ್ನೂ ಅವುಗಳನ್ನು ಉಚ್ಚರಿಸುವ ಕ್ರಮವನ್ನೂ, ಭಕ್ತಿ ವಿಶ್ವಾಸದಿಂದ ಈ ಮಂತ್ರವನ್ನು ಉಪಾಸನೆ ಮಾಡುವವನಿಗೆ ಉಂಟಾಗುವ ಇಹಲೋಕದ ಸುಖ ಸಂಪತ್ತನ್ನೂ ಮರಣಾನಂತರ ಉಂಟಾಗುವ ಪರಲೋಕದ ಸುಖ ಸಂಪತ್ತನ್ನೂ ವಿವರಿಸುತ್ತದೆ.

**ಓಮಿತ್ಯಗ್ರೇ ವ್ಯಾಹರೇತ್ । ನಮ ಇತಿ ಪಶ್ಚಾತ್ । ನಾರಾಯಣಾಯೇತ್ಯುಪರಿಷ್ಟಾತ್ । ಓಮಿತ್ಯೇಕಾಕ್ಷರಂ । ನಮ ಇತಿ ದ್ವೇ ಅಕ್ಷರೇ । ನಾರಾಯಣಾಯೇತಿ ಪಂಚಾಕ್ಷರಾಣಿ । ಏತದ್ವೈ ನಾರಾಯಣಸ್ಯಾಷ್ಟಾಕ್ಷರಂ ಪದಂ । ಯೋ ಹ ವೈ ನಾರಾಯಣಸ್ಯಾಷ್ಟಾ**

ಕ್ಷರಂ ಪದಮಧ್ಯೇತಿ । ಅನಪಬ್ರುವಸ್ಸರ್ವಮಾಯುರೇತಿ । ವಿಂದತೇ ಪ್ರಾಜಾಪತ್ಯಗ್ಂ ರಾಯಸ್ಪೋಷಂ ಗೌಪತ್ಯಮ್ । ತತೋಽಮೃತತ್ವಮಶ್ನುತೇ ತತೋಽಮೃತತ್ವಮಶ್ನುತ ಇತಿ । ಯ ಏವಂ ವೇದ ॥ [ಏತತ್ ಸಾಮವೇದ ಶಿರೋಽಧೀತೇ]

ಓಮ್ ಇತಿ = ಓಮ್ ಎಂದು ಅಗ್ರೇ = ಮೊದಲು ವ್ಯಾಹರೇತ್ = ಹೇಳತಕ್ಕದ್ದು ಪಶ್ಚಾತ್ = ಅನಂತರ ನಮಃ ಇತಿ = ನಮಃ ಎಂದು (ಹೇಳಬೇಕು) ಉಪರಿಷ್ಟಾತ್ = ಅದಾದಮೇಲೆ ನಾರಾಯಣಾಯ ಇತಿ = ನಾರಾಯಣಾಯ ಎಂದು ಹೇಳಬೇಕು. ಓಮ್ ಇತಿ = ಓಮ್ ಎನ್ನುವದು ಏಕಾಕ್ಷರಮ್ = ಒಂದೇ ಅಕ್ಷರವು ನಮ ಇತಿ = ನಮಃ ಎನ್ನುವದು ದ್ವೇ ಅಕ್ಷರೆ = ಎರಡು ಅಕ್ಷರಗಳು ನಾರಾಯಣಾಯ ಇತಿ = ನಾರಾಯಣಾಯ ಎನ್ನುವದು ಪಂಚಾಕ್ಷರಾಣಿ = ಐದು ಅಕ್ಷರಗಳು ಏತತ್ = ಇದೇ ನಾರಾಯಣಸ್ಯ = ನಾರಾಯಣನ ಅಷ್ಟಾಕ್ಷರಮ್ = ಎಂಟು ಅಕ್ಷರವಿರುವ ಪದಮ್ = ಪದವು (ಓಂ ನಮೋ ನಾರಾಯಣಾಯ) ಯಃ = ಯಾವನು ಹವೈ = ಶ್ರೇಷ್ಠನಾದ ನಾರಾಯಣಸ್ಯ = ನಾರಾಯಣನ ಅಷ್ಟಾಕ್ಷರಂ ಪದಮ್ = (ಓಂ ನಮೋ ನಾರಾಯಣಾಯ ಎಂಬ) ಎಂಟುಅಕ್ಷರದ ಪದವನ್ನು ಅಧ್ಯೇತಿ = ಪಠಣಮಾಡುತ್ತಾನೋ (ಅವನು) ಅನಪಬ್ರುವಃ = ಅನಿಂದಿತವಾದ ಹೊಗಳಿಕೆಯುಳ್ಳವನಾಗಿ ಸರ್ವಮಾಯುಃ ಏತಿ = ಪೂರ್ಣಾಯುಸ್ಸನ್ನು ಹೊಂದುತ್ತಾನೆ. ಪ್ರಾಜಾಪತ್ಯಮ್ = ಜನಗಳಮೇಲೆ ಅಧಿಕಾರವನ್ನೂ ರಾಯಸ್ಪೋಷಮ್ = ಸಮೃದ್ಧಿಯಾದ ಐಶ್ವರ್ಯವನ್ನೂ ಗೌಪತ್ಯಮ್ = ಗೋ, ಧನ ಧಾನ್ಯ ಸಮೃದ್ಧಿಯನ್ನೂ ವಿಂದತೆ = ಪಡೆಯುತ್ತಾನೆ ತತಃ = ಅನಂತರ (ಎಂದರೆ ಮರಣಾನಂತರ) ಅಮೃತತ್ವಮ್ = ಮರಣವಿಲ್ಲದಿರುವಿಕೆ ಎಂದರೆ ಮೋಕ್ಷವನ್ನು ಅಶ್ನುತೇ = ಹೊಂದುತ್ತಾನೆ ತತಃ = ಅನಂತರ ಅಮೃತತ್ವಮ್ = ಮೋಕ್ಷವನ್ನು ಅಶ್ನುತೇ = ಹೊಂದುತ್ತಾನೆ ಇತಿ = ಹೀಗೆಂದು ಕೊನೆಯಾ

ಗುತ್ತದೆ. ಯಃ = ಯಾವನು ಏವಮ್ = ಈ ಪ್ರಕಾರವಾಗಿ ವೇದ = ಅರಿಯುತ್ತಾನೋ ಅವನು ಮೇಲೆಹೇಳಿದ ಫಲಗಳನ್ನು ಪಡೆಯುತ್ತಾನೆ.

ಎಂಟು ಅಕ್ಷರಗಳುಳ್ಳ ಪದವಾದ "ಓಂ ನಮೋ ನಾರಾಯಣಾಯ" ಎಂಬ ಮಂತ್ರದ ವಿಚಾರವನ್ನು ಮೇಲಿನ ಋಕ್ಕು ತಿಳಿಸುತ್ತದೆ. ಈ ಪದದಲ್ಲಿ ಮೂರು ಭಾಗಗಳಿವೆ. 'ಓಂ' ಎಂಬುದೇ ಮೊದಲನೆಯ ಭಾಗ, "ನಮಃ" ಎಂಬುದು ಎರಡನೆಯದು, "ನಾರಾಯಣಾಯ" ಎಂಬುದು ಮೂರನೆಯ ಭಾಗ. ಮೊದಲನೆಯದರಲ್ಲಿ ಒಂದು ಅಕ್ಷರ, ಎರಡನೆಯದರಲ್ಲಿ ಎರಡು ಅಕ್ಷರ, ಮೂರನೆಯದರಲ್ಲಿ ಐದು ಅಕ್ಷರಗಳಿವೆ. ಅವು ಮೂರು ಒಟ್ಟಾಗಿಸೇರಿದರೆ "ಓಂ ನಮೋ ನಾರಾಯಣಾಯ" ಎಂಬ ಅಷ್ಟಾಕ್ಷರ ಮಂತ್ರವಾಗುತ್ತದೆ. ಅದು ಅತ್ಯಂತ ಶ್ರೇಷ್ಠವಾದ ಮಂತ್ರವು. ಹೇಗೆಂದರೆ ಮಂತ್ರಗಳಲ್ಲಿ ಅದು ಅತ್ಯಂತ ಮಹತ್ವ ಉಳ್ಳದ್ದು, ರಹಸ್ಯಗಳಲ್ಲಿ ಅತ್ಯಂತ ರಹಸ್ಯವಾದುದು, ಪವಿತ್ರವಾದವುಗಳಿಗೂ ಪವಿತ್ರವಾದುದು ಎಂದು ವಿಷ್ವಕ್ಸೇನಸಂಹಿತೆ ಹೇಳುತ್ತದೆ. ತಿಳಿದುಕೊಳ್ಳಬೇಕಾದ ಸಮಸ್ತ ಅರ್ಥವೂ ಅಷ್ಟಾಕ್ಷರಮಂತ್ರದಲ್ಲಿ ಅಡಗಿದೆ ಎಂದರೆ ವೇದ ಸ್ಮೃತಿ, ಇತಿಹಾಸ ಪುರಾಣಗಳಲ್ಲಿ ತನ್ನ ಶ್ರೇಯಸ್ಸಿಗಾಗಿ ಮನುಷ್ಯನು ಅವಶ್ಯಕವಾಗಿ ತಿಳಿದುಕೊಳ್ಳಬೇಕಾದುದೆಲ್ಲಾ ಈ ಮಂತ್ರದಲ್ಲಿ ಅಡಗಿರುವುದರಿಂದ ಅದು ಅತ್ಯಂತ ಮಹತ್ವವುಳ್ಳದ್ದೆಂದು ಹೇಳಿದೆ. ಅದರ ಮಹಿಮೆಗೆ ತಕ್ಕ ಗೌರವದಿಂದಲೂ ಭಕ್ತಿ ವಿಶ್ವಾಸದಿಂದಲೂ ಅದನ್ನು ಅನುಸಂಧಾನಮಾಡಬೇಕು. ಅನುಸಂಧಾನವೆಂದರೆ ಮಂತ್ರದ ಅರ್ಥ ವಿಮರ್ಶೆ ಮಾಡಿಕೊಂಡು ಏಕಾಗ್ರಚಿತ್ತನಾಗಿದ್ದು ಮಾಡುವ ಭಗವನ್ಮಂತ್ರದ ಧ್ಯಾನ. ಮಂತ್ರದ ಧ್ಯಾನವು ಫಲಕಾರಿಯಾಗಬೇಕಾದರೆ ಮಂತ್ರದಲ್ಲೂ, ಮಂತ್ರದಲ್ಲಿ ಹೇಳುವ ಭಗವಂತನಲ್ಲೂ, ಮಂತ್ರವನ್ನು ಉಪದೇಶಮಾಡಿದ ಗುರುವಿನಲ್ಲೂ ಅತಿಶಯವಾದ ಭಕ್ತಿವಿಶ್ವಾಸ ಉಂಟಾಗಿರಬೇಕು. ಈ ಪ್ರಕಾರ ಈ ಮಂತ್ರವನ್ನು ಧ್ಯಾನ ಮಾಡುವವನಿಗೆ ಇಹಲೋಕದಲ್ಲಿ ಮನುಷ್ಯನು ಅಪೇಕ್ಷೆಪಡಬಹುದಾದ ಸುಖ ಸಂಪತ್ತುಗಳು

ಉಂಟಾಗುವುವು. ಆರೋಗ್ಯದಿಂದ ಕೂಡಿದ ಪೂರ್ಣ ಆಯುಸ್ಸು, ಅನಿಂದಿತವಾದ ಯಶಸ್ಸು, ಪ್ರಜೆಗಳಮೇಲೆ ಯಾಜಮಾನ್ಯ, ಸಮೃದ್ಧಿಯಾದ ಐಶ್ವರ್ಯ ಎಂದರೆ ಗೋ ಧನಧಾನ್ಯಸಮೃದ್ಧಿ ಇವೇ ಮುಂತಾದವು ಉಂಟಾಗುತ್ತವೆ. ಇವುಗಳನ್ನೆಲ್ಲಾ ತೃಪ್ತಿಯಾಗಿ ಅನುಭವಿಸಿದಮೇಲೆ ಮರಣಾನಂತರ ಮೋಕ್ಷವು ಉಂಟಾಗುತ್ತದೆ.

ಇತರ ಉಪನಿಷತ್ತಿನ ವಾಕ್ಯಗಳು :—

(1) ಯಸ್ಸೇತುರೀಜಾನಾನಾಮಕ್ಷರಂ ಬ್ರಹ್ಮಯತ್ಪರಮ್ । ಅಭಯಂತಿತೀರ್ಷತಾಂ ಪಾರಂ ನಾಚಿಕೇತಂಶಕೇಮಹಿ ॥ (ಕಠ 1.3.2) ಪರಮಾತ್ಮನು ತನ್ನನ್ನು ಆರಾಧಿಸುವ ಜ್ಞಾನಿಗಳಿಗೆ ಸರ್ವಾಭೀಷ್ಟಪ್ರದನು, ನಿರ್ವಿಕಾರನಾದ ಪರಬ್ರಹ್ಮಸ್ವರೂಪನು. ಮುಮುಕ್ಷುಗಳಿಗೆ ಮೋಕ್ಷವನ್ನು ದಯಪಾಲಿಸುವ ಪರಮಾತ್ಮನು ಅಂಥ ನಾಚಿಕೇತಾಗ್ನಿ ಉಪಾಸಕರಿಗೆ ಪ್ರತ್ಯಕ್ಷನಾಗುವ ನಾರಾಯಣನನ್ನು ಉಪಾಸನೆ ಮಾಡಲು ನಾವು ಶಕ್ತರು.

(2) "ಯ ಏತದ್ವಿದುರಮೃತಾಸ್ತೇ ಭವಂತಿ" (ಬೃ. 4.14) ಯಾವ ಉಪಾಸಕರು ಪರಮಾತ್ಮನಾದ ನಾರಾಯಣನನ್ನು ತಿಳಿದಿರುತ್ತಾರೋ ಅವರು ಶಾಶ್ವತ ಪದವಿಯನ್ನು ಹೊಂದತಕ್ಕವರಾಗುವರು.

(3) "ಏಷಹ್ಯೇವಾನಂದಯಾತಿ" (ತೈ.) ತನ್ನನ್ನು ಆರಾಧಿಸಿದ ಸೇವಕನನ್ನು ಪರಮಾತ್ಮನಾದ ನಾರಾಯಣನು ವಿಶೇಷವಾಗಿ ಆನಂದಿಸುವನು, (ಎಂದರೆ ಇಹಲೋಕದ ಮತ್ತು ಪರಲೋಕದ ಆನಂದವನ್ನುಂಟುಮಾಡುತ್ತಾನೆ.)

(4) "ಸ ಖಲ್ವೇವಂ ವರ್ತಯನ್ಯಾವದಾಯುಷಂ ಬ್ರಹ್ಮಲೋಕಮಭಿಸಂಪದ್ಯತೇ" (ಛಾ. 8.15.1) ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆಯುಳ್ಳ ಉಪಾಸಕನು ಜ್ಞಾನ ಭಕ್ತಿ ವೈರಾಗ್ಯಗಳಿಂದ ಕೂಡಿದವನಾಗಿ ಭಗವದುಪಾಸನೆಯನ್ನು ಮಾಡಿ, ತನ್ನ ಪೂರ್ಣಾಯುಸ್ಸನ್ನು

ಭೂಲೋಕದಲ್ಲಿ ಕಳೆದು ತರುವಾಯ ಪರಮಪದವನ್ನು ಸೇರುವನು.

(5) ನ ಕರ್ಮಣಾ ನ ಪ್ರಜಯಾ ಧನೇನ
ತ್ಯಾಗೇನೈಕೇ ಅಮೃತತ್ವಮಾನಶುಃ |
ಪರೇಣ ನಾಕಂ ನಿಹಿತಂ ಗುಹಾಯಾಂ
ವಿಭ್ರಾಜತೇ ಯದ್ಯತಯೋ ವಿಶಂತಿ || (ತೈ. ನಾ.)

ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಕೂಡಿದವರು, ಉತ್ಸಾಹದಿಂದ ಪ್ರಯತ್ನಪಟ್ಟು ಪಡೆಯುವಂಥಾ ಮೋಕ್ಷವು ದೇವಲೋಕಗಳಿಗೆ ಮೇಲುಗಡೆ ಇತರರಿಗೆ ಪ್ರವೇಶಿಸಲಾಗದ ಕಡೆ ಪ್ರಕಾಶಮಾನವಾಗಿರುವುದು. ಆ ಮೋಕ್ಷವು ಯಜ್ಞಯಾಗಾದಿ ಕರ್ಮಗಳಿಂದಾಗಲೀ, ಮಕ್ಕಳನ್ನು ಪಡೆಯುವದರಿಂದಾಗಲೀ, ಐಶ್ವರ್ಯದಿಂದಾಗಲೀ ಪಡೆಯಲಾಗುವುದಿಲ್ಲ. ನಾರಾಯಣನಿಗೆ ಶರಣಾಗತಿಮಾಡಿ ಅಚಂಚಲವಾದ ಮನಸ್ಸಿನಿಂದ ಆತನನ್ನೇ ಧ್ಯಾನಮಾಡುವಂತಾ ಭಕ್ತರಿಗೆ ಮೋಕ್ಷವು ಲಭಿಸುವುದು.

(6) " ತಮೇವಂ ವಿದ್ವಾನಮೃತ ಇಹಭವತಿ ;
ನಾನ್ಯಃ ಪಂಥಾ ಅಯನಾಯ ವಿದ್ಯತೇ || (ಪು. ಸೂಕ್ತ)

ಪರಮಾತ್ಮನಾದ ನಾರಾಯಣನನ್ನು ಧ್ಯಾನದಿಂದ ಸಾಕ್ಷಾತ್ಕಾರ ಮಾಡಿದವನು ಈಜನ್ಮದಲ್ಲಿಯೇ ಮುಕ್ತಿಯನ್ನು ಪಡೆಯುತ್ತಾನೆ. ಮೋಕ್ಷ ಹೊಂದಲು ಬೇರೆ ಯಾವ ದಾರಿಯೂ ಇಲ್ಲ.

ಮೊದಲನೇ ಮೂರುಭಾಗದ ಮಂತ್ರಗಳಲ್ಲಿ ಹೇಳಿರುವ ಸಾರಾಂಶವೇನೆಂದರೆ :—

ಜೀವಾತ್ಮನು ಮೋಕ್ಷವನ್ನು ಪಡೆದು ಪರಮ ಪದದಲ್ಲಿರುವ ನಿತ್ಯ ಮತ್ತು ಮುಕ್ತರಂತೆ ಪರಮಾತ್ಮನ ಸೇವೆಯಲ್ಲಿ ನಿರತನಾಗಿ ಬ್ರಹ್ಮಾನಂದವನ್ನು ಅನುಭವಿಸಲು ಅರ್ಹನಾದವನು. ಅಂಥಾ ಬದ್ಧಜೀವನು ಪ್ರಳಯಕಾಲದಲ್ಲಿ ಕರಣಕಳೇಬರಾದಿಗಳಿಲ್ಲದೆ ಅಚೇತನಕ್ಕೆ

ಸಮಾನನಾಗಿ ಪರಮಾತ್ಮನಲ್ಲಿ ಹುದುಗಿದ್ದನು, ಸೃಷ್ಟಿ ಸ್ಥಿತಿ ಲಯಗಳ ಕಾರಣನೂ, ಸಮಸ್ತ ಕಲ್ಯಾಣಗುಣಗಣ ಪರಿಪೂರ್ಣನೂ, ಸರ್ವಾಂತರ್ಯಾಮಿಯೂ, ಪರಬ್ರಹ್ಮನೂ ಆದ ನಾರಾಯಣನು, ಬದ್ಧ ಚೇತನನನ್ನು ಕಷ್ಟದೆಸೆಯಿಂದ ಉದ್ಧಾರ ಮಾಡಬೇಕೆಂದು ಅತ್ಯಂತ ದಯೆಯಿಂದ ಬದ್ಧಾತ್ಮನು ತನ್ನನ್ನು ಪಡೆಯಲು ಅಡ್ಡಿಯಾಗಿರುವ ಕರ್ಮರೂಪವಾದ ದೋಷವನ್ನು ನಾಶಮಾಡಿಕೊಳ್ಳಲು ಅನುಕೂಲವಾಗುವಂತೆಯೂ ತನ್ನನ್ನು ಆರಾಧಿಸಲು ಯೋಗ್ಯತೆ ಸಂಪಾದಿಸಿಕೊಳ್ಳಲು ಸಹಕಾರಿಯಾಗುವಂತೆಯೂ ಆತ್ಮನಿಗೆ ಕರಣಕಳೇಬರಾದಿಗಳನ್ನು ದಯಪಾಲಿಸಿ ಅನುಗ್ರಹಿಸಬೇಕೆಂದು ಸಂಕಲ್ಪಮಾಡಿದನು. ಹಾಗೆ ಮಾಡಿದ ಸಂಕಲ್ಪ ಮಾತ್ರದಿಂದಲೇ ಚೇತನಾಚೇತನದಿಂದ ಕೂಡಿದ ಜಗತ್ತನ್ನು ಸೃಷ್ಟಿ ಮಾಡಿದನು. ಸೃಷ್ಟರಾದ ಬ್ರಹ್ಮ, ಶಿವ, ಇಂದ್ರನೇ ಮುಂತಾದ ಲೋಕಪಾಲಕರಿಗೆ ಸ್ಥಾನಗಳನ್ನು ನಿರ್ಮಿಸಿ ಆಯಾ ಸ್ಥಾನಗಳಿಗೆ ತಕ್ಕ ಕಾರ್ಯಗಳನ್ನು ನಿಯಮಿಸಿ ಅವರೊಳಗೆ ತಾನೇ ಅಂತರ್ಯಾಮಿಯಾಗಿದ್ದುಕೊಂಡು ತನ್ನ ಆಜ್ಞಾನುಸಾರ ಅವರಿಂದ ಕೆಲಸ ಮಾಡಿಸುತ್ತಾನೆ. ಆತನು ಸಮಸ್ತವನ್ನೂ ಹೊರಗೂ ಒಳಗೂ ವ್ಯಾಪಿಸಿಕೊಂಡು ಮೂರು ಕಾಲಗಳಲ್ಲೂ ಶಾಶ್ವತನಾಗಿದ್ದುಕೊಂಡಿರುವುದಲ್ಲದೆ ಆತನೇ ಕಾಲಕ್ಕೂ ನಿಯಾಮಕನಾಗಿದ್ದಾನೆ. ಪ್ರಪಂಚವೇ ಶರೀರವಾಗುಳ್ಳವನು. ಯಾವ ದೋಷಗುಣವೂ ಇಲ್ಲದವನಾಗಿ ಸಮಸ್ತ ಕಲ್ಯಾಣಗುಣಗಣಪರಿಪೂರ್ಣನು. ಇಂತಹ ಅದ್ಭುತ ಮಹಿಮೆಯಿಂದ ಕೂಡಿದವನು ನಾರಾಯಣನು ಒಬ್ಬನೇ. ಆತನಂತೆ ಎರಡನೆಯವನೊಬ್ಬನೂ ಇಲ್ಲ. ಇಷ್ಟು ವೈಭವದಿಂದ ಕೂಡಿದ ನಾರಾಯಣ ಅಷ್ಟಾಕ್ಷರವಾದ 'ಓಂ ನಮೋ ನಾರಾಯಣಾಯ' ಎಂಬ ಮಂತ್ರವನ್ನು ಅಚಂಚಲವಾದ ಮನಸ್ಸಿನಿಂದ ಭಕ್ತಿಪೂರ್ವಕ ಜಪ ಮಾಡುವ ಚೇತನನಿಗೆ ಇಹಲೋಕದಲ್ಲಿ ಪೂರ್ಣ ಆಯುಸ್ಸೂ, ಸಮಸ್ತ ಸಂಪತ್ತೂ ಲಭಿಸುತ್ತದೆ, ಮರಣಾನಂತರ ಮೋಕ್ಷವನ್ನು ಪಡೆಯುತ್ತಾನೆ.

ನಾಲ್ಕನೇ ಭಾಗದ ಈ ಮಂತ್ರದಲ್ಲಿ ಓಂಕಾರದ ವೈಭವವನ್ನೂ ಅಷ್ಟಾಕ್ಷರಿಮಂತ್ರದ ಮಹಿಮೆಯನ್ನೂ ವಿವರಿಸಿ ಅವುಗಳ ಉಪಾಸನೆ

ಯಿಂದ ಸಂಸಾರದಿಂದ ಬಿಡುಗಡೆಯನ್ನು ಹೊಂದಿ ನಾರಾಯಣನ ಪರಮ ಪದವಾದ ವೈಕುಂಠವು ಲಭಿಸುವುದೆಂದು ಹೇಳುತ್ತದೆ,

ಪ್ರತ್ಯಗಾನಂದಂ ಬ್ರಹ್ಮಪುರುಷಂ ಪ್ರಣವಸ್ವರೂಪಮ್ | ಅಕಾರ ಉಕಾರ ಮಕಾರ ಇತಿ | ತಾನೇಕಧಾ ಸಮಭರತ್ತದೇತದೋಮಿತಿ | ಯಮುಕ್ತ್ವಾ ಮುಚ್ಯತೇ ಯೋಗೀ ಜನ್ಮಸಂಸಾರಬಂಧನಾತ್ | ಓಂ ನಮೋ ನಾರಾಯಣಾಯೇತಿ ಮಂತ್ರೋಪಾಸಕಃ | ವೈಕುಂಠಭುವನಲೋಕಂ ಗಮಿಷ್ಯತಿ | ತದಿದಂ ಪರಂ ಪುಂಡರೀಕಂ ವಿಜ್ಞಾನಘನಮ್ | ತಸ್ಮಾತ್ತದಿದಾವನ್ಮಾತ್ರಮ್*| ಬ್ರಹ್ಮಣ್ಯೋ ದೇವಕೀಪುತ್ರೋಮ್ ಬ್ರಹ್ಮಣ್ಯೋ ಮಧುಸೂದನೋಮ್ | ಸರ್ವಭೂತಸ್ಥಮೇಕಂ ನಾರಾಯಣಮ್ | ಕಾರಣರೂಪಮಕಾರ ಪರಬ್ರಹ್ಮೋಮ್ | ಏತದಥರ್ವಶಿರೋಯೋಽಧೀತೇ ||

ಪ್ರತ್ಯಗಾನಂದಂ = ಸ್ವಪ್ರಕಾಶನಾಗಿಯೂ ಆನಂದರೂಪಿಯಾಗಿಯೂ, ಬ್ರಹ್ಮಪುರುಷಂ = ಪುರುಷ ಶಬ್ದದಿಂದ ಹೇಳಲ್ಪಡುವ ಪರಬ್ರಹ್ಮನನ್ನು ಪ್ರಣವಸ್ವರೂಪಂ = ಪ್ರಣವವೆಂಬ ಓಂಕಾರವು ಪ್ರತಿಪಾದನೆ ಮಾಡುವುದು- ಅಕಾರ ಉಕಾರ ಮಕಾರ ಇತಿ = ಆ ಪ್ರಣವವು ಅ, ಉ, ಮ ಎಂಬ ಮೂರು ಅಕ್ಷರಗಳಾಗಿರುವುವು ತಾನ್ = ಆ ಮೂರು ಅಕ್ಷರಗಳನ್ನು ಏಕಧಾ = ಒಟ್ಟಿಗೆ ಸಮಭರತ್ = (ಪರಮಾತ್ಮನು) ಸೇರಿಸಿದನು. ತತ್ = ಆದುದರಿಂದ ಏತತ್ = ಈ ಮೂರು ಅಕ್ಷರಗಳ ಸಮುದಾಯವು ಓಂ ಇತಿ = ಓಂ ಎಂಬ ಪ್ರಣವರೂಪವಾಗಿರುತ್ತದೆ ಯಂ = ಆ ಪ್ರಣವವನ್ನು ಯೋಗೀ = ಪರಮಾತ್ಮ ಉಪಾಸಕನಾದ ಯೋಗಿಯು ಉಕ್ತ್ವಾ = ಜಪಮಾಡುವುದರಿಂದ ಜನ್ಮಸಂಸಾರಬಂಧನಾತ್ = ಹುಟ್ಟುಸಾವೆಂಬ ಸಂಸಾರದ

* ಪಾಠಾಂತರದ 'ತಟಿದಾಭಮಾತ್ರಮ್' = ಮಿಂಚಿನಂತೆ ಪ್ರಕಾಶವಾದನು.

ಕಟ್ಟಿನಿಂದ **ವಿಮುಚ್ಯತೇ** — ಬಿಡುಗಡೆ ಹೊಂದುತ್ತಾನೆ. **ಓಂ ನಮೋ ನಾರಾಯಣಾಯ** — ಓಂ ನಮೋ ನಾರಾಯಣಾಯ ಎಂಬ **ಮಂತ್ರೋಪಾಸಕಃ** — ಮಂತ್ರವನ್ನು ಉಪಾಸನೆ ಮಾಡುವವನು **ವೈಕುಂಠಭುವನಲೋಕಮ್** — ನಾರಾಯಣನ ಪರಮಪದವಾದ ವೈಕುಂಠಲೋಕಕ್ಕೆ **ಗಮಿಷ್ಯತಿ** — ಹೋಗುತ್ತಾನೆ. **ತತ್** — ಆದುದರಿಂದ **ಇದಂ** — ಉಪಾಸಕನ **ಪುರಂ** — ಶ್ರೇಷ್ಠವಾದ **ಪುಂಡರೀಕಂ** — ಹೃದಯಕಮಲವೆಂಬುದು **ವಿಜ್ಞಾನಘನಂ** — ಕೇವಲಜ್ಞಾನಸ್ವರೂಪನೇ ಆಗಿರುವ ಭಗವಂತನಿಗೆ ಆಧಾರಭೂತವಾಗಿರುವುದು **ತಸ್ಮಾತ್** — ಆದುದರಿಂದ **ತತ್** — ಅಂತರ್ಯಾಮಿಯಾದ ಪರಮಾತ್ಮನು **ಆವನ್ ಮಾತ್ರಂ ಇತ್** ॥ ರಕ್ಷಣೆಮಾಡುವವನೇ ಆಗುತ್ತಾನೆ. **ಬ್ರಹ್ಮಣ್ಯಃ** — ಪರಬ್ರಹ್ಮನು **ದೇವಕೀಪುತ್ರಃ** — ದೇವಕಿಯ ಮಗನಾದ ಶ್ರೀಕೃಷ್ಣಪರಮಾತ್ಮನೇ ಆಗಿರುವನು **ಬ್ರಹ್ಮಣ್ಯಃ** — ಪರಬ್ರಹ್ಮನು **ಮಧುಸೂದನಃ** — ಮಧುವೆಂಬ ರಾಕ್ಷಸನನ್ನು ನಾಶಮಾಡಿದವನು ಎಂದರೆ ಜ್ಞಾನಕ್ಕೆ ಉಂಟಾಗುವ ಪ್ರತಿಬಂಧಕವನ್ನು ಹೋಗಲಾಡಿಸುವಂತಹವನು. **ಓಮ್** — ಓಂ ಎಂಬ ಪ್ರಣವದಲ್ಲಿರುವ **ಅಕಾರ** — ಅಕಾರವೆಂಬುದು **ಸರ್ವಭೂತಸ್ಥಮ್** — ಸಕಲ ಪ್ರಾಣಿಗಳಲ್ಲೂ ಅಂತರ್ಯಾಮಿಯಾಗಿಯೂ **ಏಕಂ** — ಅದ್ವಿತೀಯನಾಗಿಯೂ **ಕಾರಣರೂಪಂ** — ಜಗತ್ಕಾರಣಭೂತನಾಗಿಯೂ **ಪರಬ್ರಹ್ಮ** — ಪರಬ್ರಹ್ಮನಾಮಕನಾದ **ನಾರಾಯಣಂ** — ನಾರಾಯಣನನ್ನೇ ಹೇಳುವುದು **ಏತತ್** — ಈ ಪ್ರಕಾರವಾಗಿ **ಅಥರ್ವಶಿರಃ** — ಅಥರ್ವಶಿರಸ್ಸು **ಅಧೀತೇ** — ಪಠಿಸುತ್ತದೆ.

ಉಪನಿಷತ್ತುಗಳಲ್ಲಿ ಪುರುಷ ಶಬ್ದದಿಂದ ಹೇಳಲ್ಪಟ್ಟಿರುವ ಪರಬ್ರಹ್ಮನಾದ ನಾರಾಯಣನು ಸ್ವಯಂ ಪ್ರಕಾಶನು. ಆನಂದಸ್ವರೂಪನು. ಪ್ರಣವವು ಆತನನ್ನು ವಿಶದವಾಗಿ ನಿರೂಪಿಸುತ್ತದೆ. ಪ್ರಣವದಲ್ಲಿ ಅ, ಉ, ಮ ಎಂಬ ಮೂರು ಅಕ್ಷರಗಳಿವೆ. ಆ ಮೂರು ಅಕ್ಷರಗಳು ಒಟ್ಟಿಗೆ ಸೇರಿ ಓಂ ಎಂಬ ಪ್ರಣವವಾಗಿದೆ. ಪರಬ್ರಹ್ಮನನ್ನು ಪ್ರತಿಪಾದಿಸುವ ಓಂಕಾರವನ್ನು ಯೋಗಿಯಾದವನು ಎಂದರೆ ಆತ್ಮಸಾಕ್ಷಾ

ಕ್ಷಾರ ಮಾಡಿದವನೂ, ಸತ್ಯವನ್ನರಿತವನೂ, ಪರಮಾತ್ಮನನ್ನು ಮನಸ್ಸಿನಲ್ಲಿ ಸದಾ ಧ್ಯಾನಮಾಡುವವನೂ ಆದವನೇ ಯೋಗಿ. ಅಂತವನು ಪ್ರಣವವನ್ನು ಭಕ್ತಿಪೂರ್ವಕ ಜಪಮಾಡಿದರೆ ಜನನ ಮರಣವೆಂಬ ಸಂಸಾರ ಬಂಧನದಿಂದ ಬಿಡುಗಡೆ ಹೊಂದುವನು.

“ಓಂ ನಮೋ ನಾರಾಯಣಾಯ” ಎಂಬ ಅಷ್ಟಾಕ್ಷರ ಮಂತ್ರದಲ್ಲಿ ‘ಓಂ’ ಎಂದು, ‘ನಮಃ’ ಎಂದು ‘ನಾರಾಯಣಾಯ’ ಎಂದು ಮೂರು ಪದಗಳಿವೆ. ಅವುಗಳಲ್ಲಿ ‘ಓಂ’ ಕಾರಕ್ಕೆ ಪ್ರಣವವೆಂದು ಹೆಸರು. ಅಕಾರ, ಉಕಾರ, ಮಕಾರ, ಎಂಬ ಮೂರು ಅಕ್ಷರಗಳು ಒಂದಾಗಿ ಸೇರಿ ಓಂಕಾರವಾಗಿದೆ. ಆ ಮೂರು ಅಕ್ಷರಗಳು ಮೂರು ವೇದಗಳಿಂದ ತೆಗೆಯಲ್ಪಟ್ಟವು. ಒಂದೊಂದೂ ಒಂದೊಂದು ವೇದದ ಸಾರವೆಂದು ಹೇಳಿದೆ. ಆದುದರಿಂದ ಇವು ಮೂರೂ ಸೇರಿ ಆಗಿರುವ ಓಂಕಾರವು ಸಕಲ ವೇದಗಳ ಸಾರವಾಗಿದೆ. ಓಂಕಾರದಲ್ಲಿ ಸಕಲ ವೇದಗಳ ಸಾರವು ಅಡಗಿರುವುದನ್ನು ಸೂಚಿಸುವುದಕ್ಕಾಗಿ ವೇದವನ್ನು ಪ್ರಾರಂಭಿಸುವಾಗಲೂ ನಿಲ್ಲಿಸುವಾಗಲೂ ಓಂಕಾರವು ಉಚ್ಚರಿಸಲ್ಪಡುತ್ತದೆ.

ಓಂಕಾರದ ಮೊದಲನೆ ಅಕ್ಷರವಾದ ‘ಅ’ ಕಾರವು, “ಅಕಾರೋ ವೈ ಸರ್ವಾ ವಾಕ್” ಸಮಸ್ತ ವಾಕ್ಕೂ ‘ಅ’ ಕಾರವೇ ಆಗಿರುವುದೆಂಬಂತೆ, ಸಕಲ ಶಬ್ದಗಳಿಗೂ ಆದಿಯಾಗಿಯೂ ಕಾರಣವಾಗಿಯೂ ಇರುವದು. ‘ಅ’ ಕಾರದ ಪ್ರಕೃತಿ ಅರ್ಥವು ಕಾರಣವೆಂದಾಗುತ್ತದೆ. ‘ಅವ್ = ರಕ್ಷಣೆ’ ಎಂಬ ಧಾತುವಿನಿಂದ ಹುಟ್ಟಿದ ಅಕಾರವು ರಕ್ಷಕತ್ವವನ್ನು ಹೇಳುತ್ತದೆ. ಇದರಿಂದ ‘ಅ’ ಕಾರವು ಕಾರಣತ್ವವನ್ನೂ, ರಕ್ಷಕತ್ವವನ್ನೂ ಹೇಳಿದಂತಾಯಿತು. ಈ ‘ಅ’ ಕಾರವು ನಾರಾಯಣ ಪದದ ಸಂಗ್ರಹರೂಪವಾಗಿರುವುದರಿಂದ ನಾರಾಯಣನ ಜಗತ್ಕಾರಣತ್ವವನ್ನೂ, ರಕ್ಷಕತ್ವವನ್ನೂ ರಕ್ಷಣೆಗೆ ಅವಶ್ಯಕವಾದ ಸಕಲಕಲ್ಯಾಣಗುಣಗಣ ಪರಿಪೂರ್ಣತ್ವವನ್ನೂ ಸರ್ವಸ್ವಾಮಿತ್ವವನ್ನೂ ಇವೇ ಮೊದಲಾದ ಆತನ ಮಹಿಮೆಯನ್ನು ಪ್ರಕಾಶಪಡಿಸುತ್ತದೆ. ರಕ್ಷಿಸುವುದೆಂದರೆ ದುಃಖರೂಪವಾದ ವಿರೋಧಿಯನ್ನು ಹೋಗಲಾಡಿಸುವುದು ಮತ್ತು ಸುಖರೂಪ

ವಾದ ಅಪೇಕ್ಷೆಗಳನ್ನು ಕೊಡುವುದು. ಸರ್ವಸ್ವಾಮಿಯಾದುದರಿಂದ ಸಮಸ್ತವೂ ಆತನ ಸೊತ್ತು, ಆತನ ಅಧೀನ, ಆತನ ನಿಯಮಕ್ಕೆ ಒಳಪಟ್ಟವು ಎಂದಾಯಿತು. ಆದುದರಿಂದ ಆತ್ಮನು ಭಗವಂತನ ಅಧೀನನು, ಹಾಗೆ ಅಧೀನನಾಗಿರುವುದೇ ಅವನ ಸ್ವರೂಪವು.

ಓಂ ಕಾರದ ಎರಡನೆ ಅಕ್ಷರವಾದ 'ಉ' ಕಾರವು ಅವಧಾರಣಾರ್ಥವನ್ನು ಹೇಳುತ್ತದೆ. ಹಾಗೆಂದರೆ ನಿಶ್ಚಿತಾರ್ಥವನ್ನು ತಿಳಿಸುತ್ತದೆ. ಆತ್ಮನು ಪರಮಾತ್ಮನಿಗೆ ಮಾತ್ರವೇ ಅಧೀನನೆಂದು ನಿರ್ಧರಿಸುತ್ತದೆ. ಸರ್ವೇಶ್ವರನಲ್ಲದ ಇತರರಾರಿಗೂ ಆತ್ಮನು ಅಧೀನನಲ್ಲ. ಎಂಬುದನ್ನು ದೃಢಪಡಿಸುವುದೇ 'ಉ' ಕಾರದ ಮುಖ್ಯ ತಾತ್ಪರ್ಯ. ಭಗವಂತನಲ್ಲದ ಇತರರು ಎಂಬ ಪದದಲ್ಲಿ ತಾನೂ ಸೇರಿರುವುದರಿಂದ ಆತ್ಮನು ತನಗೂ ಅಧೀನನಲ್ಲವೆಂದಾಯಿತು. ಆತ್ಮವರ್ಗವೆಲ್ಲಾ ಪರಮಾತ್ಮನ ಸೊತ್ತಾದುದರಿಂದ ತಾನು ಸ್ವತಂತ್ರನು, ತನಗೆ ತಾನು ಅಧೀನನು ಎಂದು ಭಾವಿಸಿದ ಪಕ್ಷದಲ್ಲಿ ದೇವರ ಸೊತ್ತನ್ನು ಅಪಹರಿಸಿದ ಚೋರನಾಗುತ್ತಾನೆ. ಆದುದರಿಂದ ಆತ್ಮನು ಭಗವಂತನಿಗೆ ಮಾತ್ರವೇ ದಾಸನಾಗಿರಲು ಅರ್ಹನೆಂದು ನಿರ್ಣಯವಾಯಿತು.

ಓಂ ಕಾರದ ಮೂರನೇ ಅಕ್ಷರವಾದ 'ಮ' ಕಾರವು ವರ್ಗೀಯಾಕ್ಷರಗಳಲ್ಲಿ 25 ನೇ ಅಕ್ಷರವಾಗಿರುವುದು. ಉಳಿದ 24 ಅಕ್ಷರಗಳು 24 ತತ್ವಗಳನ್ನು ತಿಳಿಸುತ್ತವೆ. ಮಕಾರವು 25ನೇ ತತ್ವವಾದ ಆತ್ಮನನ್ನು ತಿಳಿಸುತ್ತದೆ. ಮನಃ — ಜ್ಞಾನೇ ಎಂಬ ಧಾತುವಿನಿಂದ ಮಕಾರ ಉಂಟಾಗಿರುವುದರಿಂದ ಅದು ಜ್ಞಾನ ವಾಚಿಯಾಗಿದೆ. "ಪಂಚವಿಂಶೋಽಯಂ ಪುರುಷಃ" ಈ ಆತ್ಮನು 25 ನೇ ತತ್ವವು; "ಪಂಚವಿಂಶ ಆತ್ಮಾಭವತಿ." 25 ನೇ ತತ್ವವು ಆತ್ಮಾ, ಹೀಗೆಂದು ಶ್ರುತಿಗಳು ಹೇಳುವುದರಿಂದ, ಜ್ಞಾನಸ್ವರೂಪನೂ, ಜ್ಞಾನಗುಣಕನೂ ಆದ ಆತ್ಮನನ್ನು ಮಕಾರವು ಹೇಳುತ್ತದೆ. ಇಲ್ಲಿ ಏಕವಚನದಲ್ಲಿರುವ ಆತ್ಮ ಶಬ್ದವು ಆತ್ಮಜಾತಿಗೆ ಅನ್ವಯವಾಗುವುದರಿಂದ ಬದ್ಧ, ಮುಕ್ತ, ನಿತ್ಯರೆಂಬ ಮೂರು ಬಗೆಯ ಆತ್ಮರನ್ನೂ ಹೇಳುತ್ತದೆ. ಆತ್ಮನು ಜ್ಞಾನ

ಮಯನೂ ಜ್ಞಾನಗುಣಕನೂ ಆದುದರಿಂದ ಜಡವಸ್ತುವಾದ ದೇಹಕ್ಕಿಂತಲೂ ಭಿನ್ನನು ಎಂದು ಹೇಳಿದಂತಾಯಿತು.

ಅಕಾರವು ರಕ್ಷಕನನ್ನು ಹೇಳುತ್ತದೆ ಮಕಾರವು ರಕ್ಷಿಸಲ್ಪಡುವ ವಸ್ತುವನ್ನು ಹೇಳುತ್ತದೆ ಉಕಾರವು ರಕ್ಷಿಸುವದಕ್ಕೆ ಕಾರಣವಾದ ಆತ್ಮನ ಅಧೀನತೆ ಮತ್ತು ಭಗವಂತನಿಗೆ ಮಾತ್ರವೇ ದಾಸನು ಎಂಬ ಇಬ್ಬರಿಗೂ ಇರುವ ಸಂಬಂಧವನ್ನು ಹೇಳುತ್ತದೆ. ಆದುದರಿಂದ ಓಂಕಾರದ ಸಾರಾರ್ಥವೇನೆಂದರೆ, ಆತ್ಮನು ಜಗದ್ರಕ್ಷಕನಾದ ನಾರಾಯಣನಿಗೆ ಮಾತ್ರವೇ ದಾಸಭೂತನಾಗಿರತಕ್ಕವನು. ಆತನ ಇಷ್ಟ ವಿನಿಯೋಗಾರ್ಹನು ಎಂದಾಯಿತು.

'ನಮಃ' ಎನ್ನುವುದರಲ್ಲಿ, 'ನ' ಎಂದೂ 'ಮಃ' ಎಂದೂ ಎರಡು ಪದಗಳಿವೆ. 'ಮಃ' ಎನ್ನುವುದರಲ್ಲಿ ಆತ್ಮನಾದ ತಾನು ಸ್ವತಂತ್ರನೆಂಬ ಅರ್ಥವು ಸೂಚಿತವಾಗುತ್ತದೆ. 'ನ' (ಇಲ್ಲ) ಎನ್ನುವುದು ಸ್ವಾತಂತ್ರ್ಯವಿಲ್ಲವೆಂದು ಹೇಳುತ್ತದೆ. ಆದುದರಿಂದ 'ನಮಃ' ಪದವು ಆತ್ಮನು ಸ್ವತಂತ್ರನಲ್ಲವೆಂದು ಹೇಳಿದಂತಾಯಿತು. 'ಓಂ' ಕಾರದಲ್ಲಿ ಆತ್ಮನು ಭಗವಂತನಿಗೆ ಮಾತ್ರವೇ ದಾಸಭೂತನಾಗಿರಲು ತಕ್ಕವನೆಂದು ಹೇಳಿರುವದಕ್ಕೆ ವಿರೋಧವಾದ ಆತ್ಮನ ಸ್ವಾತಂತ್ರ್ಯವನ್ನೂ, ಸ್ವಾರ್ಥವನ್ನೂ 'ನಮಃ' ಎನ್ನುವ ಪದವು ಪರಿಹಾರ ಮಾಡುತ್ತದೆ. 'ನಮಃ' ಪದವು ಆತ್ಮನು ಭಗವಂತನಿಗೆ ಮಾತ್ರವೇ ದಾಸನಾಗಿರಲು ತಕ್ಕವನೆನ್ನುವುದರಿಂದ ಭಗವಂತನಿಗೆ ಪರತಂತ್ರನಾಗಿರುವುದೇ ಆತ್ಮನಿಗೆ ಸ್ವರೂಪವೆಂದಾಯಿತು. ಸ್ವಸ್ವಾತಂತ್ರ್ಯ, ಸ್ವರಕ್ಷಣೆ. ಆತ್ಮನಿಗಿಲ್ಲದಿರುವುದರಿಂದ ಅವು ಪರಮಾತ್ಮನಿಗೆ ಸೇರಿದ್ದೆಂದಾಯಿತು. ಆತ್ಮನನ್ನು ರಕ್ಷಿಸಿ ಮೋಕ್ಷವನ್ನು ದಯಪಾಲಿಸುವವನು ನಾರಾಯಣನೇ ಎಂದು ಸಿದ್ಧವಾಯಿತು.

'ನಾರಾಯಣ' ಶಬ್ದದಲ್ಲಿ 'ನಾರಾ' ಮತ್ತು 'ಅಯನ' ಎಂಬ ಎರಡು ಪದಗಳಿವೆ. 'ನಾರಾ' ಎಂದರೆ ನಿತ್ಯವಸ್ತು ಸಮೂಹ.

‘ಅಯನ’ ಎಂದರೆ ಆಶ್ರಯ, ವ್ಯಾಪಕ, ಅಂತರ್ಯಾಮಿ, ಉಪಾಯ, ಉಪೇಯ ಎಂದು ಅರ್ಥವಾಗುತ್ತದೆ. “ರಿಙ್ — ಕ್ಷಯೇ” ಎಂಬ ಧಾತುವಿನಿಂದ ಉತ್ಪನ್ನವಾದ ‘ರ’ ಎನ್ನುವದು ಕ್ಷಯವುಳ್ಳ, ನಾಶವಾಗತಕ್ಕ ವಸ್ತುವನ್ನು ಹೇಳುತ್ತದೆ. ‘ನ’ ಕಾರವು ಅದನ್ನು ನಿಷೇಧಿಸುತ್ತದೆ. ‘ನರ’ ಎಂದರೆ ನಾಶವಿಲ್ಲದ ನಿತ್ಯವಸ್ತುವೆಂದು ಅರ್ಥವಾಗುತ್ತದೆ. ‘ನಾರ’ ಎಂದರೆ ನಿತ್ಯವಸ್ತುಗಳ ಸಮೂಹ. ‘ನಾರಾಃ’ ಎಂದರೆ ನಿತ್ಯವಸ್ತು ಸಮೂಹಗಳ ಬಾಹುಳ್ಯ. ‘ನಾರಾಯಣಃ’ ಎನ್ನುವುದು ‘ನಾರಾಣಾಂ ಅಯನಂ ಯಃ ಸಃ ನಾರಾಯಣಃ’ ನಾರ ಎಂದರೆ ನಾಶವಿಲ್ಲದ ಪದಾರ್ಥಗಳಿಗೆ ಯಾವನು ಆಶ್ರಯನಾಗಿರುವನೋ ಅವನೇ ನಾರಾಯಣನು. ಇದರಿಂದ ಸಮಸ್ತ ಚರಾಚರಾತ್ಮಕ ವಸ್ತುಗಳಿಗೆ ನಾರಾಯಣನೇ ಆಶ್ರಯನೆಂದಾಯಿತು. ‘ನಾರಾಃ ಅಯನಂ ಯಸ್ಯ ಸಃ ನಾರಾಯಣಃ’ ಎಂದರೆ ಯಾವನಿಗೆ ಈ ನಾರ ಪದಾರ್ಥಗಳೇ ಆಶ್ರಯ ಸ್ಥಾನವೋ ಅವನೇ ನಾರಾಯಣನು. ಇದರಿಂದ ಎಲ್ಲಾ ಪದಾರ್ಥಗಳೂ ಪರಮಾತ್ಮನಿಗೆ ಆಶ್ರಯ ಸ್ಥಾನವು. ಎಂದರೆ ಎಲ್ಲಾ ಪದಾರ್ಥಗಳಲ್ಲಿಯೂ ಪರಮಾತ್ಮನು ಇದ್ದೇ ಇರುತ್ತಾನೆ ಎಂದರ್ಥವಾಗುತ್ತದೆ. ಆದುದರಿಂದ ‘ನಾರಾಯಣಃ’ ಎನ್ನುವುದರಿಂದ ಸಮಸ್ತ ವಸ್ತುಗಳಿಗೆ ಆಶ್ರಯನೂ, ಆಧಾರನೂ, ವ್ಯಾಪಕನೂ, ಸರ್ವಾಂತರ್ಯಾಮಿಯೂ, ಉಪಾಯನೂ, ಉಪೇಯನೂ ಆದ ಪರಮಾತ್ಮನು, ಸಕಲಕ್ಕೂ ಆಧಾರನಾದುದರಿಂದ ಅವನ ಸ್ವಾಮಿತ್ವವು ಪ್ರಕಾಶವಾಗುತ್ತದೆ. ಹೀಗೆ ಮಹಾತ್ಮನೆನಿಸಿಕೊಂಡಿರುವ ಪರಬ್ರಹ್ಮನು ಸಕಲ ಚೇತನಾಚೇತನಗಳಲ್ಲೂ ತನ್ನನ್ನು ಅತಿ ಸೂಕ್ಷ್ಮಮಾಡಿಕೊಂಡು ಅಂತರ್ಯಾಮಿಯಾಗಿ ಪ್ರವೇಶಿಸಿರುವುದರಿಂದ ಆತನ ಸೌಲಭ್ಯವು ವ್ಯಕ್ತವಾಗುತ್ತದೆ. ಹೀಗೆ ನಾರಾಯಣನೆಂದರೆ ಸಮಸ್ತ ಚೇತನಾಚೇತನಗಳ ಒಳಗೂ ಹೊರಗೂ ವ್ಯಾಪಿಸಿರತಕ್ಕವನೆಂದು ಅರ್ಥವಾಗುವುದರಿಂದ ಇಂತವನು ನಾರಾಯಣನು ವಿನಹ ಮತ್ತಾರೂ ಇಲ್ಲವೆಂದು ಸ್ಪಷ್ಟಪಡುತ್ತದೆ.

"ನಾರಾಯಣಾಯ" ಶಬ್ದದ ಕೊನೆಯ 'ಆಯ' ಎಂಬುದು ಚತುರ್ಥೀ ವಿಭಕ್ತಿ ಪ್ರತ್ಯಯವಾಗಿರುವುದರಿಂದ ನಾರಾಯಣನಿಗೆ ಎಂಬ ಅರ್ಥವನ್ನು ಕೊಡುತ್ತದೆ. ಇದರಿಂದ ಆತ್ಮನು ನಾರಾಯಣನಿಗೆ ಮಾತ್ರವೇ ಸಮಸ್ತ ವಿಧವಾದ ಕೈಂಕರ್ಯವನ್ನು (ಸೇವೆಯನ್ನು) ಮಾಡುವವನಾಗಬೇಕೆಂಬ ಆತ್ಮನ ಅಪೇಕ್ಷೆಯನ್ನು ತಿಳಿಸುತ್ತದೆ.

"ಓಂ ನಮೋ ನಾರಾಯಣಾಯ" ಎಂಬ ಅಷ್ಟಾಕ್ಷರ ಮಂತ್ರದ ಸಾರಾರ್ಥ. ಜಗತ್ಕಾರಣನೂ, ಸರ್ವರಕ್ಷಕನೂ, ಸಮಸ್ತ ಕಲ್ಯಾಣ ಗುಣಗಣ ಪರಿಪೂರ್ಣನೂ, ಸರ್ವಾಂತರ್ಯಾಮಿಯೂ, ಸಮಸ್ತಕ್ಕೂ ಆಧಾರನೂ, ಸರ್ವಸ್ವಾಮಿಯೂ, ಉಪಾಯನೂ ಎಂದರೆ ಅನಿಷ್ಟ ನಿವೃತ್ತಿ ಇಷ್ಟಪ್ರಾಪ್ತಿಯನ್ನುಂಟುಮಾಡುವವನೂ, ಉಪೇಯನೂ ಎಂದರೆ ಆತ್ಮನು ಹೊಂದಬೇಕಾದಂತಹವನೂ ನಾರಾಯಣನೇ. ಆತನು ಸಕಲ ಆತ್ಮಕ್ಕೂ ಸ್ವಾಮಿಯಾಗಿ, ಆತ್ಮನು ಆತನ ಸೊತ್ತಾಗಿರುವುದರಿಂದ ಆತ್ಮನು ಸ್ವರಕ್ಷಣೆ ಸ್ವಸ್ವಾತಂತ್ರ್ಯವನ್ನು ತ್ಯಜಿಸಿ, ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲೂ ಪರಬ್ರಹ್ಮನಾದ ನಾರಾಯಣನಿಗೆ ಮಾತ್ರವೇ ಎಲ್ಲಾ ವಿಧವಾದ ಕೈಂಕರ್ಯವನ್ನು ಮಾಡುವವನಾಗಬೇಕು.

ನಾರಾಯಣ : ನರ ಎಂದರೆ ಮನುಷ್ಯರು, ನಾರಾ ಎಂದರೆ ಮನುಷ್ಯ ಸಮೂಹ, ಮನುಷ್ಯ ಸಮಾಜ. ಅಯನ ಎಂದರೆ ಆಧಾರ, ಅಂತರ್ಯಾಮಿ, ವ್ಯಾಪ್ತ. ನಾರಾಯಣ ಎಂದರೆ ಮನುಷ್ಯ ಸಮಾಜದ ಆಧಾರನು, ಅಂತರ್ಯಾಮಿಯೂ ಆಗಿ ಅದನ್ನು ವ್ಯಾಪಿಸಿಕೊಂಡಿರುವ ಭಗವಂತನೆಂದಾಯಿತು. ಆದುದರಿಂದ ಮನುಷ್ಯಸಮಾಜವೇ ನಾರಾಯಣನೆಂದು ವ್ಯಕ್ತಪಡುತ್ತದೆ. ಸಮಾಜ ಸೇವೆಯೇ ಭಗವಂತನಾದ ನಾರಾಯಣನಸೇವೆಯೆಂದಾಗುತ್ತದೆ. "ಜನಸೇವೆಯೇ ಜನಾರ್ದನಸೇವೆ" ಎಂಬ ನಾಣ್ಣುಡಿಗೆ ಇದೇ ಅರ್ಥವಾಗಿದೆ.

ಇಂಥಾ ಅದ್ಭುತವಾದ ಮಹಿಮೆಯಿಂದ ಕೂಡಿದ ಅಷ್ಟಾಕ್ಷರಮಂತ್ರವನ್ನು ಉಪಾಸನೆ ಮಾಡುವವನು ಎಂದರೆ ಅಚಂಚಲನಾದ ಮನಸ್ಸಿ

ನಿಂದ, ಸಂಸ್ಕೃತದಲ್ಲಿ ಅಡಗಿರುವ ಭಗವಂತನ ಕಲ್ಯಾಣ ಗುಣಗಳನ್ನು ಮನನ ಮಾಡುತ್ತಾ, ಅವನ್ನು ಧ್ಯಾನಮಾಡಿ ನಾರಾಯಣನ ಸಾಕ್ಷಾತ್ಕಾರವಾದವನಿಗೆ ಪರಮಪುರುಷನ ಪರಮಪದವಾದ ವೈಕುಂಠ ಲೋಕವು ಲಭಿಸುತ್ತದೆ.

ಮೇಲಿನ ವಾಕ್ಯದಿಂದ ಪರಮಾತ್ಮನು ವೈಕುಂಠಲೋಕದಲ್ಲಿ ಮಾತ್ರವೇ ಇದ್ದಾನೆಂದು ಉಂಟಾಗಬಹುದಾದ ಅನುಮಾನವು ಪರಿಹಾರ ವಾಗುವಂತೆ ಚೇತನನ ಶ್ರೇಷ್ಠವಾದ ಹೃದಯಕಮಲವೆಂಬುದು ಕೇವಲ ಜ್ಞಾನಸ್ವರೂಪನಾದ ಭಗವಂತನಿಗೆ ಆಧಾರ ಭೂತವಾಗಿರುವುದೆಂದು ಹೇಳಿದೆ. ಹೀಗೆ ಅಂತರ್ಯಾಮಿಯಾಗಿರುವ ಪರಮಾತ್ಮನು ಜಗತ್ತನ್ನು ರಕ್ಷಣೆಮಾಡುವಂತಾವನೇ ಆಗಿರುತ್ತಾನೆ. ಅಷ್ಟೇ ಅಲ್ಲದೆ ಇಹಲೋಕ ದಲ್ಲಿ ಧರ್ಮವು ಮಲಿನವಾಗಿ ತಲೆಯೆತ್ತಿರುವ ಅಧರ್ಮವನ್ನು ಪರಿಹಾರ ಮಾಡಿ ಧರ್ಮವನ್ನು ನೆಲೆಗೊಳಿಸುವುದಕ್ಕಾಗಿಯೂ, ದುಷ್ಟಶಿಕ್ಷಣ ಶಿಷ್ಟ ಪರಿಪಾಲನೆಗಾಗಿಯೂ, ತನ್ನ ಭಕ್ತರಿಗೆ ತನ್ನ ಸರ್ವಾಂಗಗಳ ಮೂರ್ತಿ ದರ್ಶನವನ್ನು ಕೊಡುವುದಕ್ಕಾಗಿಯೂ, ಸಾಕ್ಷಾತ್ ಪರಬ್ರಹ್ಮನೇ ದೇವಕಿ ದೇವಿ ಪುತ್ರನಾಗಿ ಕೃಷ್ಣಾವತಾರವನ್ನು ಮಾಡಿದನು. ಆ ಅವತಾರ ದಲ್ಲಿ ಗೊಲ್ಲರ ಸಮುದಾಯದಲ್ಲಿ ತಾನೂ ಒಬ್ಬನಾಗಿ ಸೇರಿ ಅವರಿಗೂ ತನಗೂ ಯಾವ ವಿಧವಾದ ವ್ಯತ್ಯಾಸವನ್ನೂ ತೋರ್ಪಡಿಸದೆ ಸರ್ವಸುಲ ಭನಾಗಿ ತನ್ನ ಸೌಲಭ್ಯವನ್ನು ಪ್ರಕಟಪಡಿಸಿದನು. ಮತ್ತು ಜಗದ್ರಕ್ಷ ಣಾರ್ಥವಾಗಿ ಲೋಕಪ್ರಸಿದ್ಧವಾದ ಗೀತೋಪದೇಶವನ್ನು ಮಾಡಿದನು. ಸಕಲ ಪ್ರಾಣಿಗಳಲ್ಲೂ ಅಂತರ್ಯಾಮಿಯಾಗಿಯೂ, ಅದ್ವಿತೀಯನಾ ಗಿಯೂ, ಜಗತ್ಕಾರಣಭೂತನಾಗಿಯೂ ಇರುವ ಪರಬ್ರಹ್ಮ ಸನ್ಯಾಸದ ನಾರಾಯಣನನ್ನೇ ಪ್ರಣವದಲ್ಲಿರುವ ಅಕಾರವು ಹೇಳುತ್ತದೆ.

ಪರಬ್ರಹ್ಮನಾದ ನಾರಾಯಣನು ಆನಂದ ಸ್ವರೂಪನು. ಆ ಆನಂದವು ಇಷ್ಟೇ ಎಂದು ನಿರ್ಣಯ ಮಾಡಲಾಗುವುದಿಲ್ಲವೆಂದು ಶ್ರುತಿ ಯು ಆನಂದವಲ್ಲಿಯಲ್ಲಿ "ಯತೋವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ." ಪರಮಾತ್ಮನ ಆನಂದವನ್ನು ಅಳತೆಯಿಂದ ನಿರ್ಣಯಿ

ಸಲು ಪ್ರಯತ್ನಿಸಿದ ವಾಕ್ಕು ಮನಸ್ಸು ಸಹ ಆ ಆನಂದವನ್ನು ವಾಕ್ಕಿನಿಂದ ಹೇಳಿ ಮುಗಿಸುವುದಕ್ಕಾಗಲೀ ಮನಸ್ಸಿನಿಂದ ಚಿಂತಿಸಿ ಇಷ್ಟೇ ಎಂದು ನಿರ್ಣಯ ಮಾಡುವುದಕ್ಕಾಗಲೀ ಅಸಾಧ್ಯವೆಂದು ಹಿಂತಿರುಗಿದವು ಎಂದು ಹೇಳಿದೆ.

“ಆನಂದೋ ಬ್ರಹ್ಮೇತಿ ವ್ಯಜಾನಾತ್” ಆನಂದವೇ ಪರಬ್ರಹ್ಮನೆಂದು ತಿಳಿದುಕೊಂಡನು. (ತೈ. ಭೃ) “ವಿಜ್ಞಾನಮಾನಂದಂ ಬ್ರಹ್ಮ” (ಬೃ. 3. 2. 9. 8.) ಸರ್ವಜ್ಞನಾಗಿಯೂ ಆನಂದಮಯನಾಗಿಯೂ ಇರುವವನು ಪರಬ್ರಹ್ಮನು. “ಆನಂದರೂಪಮಮೃತಂ ಯದ್ವಿಭಾತಿ.” (ಮುಂ. 2. 2. 9) ಆನಂದ ವಿಶಿಷ್ಟನಾಗಿಯೂ ಅಮೃತ ಸ್ವರೂಪನಾಗಿಯೂ ಪರಮಾತ್ಮನು ಪ್ರಕಾಶಿಸುತ್ತಾನೆ. ತಾನು ಆನಂದಸ್ವರೂಪನಾದುದರಿಂದ ತನ್ನನ್ನು ಆಶ್ರಯಿಸಿದವರಿಗೆ ಆನಂದವನ್ನುಂಟುಮಾಡುತ್ತಾನೆ. “ಏಷಹ್ಯೇವಾನಂದಯಾತಿ” (ತೈ) ತನ್ನನ್ನು ಆರಾಧಿಸುವ ಚೇತನರಿಗೆ ಪರಮಾತ್ಮನಾದ ನಾರಾಯಣನು ಆನಂದವನ್ನುಂಟುಮಾಡುವನು, ಹಾಗೆಂದರೆ ಇಹಲೋಕದ ಮತ್ತು ಪರಲೋಕದ ಆನಂದವನ್ನುಂಟುಮಾಡುತ್ತಾನೆ.

ನಾರಾಯಣೋಪನಿಷತ್ತಿನ ಸಾರಾರ್ಥವು ನಾರಾಯಣ ಪದದಲ್ಲಿ ಸಂಗ್ರಹವಾಗಿದೆ, ನಾರಾಯಣ ಪದದ ಅರ್ಥವು ಓಂಕಾರದಲ್ಲಿ ಸಂಗ್ರಹವಾಗಿದೆ. ಆದುದರಿಂದ ಪ್ರಣವವು ಸರ್ವ ಶ್ರೇಷ್ಠವಾದುದೆಂದು ಎಲ್ಲಾ ಉಪನಿಷತ್ತುಗಳೂ ಕೊಂಡಾಡುತ್ತವೆ ಉದಾಹರಣೆಗಾಗಿ ಕೆಲವು ಉಪನಿಷದ್ವಾಕ್ಯಗಳು ಕೊಡಲ್ಪಟ್ಟಿವೆ.

1. “ಓಮಿತ್ಯೇವ ಧ್ಯಾಯಥಾತ್ಮಾನಂ ಸ್ವಸ್ತಿ ವಃ,” (ಮುಂ. 2.2.6.) ಓಂಕಾರವೆಂಬ ಪ್ರಣವಾರ್ಥದೊಡನೆ ಪರಮಾತ್ಮನನ್ನು ಧ್ಯಾನ ಮಾಡಿ. ನಿಮಗೆ ಮಂಗಳ ಉಂಟಾಗುವುದು.

2. “ಓಮಿತಿ ಬ್ರಹ್ಮ ಓಮಿತೀದಂ ಸರ್ವಮ್.” (ತೈ. 8.) ಓಂ ಎಂಬ ಪ್ರಣವವು ಪರಬ್ರಹ್ಮನನ್ನು ವ್ಯಕ್ತಪಡಿಸುತ್ತದೆ. ಈ ಸಮಸ್ತ

ವಸ್ತುಗಳೂ ಓಂ ಎನ್ನುವ ಪದವೇ ಆಗಿದೆ. ಹೇಗೆಂದರೆ ಎಲ್ಲಾ ವಸ್ತುಗಳನ್ನು ಹೇಳುವ ಶಬ್ದಗಳಿಗೆ ಅದು ಮೂಲಕಾರಣ ವಾಗಿರುವಂತಹದ್ದು.

3. ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥ (ಮುಂ. 2.2.4.)
ಪ್ರಣವವು ಬಿಲ್ಲಾಗಿಯೂ ಜೀವಾತ್ಮನು ಅಂಬಾಗಿಯೂ ಬ್ರಹ್ಮನು ಗುರಿಯಾಗಿಯೂ ಹೇಳಲ್ಪಟ್ಟಿದೆ. ಚಿತ್ತಚಾಂಚಲ್ಯವಿಲ್ಲದೆ ಹೊಡೆಯಬೇಕು. ಅಂಬಿನಂತೆ ತನ್ಮಯನಾಗುತ್ತಾನೆ. ಎಂದರೆ ಜೀವಾತ್ಮನನ್ನು ಪ್ರಣವ ಧ್ಯಾನಮೂಲಕ ಪರಮಾತ್ಮನಲ್ಲಿ ತನ್ಮಯನಾಗುವಂತೆ ಸೇರಿಸಬೇಕು.

ಒಬ್ಬ ಬಿಲ್ಲುಗಾರನು ಬಿಡುವ ಬಾಣವು ಗುರಿಯನ್ನು ತಪ್ಪದೆ ಮುಟ್ಟಬೇಕಾದರೆ, ಅವನು ತನ್ನ ಬುದ್ಧಿ ಮನಸ್ಸು ದೃಷ್ಟಿ ಎಲ್ಲವನ್ನು ಅತ್ತಿತ್ತ ಚಲಿಸದಂತೆ ಗುರಿಯಲ್ಲಿಯೇ ಇಟ್ಟು ಬಾಣವನ್ನು ಹೊಡೆದರೆ ಅದು ತಪ್ಪದೆ ಗುರಿಯನ್ನು ಮುಟ್ಟುತ್ತದೆ. ಅದರಂತೆಯೇ ಪರಮಾತ್ಮನನ್ನು ಸೇರಬೇಕೆಂಬ ಅಪೇಕ್ಷೆಯುಳ್ಳ ಉಪಾಸಕನು ಪ್ರಣವಾರ್ಥದೊಡನೆ ಪರಬ್ರಹ್ಮನನ್ನು ಏಕಾಗ್ರಚಿತ್ತನಾಗಿ ಧ್ಯಾನಮಾಡಿದರೆ ಅವನನ್ನು ತಪ್ಪದೆ ಪಡೆಯುತ್ತಾನೆ.

4. ಸರ್ವೇ ವೇದಾ ಯತ್ಪದಮಾಮನಂತಿ ತಪಾಂಸಿ ಸರ್ವಾಣಿ ಚ ಯದ್ವದಂತಿ । ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇ ಪದಂ ಸಂಗ್ರಹೇಣ ಬ್ರವೀಮ್ಯೋಮಿತ್ಯೇತತ್ ॥ (ಕಠ. 1. 2. 15.)
ವೇದಗಳು, ವೇದಾಂತಗಳು ಯಾವುದೆಂದು ಪಡೆಯಬೇಕಾದ ವಸ್ತು ಸ್ವರೂಪವನ್ನು ಹೇಳುತ್ತವೆಯೋ, ಯಾವುದೊಂದನ್ನು ಹೊಂದಬೇಕೆಂದು ಎಲ್ಲಾ ತಪಸ್ಸುಗಳು ಹೇಳುತ್ತವೆಯೋ, ಯಾವುದೊಂದನ್ನು ಅಪೇಕ್ಷಿಸುವವರು ಬ್ರಹ್ಮಚರ್ಯವನ್ನು ಆಚರಿಸುತ್ತಾರೋ ಪಡೆಯಬೇಕಾದ ಅಂಥಾ ವಸ್ತುವಿನ ಸ್ವರೂಪವನ್ನು ಸಂಗ್ರಹವಾಗಿ ಹೇಳುತ್ತೇನೆ. ಹಾಗೆ ಹೊಂದಬೇಕಾದುದರ ಸ್ವರೂಪವನ್ನು ಚೆನ್ನಾಗಿ ಹೇಳುವ ಸಂಗ್ರಹವಾದ ಶಬ್ದವೇ ಪ್ರಣವವೇ ಆಗಿದೆ. 5. ಏತದ್ಧ್ಯೇವಾಕ್ಷರಂ ಬ್ರಹ್ಮ । ಏತದ್ಧ್ಯೇ

ನಾಕ್ಷರಂ ಪರಮ್ | ಏತದ್ಧ್ಯೇವಾಕ್ಷರಂ ಜ್ಞಾತ್ವಾ | ಯೋ ಯದಿಚ್ಛತಿ ತಸ್ಯತತ್ || (ಕಠ. 1. 2. 16.) ಈ ಪ್ರಣವಾಕ್ಷರವೇ ಪರಬ್ರಹ್ಮಪ್ರಾಪ್ತಿಸಾಧನವಾದ ಉಪಾಸನಾ ವಿಷಯವು. ಎಲ್ಲಾ ಮಂತ್ರಗಳಲ್ಲಿ ಇದೇ ಶ್ರೇಷ್ಠವಾದದ್ದು. ಇದರ ಉಪಾಸಕನು ಯಾವುದನ್ನು ಅಪೇಕ್ಷಿಸಿದರೆ ಅದನ್ನು ಪಡೆಯುತ್ತಾನೆ.

6. ಯಃ ಪುನರೇತಂ ತ್ರಿಮಾತ್ರೇಣೋಮಿತ್ಯೇತೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ ಸ ತೇಜಸಿ ಸೂರ್ಯೇ ಸಂಪನ್ನಃ | ಯಥಾ ಪಾದೋದರಸ್ತ್ವಚಾ ವಿನಿರ್ಮುಚ್ಯತ ಏವಂ ಹ ವೈ ಸ ಪಾಪ್ಮನಾ ವಿನಿರ್ಮುಕ್ತಃ ಸ ಸಾಮಭಿರುನ್ನೀಯತೇ ಬ್ರಹ್ಮಲೋಕಂ ಸ ಏತಸ್ಮಾಜ್ಜೀವಘನಾತ್ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ ||.(ಪ್ರಶ್ನ. 5. 5.) ಮೂರು ಮಾತ್ರೆಗಳುಳ್ಳ ಪ್ರಣವಕ್ಕೆ ವಾಚ್ಯಭೂತನಾದ ಪರಮಾತ್ಮನನ್ನು ನಿರಂತರ ಧ್ಯಾನಮಾಡುವ ಉಪಾಸಕನು, ತೇಜೋಮಯನಾದ ಸೂರ್ಯಮಂಡಲವನ್ನು ಸೇರಿದವನಾಗಿ ಅಲ್ಲಿ ಸಮಸ್ತ ಪಾಪಗಳಿಂದ ಬಿಡಲ್ಪಟ್ಟು, ಸಾಮ ಗಾನದೊಡನೆ ಪರಮ ಪದವನ್ನು ಹೊಂದಿ ಅಲ್ಲಿ ಪರಮ ಪುರುಷನ ದರ್ಶನವನ್ನು ಪಡೆಯುತ್ತಾನೆ. 7. "ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ | ತಸ್ಯ ಪ್ರಕೃತಿಲೀನಸ್ಯ ಯಃ ಪರಸ್ಸ ಮಹೇಶ್ವರಃ ||" (ತೈ. ನಾರಾಯಣವಲ್ಲಿ) ಪ್ರಣವವು ವೇದದ ಆದಿಯಲ್ಲಿ ಹೇಳಲ್ಪಡುತ್ತದೆ. ವೇದದ ಮುಕ್ತಾಯದಲ್ಲಿಯೂ ಇರುತ್ತದೆ. ತನ್ನ ಶರೀರವಾದ ಅಕಾರದಲ್ಲಿ ಅಡಗಿರುತ್ತದೆ. ಪ್ರಣವಕ್ಕೆ ನಾರಾಯಣನೇ ವಾಚ್ಯವು. ಹಾಗೆ ವಾಚ್ಯನಾಗಿರುವ ನಾರಾಯಣನು ಪರಮೈಶ್ವರ್ಯದೊಡನೆ ಕೂಡಿದವನು.

8. ಪ್ರಜಾಪತಿರ್ಲೋಕಾನಭ್ಯತಪತ್ತೇಭ್ಯೋಽಭಿತಪ್ತೇಭ್ಯಸ್ತ್ರಯೀ ವಿದ್ಯಾ ಸಂಪ್ರಾಸ್ರವತ್ತಾಮಭ್ಯತಪತ್ತಸ್ಯಾ ಅಭಿತಪ್ತಾಯಾ ಏತಾನ್ಯಕ್ಷರಾಣಿ ಸಂಪ್ರಾಸ್ರವಂತ ಭೂರ್ಭುವಸ್ಸುವರಿತಿ | ತಾನ್ಯಭ್ಯತಪತ್ತೇಭ್ಯೋಽಭಿತಪ್ತೇಭ್ಯ ಓಂಕಾರಸ್ಸಂಪ್ರಾಸ್ರವತ್ || (ಛಾಂ. 2. 23. 3.) ಸಾರವಾದುದು ಓಂಕಾರವು ಅರಿಯಲು ಅನುಸಾರ್ಯ

ಬ್ರಹ್ಮನು ಲೋಕವನ್ನೆಲ್ಲಾ ವಿಮರ್ಶೆ ಮಾಡಿದನು. ಅವನ ಬುದ್ಧಿಗೆ ಮೂರು ವೇದಗಳು ಸಾರವಾಗಿ ತೋರಿತು. ವೇದಗಳನ್ನು ವಿಮರ್ಶೆ ಮಾಡಿದನು. "ಭೂರ್ಭುವಸ್ಸುವಃ" ಎಂಬುದು ಸಾರವಾಗಿ ನಿರ್ಣೈಸಿತು. ಪುನಃ ವಿಮರ್ಶೆ ಮಾಡಲು ಓಂಕಾರವು ಸಾರವಾಗಿ ನಿರ್ಣಯವಾಯಿತು. 9. "ಸೋಽಯಮಾತ್ಮಾಧ್ಯಕ್ಷರ ಮೋಂಕಾರೋಽಧಿ ಮಾತ್ರಮ್" || (ಮಾಂ. 8. 1.) ಅಕ್ಷರ ಸ್ವರೂಪವಾಗಿಯೂ, ಮಂತ್ರ ಸ್ವರೂಪವಾಗಿಯೂ ಇರುವ ಪ್ರಣವವಾದ ಓಂಕಾರವು ಪರಮಾತ್ಮನೆಂದು ಧ್ಯಾನ ಮಾಡಲ್ಪಡತಕ್ಕದ್ದು. 10. ಯಚ್ಛಂದಸಾಮೃಷಭೋ ವಿಶ್ವರೂಪಃ । (ತೈ. 4.) ಓಂಕಾರವಾದ ಪ್ರಣವವು ವೇದಗಳಲ್ಲೆಲ್ಲಾ ಶ್ರೇಷ್ಠವಾದದ್ದು. ವಾಕ್ಯಗಳನ್ನೆಲ್ಲಾ ವ್ಯಾಪಿಸಿ ಕೊಂಡಿರುವುದು. 11. ಋಗ್ಭಿರೇತಂ ಯಜುರ್ಭಿರಂತರಿಕ್ಷಂ ಸಾಮಭಿರ್ಯತ್ತತ್ ಕವಯೋ ವೇದಯಂತೇ । ತಮೋಂಕಾರೇಣೈವಾಯತನೇ ನಾನ್ವೇತಿ ವಿದ್ವಾನ್ ಯತ್ತಚ್ಛಾಂತ ಮಜರ ಮಮೃತ ಮಭಯಂ ಪರಂಚೇತಿ || (ಪ್ರ. 5. 7.) ಆ ಉಪಾಸಕನು ಋಗ್ವೇದದಿಂದ ಇಹಲೋಕವನ್ನೂ, ಯಜುರ್ವೇದದಿಂದ ಚಂದ್ರಲೋಕವನ್ನೂ, ಸಾಮವೇದದಿಂದ ಬ್ರಹ್ಮಲೋಕವನ್ನೂ ಪಡೆಯುತ್ತಾನೆ. ಮೋಕ್ಷ ಮಾರ್ಗವಾದ ಓಂಕಾರದಿಂದ ನಿತ್ಯಸೂರಿಗಳಿಂದ ಅನುಭವಿಸಲ್ಪಡುವ ಶಾಂತಿಯಿಂದ ಕೂಡಿದುದೂ ಜರಾಮರಣವಿಲ್ಲದುದೂ ಆದ ಪರಮಪದವನ್ನು ಪಡೆದು ಪರಮಾತ್ಮನನ್ನು ಅನುಭವಿಸುತ್ತಾನೆ.

"ಓಂ ನಮೋ ನಾರಾಯಣಾಯ" ಎಂಬ ಮಂತ್ರವನ್ನು ಉಪಾಸನೆ ಮಾಡುವವನಿಗೆ ವೈಕುಂಠಲೋಕವು ಲಭಿಸುತ್ತದೆ.

1. ವಿಜ್ಞಾನಸಾರಥಿರ್ಯಸ್ತು ಮನಃ ಪ್ರಗ್ರಹವಾನ್ನರಃ । ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ || (ಕಠ. 3. 9.) ವಿವೇಕದಿಂದ ಕೂಡಿದ ಜ್ಞಾನದಿಂದ ಮನಸ್ಸನ್ನು ಸ್ವಾಧೀನಮಾಡಿ ಕೊಂಡಿರುವವನು ಸಂಸಾರವನ್ನು ದಾಟಿ ವಿಷ್ಣುವಿನ ಪರಮಪದವಾದ ವೈಕುಂಠಲೋಕವನ್ನು ಹೊಂದುತ್ತಾನೆ. ಹಾಗೆಂದರೆ ಸ್ವಾಧೀನವಾದ

ಮನಸ್ಸಿನಿಂದ ಏಕಾಗ್ರಚಿತ್ತನಾಗಿ ನಾರಾಯಣನನ್ನು ಉಪಾಸನೆ ಮಾಡುವವನು ಮೇಲೆ ಹೇಳಿದ ಲೋಕವನ್ನು ಪಡೆಯುತ್ತಾನೆ. 2. "ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ ವಿಷ್ಣೋಃ ಯತ್ಪರಮಂ ಪದಮ್." (ಋಗ್ವೇದ) ಸರ್ವ ವ್ಯಾಪಕನಾದ ನಾರಾಯಣನ ಧಾಮವೆಂದು ಉತ್ಕೃಷ್ಟ ಸ್ಥಾನವಾದ ವೈಕುಂಠವೋ ಆ ಪರಮಪದವನ್ನು ಜ್ಞಾನಿಗಳೂ ಸ್ತೋತ್ರ ಮಾಡುವುದೇ ಸ್ವಭಾವವಾಗಿ ಉಳ್ಳವರಾದವರೂ ಸಹ ಜಾಗರೂಕತೆಯಿಂದ (ತಮ್ಮ ಸ್ತೋತ್ರದಿಂದ) ಪ್ರಕಾಶ ಪಡಿಸುತ್ತಾರೆ. (3) "ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮನ್ಯಾತ್ಮಾ ಪ್ರತಿಷ್ಠಿತಃ" (ಮು. 2. 2. 7.) ದಿವ್ಯಸ್ಥಾನವಾದ ಬ್ರಹ್ಮಪುರವೆಂಬ ವೈಕುಂಠದಲ್ಲಿ ಪರಬ್ರಹ್ಮನಾದ ನಾರಾಯಣನು ನೆಲಸಿರುತ್ತಾನೆ.

(1) "ಅಂಗುಷ್ಠಮಾತ್ರಃ ಪುರುಷೋಽನ್ತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ." (ಕಠ. 2. 3. 17.) ಪುರುಷ ವಾಚ್ಯನಾದ ನಾರಾಯಣನು ತನ್ನ ಉಪಾಸಕರ ಅನುಗ್ರಹಾರ್ಥವಾಗಿ ಯಾವಾಗಲೂ ಎಲ್ಲಾ ಚೇತನರ ಹೃದಯ ಕಮಲದಲ್ಲಿ ಅಂತರ್ಯಾಮಿಯಾಗಿ ಹೆಬ್ಬೆಟ್ಟು ಮಾತ್ರದ ಪ್ರಮಾಣದಲ್ಲಿ ಬಿಜಯಮಾಡಿರುವನು. (2) "ಹೃದಯಂ ತದ್ವಿಜಾನೀಯಾದ್ವಿಶ್ವಸ್ಯಾಯತನಂ ಮಹತ್." (ನಾರಾಯಣ ಸೂಕ್ತ.) ಪರಮಾತ್ಮನಾದ ನಾರಾಯಣನಿಗೆ ಹೃದಯಕಮಲವು ಹಿರಿದಾದ ವಾಸಸ್ಥಾನವೆಂದು ತಿಳಿಯಬೇಕು. (3) "ಸ ಯ ಏಷೋಽನ್ತರ್ಹೃದಯ ಆಕಾಶಃ । ತಸ್ಮಿನ್ನಯಂ ಪುರುಷೋ ಮನೋಮಯಃ ಅಮೃತೋ ಹಿರಣ್ಮಯಃ !" (ತೈ. ಶಿ. 6.) ಆ ಹೃದಯಕಮಲದ ಮಧ್ಯದಲ್ಲಿ ಜ್ಞಾನದಿಂದ ಅರಿಯತಕ್ಕವನು, ಅಮೃತ ಸ್ವರೂಪನು, ತೇಜೋಮಯವಾದ ದಿವ್ಯಮಂಗಳವಿಗ್ರಹದಿಂದ ಕೂಡಿದವನು ಪುರುಷವಾಚ್ಯನೂ ಆದ ನಾರಾಯಣನು ವಾಸಿಸುತ್ತಾನೆ. (4) "ಅಣೋರಣೀಯಾನ್ಮಹತೋ ಮಹೀಯಾನಾತ್ಮಾಸ್ಯ ಜಂತೋರ್ನಿಹಿತೋ ಗುಹಾಯಾಮ್" (ಕಠ. 1. 2. 20.) ಪರಬ್ರಹ್ಮನು

ಅತ್ಯಂತ ಚಿಕ್ಕದಕ್ಕಿಂತಲೂ ಚಿಕ್ಕವನು. ಅತ್ಯಂತ ದೊಡ್ಡದಕ್ಕಿಂತಲೂ ದೊಡ್ಡವನು, ಸಕಲ ಜಂತುಗಳಿಗೂ ಅಂತರ್ಯಾಮಿ, ಎಲ್ಲರ ಹೃದಯ ಗುಹೆಯಲ್ಲಿ ವಾಸ ಮಾಡತಕ್ಕವನು. (5) ದಹರಂ ವಿಪಾಪ್ಮಂ ಪರವೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಂಸ್ಥಮ್ । ತತ್ರಾಪಿ ದಹರಂ ಗಗನಂ ವಿಶೋಕಸ್ತಸ್ಮಿನ್ ಯದಂತಸ್ತದುಪಾಸಿತವ್ಯಮ್ ॥ (ಶ್ರು. ಸಾ) ಪರಮಾತ್ಮನ ಪಟ್ಟಣವಾದ ಈ ಶರೀರ ಮಧ್ಯದಲ್ಲಿ ಅಲ್ಪವಾದದ್ದೂ, ಪಾಪವಿಲ್ಲದ್ದೂ, ಪರಮಾತ್ಮನಿಗೆ ಶ್ರೇಷ್ಠವಾದ ಮನೆಯಾಗಿರುವ ಹೃದಯಪುಂಡರೀಕವಿರುವುದು. ಆ ಕಮಲದಲ್ಲಿ ಪರಮಾತ್ಮನಿರುವನು. ಆತನನ್ನೂ ಆತನ ಗುಣಗಳನ್ನೂ ಧ್ಯಾನ ಮಾಡತಕ್ಕದ್ದು.

ಹಿಂದಿನ ಮಂತ್ರದಲ್ಲಿ ಜೀವನು ಜನನ ಮರಣವೆಂಬ ಸಂಸಾರದಿಂದ ಬಿಡುಗಡೆಯಾಗಿ ಪರಮ ಪದವಾದ ವೈಕುಂಠವನ್ನು ಪಡೆಯಲು ಮಾಡಬೇಕಾದುದು ವಿವರಿಸಲ್ಪಟ್ಟಿತು. ಈ ಮಂತ್ರವು ನಾರಾಯಣೋಪನಿಷತ್ತನ್ನು ಪ್ರತಿದಿನವೂ ಅಧ್ಯಯನ ಮಾಡುವುದರಿಂದುಂಟಾಗುವ ಫಲವನ್ನು ತಿಳಿಸಿ, ಉಪನಿಷತ್ತು ಮುಕ್ತಾಯವಾಗುತ್ತದೆ.

ಪ್ರಾತರಧೀಯಾನೋ ರಾತ್ರಿಕೃತಂ ಪಾಪಂ ನಾಶಯತಿ । ಸಾಯಮಧೀಯಾನೋ ದಿವಸಕೃತಂ ಪಾಪಂ ನಾಶಯತಿ । ಮಾಧ್ಯಂದಿನ ಮಾದಿತ್ಯಾಭಿಮುಖೋಽಧೀಯಾನಃ ಪಂಚ ಪಾತಕೋಪಪಾತಕಾತ್ಪ್ರಮುಚ್ಯತೇ । ಸರ್ವವೇದ ಪಾರಾಯಣ ಪುಣ್ಯಂ ಲಭತೇ । ನಾರಾಯಣ ಸಾಯುಜ್ಯ ಮವಾಪ್ನೋತಿ ನಾರಾಯಣ ಸಾಯುಜ್ಯ ಮವಾಪ್ನೋತಿ । ಯ ಏವಂ ವೇದ । ಇತ್ಯುಪನಿಷತ್ ॥ ಹರಿಃ ಓಂ.

ಶ್ರೀಮನ್ನಾರಾಯಣಾಯೇತಿ ಸಮರ್ಪಯಾಮಿ.

ಪ್ರಾತರಧೀಯಾನಃ — ಬೆಳಗ್ಗೆ ಪಾರಾಯಣ ಮಾಡುವವನ ರಾತ್ರಿಕೃತಂ ಪಾಪಂ — ರಾತ್ರಿ ಮಾಡಿದ ಪಾಪವನ್ನು ನಾಶಯತಿ — ನಾಶ ಮಾಡುತ್ತದೆ. ಸಾಯಮಧೀಯಾನಃ — ಸಾಯಂಕಾಲ

ಪಾರಾಯಣ ಮಾಡುವವನ **ದಿವಸಕೃತಂ ಪಾಪಂ** = ಹಗಲಲ್ಲಿ ಮಾಡಿದ ಪಾಪವನ್ನು **ನಾಶಯತಿ** = ನಾಶ ಮಾಡುತ್ತದೆ **ಮಾಧ್ಯಂದಿನಮ್** = ಮಧ್ಯಾಹ್ನ **ಆದಿತ್ಯಾಭಿಮುಖಃ** = ಸೂರ್ಯನಿಗೆ ಎದುರಾಗಿ ; **ಅಧೀಯಾನಃ** = ಪಾರಾಯಣ ಮಾಡುವವನ **ಪಂಚಪಾತಕ** = ಐದು ವಿಧವಾದ ಪಾಪಗಳು ಮತ್ತು, **ಉಪಪಾತಕ** = ಅವುಗಳಿಗೆ ಸಮಾನವಾದ (ಮತ್ತು) ಇನ್ನೂ ಹೀನವಾದ ಪಾಪಗಳು **ಪ್ರಮುಚ್ಯತೆ** = ಬಿಟ್ಟು ಹೋಗುತ್ತವೆ. **ಸರ್ವವೇದ ಪಾರಾಯಣ** = ಸಮಸ್ತ ವೇದಗಳ ಪಾರಾಯಣದಿಂದ ಉಂಟಾಗುವ **ಪುಣ್ಯಂ ಲಭತೆ** = ಪುಣ್ಯವನ್ನು ಪಡೆಯುತ್ತಾನೆ. **ನಾರಾಯಣ ಸಾಯುಜ್ಯಮ್** = ನಾರಾಯಣನೊಡನೆ ಸೇರಿಕೊಳ್ಳುವಿಕೆಯನ್ನು **ಅವಾಪ್ನೋತಿ** = ಹೊಂದುತ್ತಾನೆ. **ನಾರಾಯಣ ಸಾಯುಜ್ಯಮ್** = ನಾರಾಯಣನೊಡನೆ ಸೇರಿಕೊಳ್ಳುವಿಕೆಯನ್ನು **ಅವಾಪ್ನೋತಿ** = ಹೊಂದುತ್ತಾನೆ. **ಯ ಏವಂ ವೇದ** = ಜ್ಞಾನಿಗಳು ಈ ಪ್ರಕಾರ ವರ್ಣಿಸುತ್ತಾರೆ. **ಇತ್ಯುಪನಿಷತ್** = ಇದೇ ವೇದಸಾರವಾದ ಉಪನಿಷತ್ತು.

ಈ ಉಪನಿಷತ್ತನ್ನು ಪ್ರತಿದಿವಸವೂ ಮೂರು ವೇಳೆ ಪಾರಾಯಣ ಮಾಡಬೇಕೆಂದು ಹೇಳಿದೆ. ಹಾಗೆ ಮಾಡುವುದರಿಂದ, ರಾತ್ರಿ ಹಗಲು ಮಾಡಿದ ಪಾಪಗಳು ನಾಶವಾಗುತ್ತವೆ. ಪಾಪವೆಂದರೆ ಶಾಸ್ತ್ರದಲ್ಲಿ ಮಾಡಬಾರದೆಂದು ಹೇಳಿರುವುದನ್ನು ಮಾಡುವುದು, ಮಾಡಬೇಕೆಂದು ಹೇಳಿರುವುದನ್ನು ಮಾಡದಿರುವುದು. ಮನುಷ್ಯನು ಬುದ್ಧಿಪೂರ್ವಕ ಅನೇಕ ಪಾಪಗಳನ್ನು ಮಾಡುತ್ತಲೇ ಇರುತ್ತಾನೆ. ಸದ್ಗತಿ ಹೊಂದಬೇಕೆಂಬ ಅಪೇಕ್ಷೆಯುಳ್ಳವನು, ತಾನು ಇದುವರೆಗೆ ಮಾಡಿದ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಮುಂದೆ ಅಂಥವುಗಳನ್ನು ಮಾಡದಿರುವಂತೆ ಎಚ್ಚರಿಕೆಯಿಂದಿರಬೇಕು. ಹಾಗಿದ್ದರೂ, ತನಗೆ ತಿಳಿಯದೆಯೇ ಕೆಲವು ಪಾಪಕಾರ್ಯ ಮಾಡುತ್ತಾನೆ. ಪಾಪಕಾರ್ಯ ಮಾಡಬಾರದೆಂದಿದ್ದರೂ ಕೆಲವು ವೇಳೆ ಅವನ ಪ್ರಾರಬ್ಧಕರ್ಮವು ಬಲಾತ್ಕಾರವಾಗಿ ಪಾಪಕಾರ್ಯವನ್ನು

ಮಾಡಿಸುತ್ತವೆ. ಪಾರಾಯಣದಿಂದ ಈ ವಿಧವಾದ ಪಾಪ ಪರಿಹಾರವಾಗುತ್ತೆಂದು ಇಲ್ಲಿ ಹೇಳಿದೆ. ಪಾರಾಯಣ ಮಾಡುವುದೆಂದರೆ ಉಪನಿಷತ್ತಿನಲ್ಲಿ ವರ್ಣಿಸಿರುವ ನಾರಾಯಣನ ಮಹಿಮೆಯನ್ನು ಮನಸ್ಸಿನಲ್ಲಿ ಚೆನ್ನಾಗಿ ನೆಲಸುವಂತೆ ಮಾಡಿ ಅದೇ ಧ್ಯಾನದಿಂದ ಪಾರಾಯಣ ಮಾಡಬೇಕು. ಆ ಪ್ರಕಾರ ಬೆಳಗ್ಗೆ ಪಾರಾಯಣ ಮಾಡಿದರೆ ರಾತ್ರಿ ಮಾಡಿದ ಪಾಪಗಳು ನಾಶವಾಗುತ್ತವೆ. ಸಾಯಂಕಾಲ ಮಾಡಿದರೆ ಹಗಲಿನಲ್ಲಿ ಮಾಡಿದ ಪಾಪ ಪರಿಹಾರವಾಗುತ್ತದೆ. ಮಧ್ಯಾಹ್ನ ಸೂರ್ಯನಿಗೆ ಎದುರಾಗಿ ಪಾರಾಯಣ ಮಾಡಿದರೆ ಐದು ವಿಧವಾದ ಪಾಪಗಳು, ಅವುಗಳಿಗೆ ಸಮಾನವಾದ ಪಾಪಗಳೂ ನಾಶವಾಗುತ್ತವೆ. ಬ್ರಾಹ್ಮಣವಧೆ, ಸುರಾಪಾನ, ಬ್ರಾಹ್ಮಣನ ಚಿನ್ನವನ್ನು ಕದಿಯುವುದು, ಗುರುಪತ್ನಿಗಮನ, ಮೇಲಿನ ನಾಲ್ಕು ಮಂದಿಗಳ ಸಹವಾಸ, ಇವು ಐದು ಮಹಾಪಾಪಗಳೆನಿಸುತ್ತವೆ. ತಾನು ಶ್ರೇಷ್ಠವಂಶದವನೆಂದು ಸುಳ್ಳು ಹೇಳುವುದು, ವೇದಗಳನ್ನು ಮರೆಯುವುದು, ದೂಷಿಸುವುದು, ತನ್ನಲ್ಲಿ ನಂಬಿಕೆಯಿಂದ ಮಡಗಿರುವ ವಸ್ತುವನ್ನು ಕದಿಯುವುದು, ತನ್ನ ಸಹೋದರಿಯೊಡನೆ ಕಾಮಸಂಪರ್ಕ ಹೊಂದುವುದು ಇವೇ ಮುಂತಾದವು ಮಹಾ ಪಾಪಗಳಿಗೆ ಸಮಾನವಾದವುವೆಂದು ಶಾಸ್ತ್ರವು ಹೇಳುತ್ತದೆ. ಮತ್ತು ಸಕಲ ವೇದಗಳನ್ನು ಪಾರಾಯಣ ಮಾಡುವುದರಿಂದುಂಟಾಗುವ ಪುಣ್ಯವು ಲಭಿಸುತ್ತದೆ. ಹೀಗೆ ಸಮಸ್ತ ಪಾಪಗಳಿಂದ ಬಿಡುಗಡೆಯಾದವನಿಗೆ ಮರಣಾನಂತರ ಪರಮಪದವು ಲಭಿಸುತ್ತದೆ. ಅಲ್ಲಿ ಪರಬ್ರಹ್ಮನಾದ ನಾರಾಯಣನೊಡನೆ ಸೇರಿಕೊಳ್ಳುತ್ತಾನೆ. ಈ ಪ್ರಕಾರವಾಗಿ ಭಗವನ್ನಾರಾಯಣನ ಅದ್ಭುತವಾದ ಮಹಿಮೆಯನ್ನು ವಿಶದವಾಗಿ ವಿವರಿಸಿ ಈ ಉಪನಿಷತ್ತು ಮುಕ್ತಾಯವಾಗುತ್ತದೆ.

ಈ ಉಪನಿಷತ್ತು ನಾರಾಯಣನು ಪುರುಷವಾಚ್ಯನೆಂದು ಪ್ರಾರಂಭವಾಗುತ್ತದೆ. ಸೃಷ್ಟಿಗೆ ಮೊದಲು ಒಬ್ಬನೇ ಇದ್ದ ಆತನು ತನ್ನ ಸಂಕಲ್ಪದಿಂದ ಚೇತನ ಅಚೇತನಗಳಿಂದ ಕೂಡಿದ ಪ್ರಪಂಚವನ್ನು ಸೃಷ್ಟಿಸಿ, ಸೃಷ್ಟಿಸಿದ ಜಗತ್ತನ್ನು ಸಂರಕ್ಷಿಸಿ, ಪ್ರಳಯದಲ್ಲಿ ಪುನಃ ತನ್ನಲ್ಲಿ ಅಡಗಿಸಿ

ಕೊಳ್ಳುತ್ತಾನೆ. ಆತನು ಸರ್ವಾಂತರ್ಯಾಮಿ. ಸಕಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡು ತನ್ನ ನಿಯಮನಾನುಸಾರ ಅವು ನಡೆಯುವಂತೆ ಮಾಡುತ್ತಾನೆ. ಆತನ ಮಂತ್ರವಾದ ಓಂನಮೋ ನಾರಾಯಣಾಯ ಎಂಬುದನ್ನು ಭಕ್ತಿವಿಶ್ವಾಸದಿಂದ ಜಪಮಾಡುವ ಚೇತನನಿಗೆ ಇಹಲೋಕದ ಸುಖಸಂಪತ್ತುಗಳೊಂದಿಗೆ ಮರಣಾನಂತರ ಮೋಕ್ಷವು ಲಭಿಸುತ್ತದೆ. ನಾರಾಯಣನು ಆನಂದಮಯನು. ಓಂಕಾರಸ್ವರೂಪನು. ಓಂಕಾರವನ್ನು ಜಪಮಾಡುವ ಯೋಗಿಯು ಸಂಸಾರದಿಂದ ಬಿಡುಗಡೆಹೊಂದುತ್ತಾನೆ. ಓಂನಮೋ ನಾರಾಯಣಾಯ ಎಂಬ ಮಂತ್ರವನ್ನು ಉಪಾಸನೆ ಮಾಡುವವನಿಗೆ ಪರಮಪದವಾದ ವೈಕುಂಠ ಲೋಕವು ಲಭಿಸುತ್ತದೆ. ವೇದಗಳಲ್ಲಿ ಹೇಳಿರುವ ಪರಬ್ರಹ್ಮ ಲಕ್ಷಣಗಳೆಲ್ಲವೂ ನಾರಾಯಣನಲ್ಲಿರುವುದಾಗಿ ಈ ಉಪನಿಷತ್ತು ವಿವರಿಸಿರುವುದರಿಂದ, ಪರಬ್ರಹ್ಮನೇ ನಾರಾಯಣನೆಂದು ಇದು ನಿರ್ಧರಿಸುತ್ತದೆ.

ಮುಖ್ಯವಾದ ಇತರ ಉಪನಿಷತ್ತುಗಳೂ ಸಹ ನಾರಾಯಣನೇ ಪರಬ್ರಹ್ಮನೆಂದು ಪ್ರತಿಪಾದಿಸುತ್ತವೆ. ಇಲ್ಲಿ ಕೊಟ್ಟಿರುವ ಮಂತ್ರಗಳು ಆ ವಿಷಯವನ್ನು ಸ್ಪಷ್ಟಪಡಿಸುತ್ತವೆ.

ಉಪಾಸನೆ ಮಾಡಲು ವೇದಗಳಲ್ಲಿ ಅನೇಕ ವಿದ್ಯೆಗಳು ಹೇಳಲ್ಪಟ್ಟಿವೆ. ಕೆಲವು ವಿದ್ಯೆಗಳಲ್ಲಿ ಕೆಲವು ಕಡೆ ಉಪಾಸನೆ ಮಾಡಬೇಕಾದ ವಸ್ತು, ಪರಬ್ರಹ್ಮ, ಪರತತ್ವ, ಪರಂಜ್ಯೋತಿ, ಪರಮಾತ್ಮ ಎಂದು ಹೇಳಿದೆ. ಈ ಪದಗಳಿಂದ ಯಾವ ದೇವತೆ ಉದ್ದೇಶಿಸಲ್ಪಟ್ಟಿದೆ ಎಂಬುದು ಅಲ್ಲಿ ಹೇಳುವುದಿಲ್ಲ. ಆ ಪದಗಳು ಸಾಮಾನ್ಯ ಶಬ್ದಗಳಾದುದರಿಂದ ಅವನ್ನು ಯಾವ ದೇವತೆಗಾದರೂ ಉಪಯೋಗಿಸಬಹುದು. ಆದರೆ ಈ ಶಬ್ದಗಳು ನಾರಾಯಣನಿಗೆ ಮಾತ್ರವೇ ಅನ್ವಯವಾಗುತ್ತವೆಂದು ತೈತ್ತಿರೀಯೋಪನಿಷತ್ತಿನ 'ನಾರಾಯಣವಲ್ಲಿ' ಯು ಸ್ಪಷ್ಟವಾಗಿ ಹೇಳುತ್ತದೆ.

ನಾರಾಯಣಪರಂಬ್ರಹ್ಮ | ತತ್ವಂನಾರಾಯಣಃ ಪರಃ
ನಾರಾಯಣ ಪರೋಜ್ಯೋತಿಃ | ಆತ್ಮಾನಾರಾಯಣಃಪರಃ ||

ನಾರಾಯಣನೇ ಪರಬ್ರಹ್ಮನು, ನಾರಾಯಣನೇ ಪರತತ್ತ್ವವು, ನಾರಾಯಣನೇ ಪರಂಜ್ಯೋತಿಯು, ನಾರಾಯಣನೇ ಪರಮಾತ್ಮನು. ಉಪಾಸಕನು ಧ್ಯಾನಮಾಡಬೇಕಾದ ಪರಂಬ್ರಹ್ಮ, ಪರತತ್ತ್ವ, ಪರಂಜ್ಯೋತಿ, ಪರಮಾತ್ಮಾ ಎಲ್ಲವೂ ನಾರಾಯಣನೇ ಎಂದು ಮೇಲಿನ ಶ್ರುತಿವಾಕ್ಯವು ಸ್ಪಷ್ಟಪಡಿಸುತ್ತದೆ. ನಾರಾಯಣ ಪರಂಬ್ರಹ್ಮ : "ಬೃಹತಿ ಬೃಂಹಯತಿ ತಸ್ಮಾತ್ ಉಚ್ಯತೇ ಪರಂಬ್ರಹ್ಮ" ದೊಡ್ಡದಾಗಿರುವುದರಿಂದಲೂ, ದೊಡ್ಡದಾಗಿ ಮಾಡುವುದರಿಂದಲೂ ಪರಬ್ರಹ್ಮ ಎಂದು ಹೇಳಲ್ಪಟ್ಟಿದೆ. ಹಾಗೆಂದರೆ ಭಗವಂತನಾದ ನಾರಾಯಣನು ಎಲ್ಲಕ್ಕಿಂತಲೂ ದೊಡ್ಡವನು. ತನ್ನನ್ನು ಆಶ್ರಯಿಸಿದವರನ್ನು ತನಗೆ ಸಮಾನವಾಗಿ ಮಾಡುತ್ತಾನೆಂದು ಇದರ ತಾತ್ಪರ್ಯ. 'ಬ್ರಹ್ಮ' ಪದವು ಪರಬ್ರಹ್ಮನಿಗೇ ಅಲ್ಲದೆ ಇತರರಿಗೂ ಉಪಯೋಗಿಸಲ್ಪಟ್ಟಿದೆ. ಚತುರ್ಮುಖಬ್ರಹ್ಮ, ಗೌರವಕ್ಕಾಗಿ ಶಿವಬ್ರಹ್ಮ ಶುಕಬ್ರಹ್ಮ ಎಂದು ಹೇಳುವುದುಂಟು. ಇವರೆಲ್ಲರಿಗಿಂತಲೂ ಶ್ರೇಷ್ಠವಾದ ಪರಾತ್ಪರ ವಸ್ತುವೇ ನಾರಾಯಣನು ಎನ್ನುವುದಕ್ಕಾಗಿ ನಾರಾಯಣನು ಪರಬ್ರಹ್ಮನೆಂದು ಹೇಳಿದೆ.

ನಾರಾಯಣನು ಪರತತ್ತ್ವವು : ತತ್ತ್ವವೆಂದರೆ ಸತ್ಯವೂ, ಯಾವಾಗಲೂ ಶಾಶ್ವತವೂ ಆಗಿರುವ ವಸ್ತು. ಪರತತ್ತ್ವವೆನ್ನುವುದರಿಂದ ತತ್ತ್ವವು ಒಂದಕ್ಕಿಂತಲೂ ಹೆಚ್ಚಾಗಿವೆ ಎಂದಾಯಿತು. ತತ್ತ್ವಗಳು ಮೂರೆಂದು ಶ್ರುತಿ ಹೇಳುತ್ತದೆ. ಜ್ಞಾನವಿರುವ 'ಚಿತ್ತು', ಜ್ಞಾನವಿಲ್ಲದ 'ಅಚಿತ್ತು', ಇವೆರಡಕ್ಕೂ ಸ್ವಾಮಿಯಾಗಿ ಇವುಗಳನ್ನು ನಿಯಮಿಸುವ 'ಈಶ್ವರ' ಚಿತ್ತು, ಅಚಿತ್ತು, ಈಶ್ವರ ಎಂಬ ಮೂರು ತತ್ತ್ವಗಳಲ್ಲಿ ಈಶ್ವರನಾದ ನಾರಾಯಣನು ಶ್ರೇಷ್ಠನಾದುದರಿಂದ ಆತನೇ ಪರತತ್ತ್ವವು.

ನಾರಾಯಣನು ಪರಂಜ್ಯೋತಿ : ಜ್ಯೋತಿ ಎಂದರೆ ಪ್ರಕಾಶ, ಕಾಂತಿ. ಸೂರ್ಯ, ಚಂದ್ರ, ಅಗ್ನಿ, ನಕ್ಷತ್ರ, ಇವು ಇಹಲೋಕದಲ್ಲಿ ಪ್ರಕಾಶವನ್ನು ಕೊಡುವ ವಸ್ತುಗಳು. ನಾರಾಯಣನು ಇವುಗಳೆಲ್ಲಕ್ಕಿಂತಲೂ ಅತ್ಯಧಿಕ ತೇಜಸ್ಸಿನಿಂದ ಕೂಡಿದವನಾಗಿ ಜ್ಯೋತಿರ್ಮಯನಾದುದರಿಂದ ಆತನು ಪರಂಜ್ಯೋತಿ. ಆತನಿಂದಲೇ ಮೇಲಿನ ವಸ್ತುಗಳು ಪ್ರಕಾಶವನ್ನು ಪಡೆಯುತ್ತವೆ.

ನಾರಾಯಣನು ಪರಮಾತ್ಮ: ವೇದಗಳಲ್ಲಿ ಆತ್ಮಶಬ್ದವು ಕೆಲವು ಕಡೆ ಪರಬ್ರಹ್ಮವನ್ನೂ ಕೆಲವು ಕಡೆ ಜೀವಾತ್ಮನನ್ನೂ ಹೇಳುತ್ತದೆ. ನಾರಾಯಣನು ಜೀವಾತ್ಮನಿಗಿಂತ ಶ್ರೇಷ್ಠನಾದುದರಿಂದ ಆತನು ಪರಮಾತ್ಮನೆಂದು ಹೇಳಿದೆ. ಆತ್ಮ ಎಂದರೆ ಒಂದು ದೇಹದೊಳಗಿದ್ದುಕೊಂಡು ಅದನ್ನು ನಿಯಮಿಸುವಂತಾದ್ದು. ಪರಮಾತ್ಮನು ಸಕಲ ವಸ್ತುಗಳಲ್ಲೂ ಅಂತರ್ಯಾಮಿಯಾಗಿದ್ದು ಅವುಗಳನ್ನು ನಿಯಮಿಸುವಂತಹವನು.

ಮೇಲೆ ವಿವರಿಸಿದ ಸಾಮಾನ್ಯ ಶಬ್ದಗಳು ನಾರಾಯಣನನ್ನು ತಿಳಿಯಪಡಿಸುವುದರಿಂದ ನಾರಾಯಣನೇ ಪರಬ್ರಹ್ಮನೆಂದು ಹೇಳಬಂತಾಯಿತು.

ಸಕಲವನ್ನೂ ವ್ಯಾಪಿಸಿಕೊಂಡಿರುವ ಪರಬ್ರಹ್ಮನು ಪುರುಷಶಬ್ದವಾಚ್ಯನೆಂದೂ, ಪುರುಷವಾಚ್ಯನಾದ ಪರಬ್ರಹ್ಮನು ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನೆಂದೂ ಪುರುಷಸೂಕ್ತವು ಹೇಳುತ್ತದೆ. ಇಲ್ಲಿಯೂ ಸಹ ನಾರಾಯಣನೇ ಪರಬ್ರಹ್ಮನೆಂದು ತಿಳಿಯಪಡಿಸಲಾಯಿತು.

ಆದುದರಿಂದ ಪರಬ್ರಹ್ಮ, ಪರತತ್ವ, ಪರಂಜ್ಯೋತಿ, ಪರಮಾತ್ಮ, ಪುರುಷ, ಈ ಎಲ್ಲಾ ಸಾಮಾನ್ಯ ಶಬ್ದಗಳೂ ನಾರಾಯಣನನ್ನೇ ಹೇಳುತ್ತವೆ ಎಂದು ನಿರ್ಣಯವಾಯಿತು. ಇನ್ನು ನಾವು ಮುಂದೆ ಅಧ್ಯಯನಮಾಡುವ ಮಂತ್ರಗಳಲ್ಲಿ ಈ ಶಬ್ದಗಳು ಬಂದಿರುವ ಕಡೆಯಲ್ಲೆಲ್ಲಾ ಅವು ನಾರಾಯಣನಿಗೆ ಅನ್ವಯವಾಗುತ್ತವೆ, ಎಂಬುದನ್ನು ಮರೆಯಬಾರದು.

ಪ್ರಪಂಚ ಸೃಷ್ಟಿಯಾಗುವುದಕ್ಕೆ ಮೊದಲು ಇದ್ದವನು ಪರಬ್ರಹ್ಮನು ಒಬ್ಬನೇ. ಪರಬ್ರಹ್ಮ ಲಕ್ಷಣಗಳಲ್ಲಿ ಇದೊಂದು ಮುಖ್ಯವಾದುದು.

(1) "ಬ್ರಹ್ಮವಾ ಇದಮಗ್ರ ಆಸೀದೇಕಮೇವ" (ಶ್ರು) ಸೃಷ್ಟಿಗೆ ಮೊದಲು ಈ ಪ್ರಪಂಚವು ಬ್ರಹ್ಮನಾಗಿಯೇ ಇತ್ತು. ಹಾಗೆಂದರೆ ಸೂಕ್ಷ್ಮ ಚೇತನಾಚೇತನ ವಿಶಿಷ್ಟನಾದ ಪರಬ್ರಹ್ಮನೊಬ್ಬನೇ ಇದ್ದವನು. ಅಲ್ಲಿನ

ಬ್ರಹ್ಮಶಬ್ದವು ನಾರಾಯಣನಿಗೆ ಅನ್ವಯವಾಗುವುದರಿಂದ ಸೃಷ್ಟಿಗೆ ಮೊದಲು ಸೂಕ್ಷ್ಮಚೇತನಾಚೇತನ ವಿಶಿಷ್ಟನಾದ ನಾರಾಯಣನೊಬ್ಬನೇ ಇದ್ದವನು ಎಂದಾಯಿತು.

(2) "ಆತ್ಮೈವೇದಮಗ್ರ ಆಸೀತ್ ಪುರುಷವಿಧಃ" (ಬೃ) ಈ ಪ್ರಸಂಗವು ಸೃಷ್ಟಿಗೆ ಮೊದಲು ಪುರುಷವಾಚ್ಯನಾದ ನಾರಾಯಣಾಕಾರವಾದ ಆತ್ಮವಾಗಿಯೇ ಇತ್ತು.

(3) "ನೈವೇಹ ಕಿಂಚನ ಅಗ್ರ ಆಸೀದಮೂಲಂ ಅನಾಧಾರಾ ಇಮಾಃ ಪ್ರಜಾಃ ಪ್ರಜಾಯಂತೇ ದಿವ್ಯೋ ದೇವ ಏಕೋ ನಾರಾಯಣಃ" (ಸುಬಾಲೋಪನಿಷತ್) ಮೊದಲು (ಸೃಷ್ಟಿಗೆ ಮೊದಲು) ಇಲ್ಲಿ ಯಾವುದೂ ಇರಲಿಲ್ಲ. ಪರಮಪದದಲ್ಲಿರುವ ನಾರಾಯಣನೊಬ್ಬನಿಂದಲೇ ಇವು ಉಂಟಾಗುತ್ತವೆ. ಅವುಗಳಿಗೆ ಆತನಲ್ಲದೆ ಬೇರೆ ಕಾರಣವೂ ಇಲ್ಲ ಆಧಾರವೂ ಇಲ್ಲ. (4) "ಆತ್ಮಾವಾ ಇದಮೇಕ ಏವಾಗ್ರ ಆಸೀತ್" (ಐ 1-1.1.) ಎಲ್ಲಕ್ಕಿಂತಲೂ ಮೊದಲು ಎಂದರೆ ಸೃಷ್ಟಿಗೆ ಮೊದಲು ಆತ್ಮವಾಚ್ಯನಾದ ನಾರಾಯಣನು ಒಬ್ಬನು ಮಾತ್ರವೇ ಇದ್ದನು. (5) "ಏಕೋ ಹ ವೈ ನಾರಾಯಣ ಆಸೀತ್ ನ ಬ್ರಹ್ಮಾ, ನೇಶಾನಃ" (ಮಹೋಪನಿಷತ್) ನಾರಾಯಣನು ಒಬ್ಬನೇ ಇದ್ದನು. ಬ್ರಹ್ಮನಾಗಲೀ ಶಿವನಾಗಲೀ ಇರಲಿಲ್ಲ. ಇದರಿಂದ ಬ್ರಹ್ಮ, ಶಿವ ಮುಂತಾದವರು ಸೃಷ್ಟರಾದವರೆಂದಾಯಿತು.

ಮೇಲಿನ ಬೇರೆ ಬೇರೆ ಉಪನಿಷತ್ತುಗಳ ಮಂತ್ರಗಳು ಪ್ರಪಂಚ ಸೃಷ್ಟಿಗೆ ಮೊದಲಿದ್ದವನು ನಾರಾಯಣನೊಬ್ಬನೇ ಎಂದು ಪ್ರಕಾಶಪಡಿಸುತ್ತವೆ.

ಸೃಷ್ಟಿ, ಸ್ಥಿತಿ, ಲಯ ಕಾರಣತ್ವವು ಪರಬ್ರಹ್ಮ ಲಕ್ಷಣ :—

1. ಯತೋ ವಾ ಇಮಾನಿ ಭೂತಾನಿ ಜಾಯಂತೇ । ಯೇನ ಜಾತಾನಿ ಜೀವಂತಿ । ಯತ್ಪ್ರಯಂತ್ಯಭಿಸಂವಿಶಂತಿ । ತದ್ವಿಜಿಜ್ಞಾಸಸ್ವ ತದ್ಬ್ರಹ್ಮೇತಿ ।

(ತೈ. ಭೃ. 1.) ಸಕಲ ವಸ್ತುಗಳು ಯಾವನಿಂದ ಉಂಟಾದವೋ ಯಾವನಿಂದ ರಕ್ಷಿಸಲ್ಪಡುತ್ತವೋ, ಯಾವನಲ್ಲಿ ಪುನಃ ಹೋಗಿ ಸೇರುವವೋ ಅತನನ್ನು ತಿಳಿದುಕೊಳ್ಳುವವನಾಗು. ಅವನೇ ಬ್ರಹ್ಮನು. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನು ಬ್ರಹ್ಮವಾಚ್ಯನಾದ ನಾರಾಯಣನೆಂದು ಈ ಮಂತ್ರದಲ್ಲಿ ಹೇಳಿದೆ. 2. "ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ." (ಛಾ. 3. 14. 1) ಸಮಸ್ತ ವಸ್ತುಗಳೂ ಪರಬ್ರಹ್ಮನ ಶರೀರವು. ಆತನಿಂದಲೇ ಜಗತ್ತು ಉಂಟಾಗುವುದು, ಆತನಲ್ಲೇ ಲಯವಾಗುವುದು, ಆತನಿಂದಲೇ ಜೀವಿಸುವುದು. (ಆದುದರಿಂದ) ಶಾಂತಚಿತ್ತದಿಂದ ಆತನನ್ನು ಉಪಾಸನೆ ಮಾಡಬೇಕು. ಈ ಮಂತ್ರವೂ ಸಹ ಬ್ರಹ್ಮವಾಚ್ಯನಾದ ನಾರಾಯಣನು ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನು, ಚರಾಚರಾತ್ಮಕವಾದ ಪ್ರಪಂಚವು ಆತನ ಶರೀರವು. ಕಾರಣವಸ್ತುವಾದ ಆತನನ್ನೇ ಶಾಂತಚಿತ್ತದಿಂದ ಉಪಾಸನೆ ಮಾಡಬೇಕೆಂದು ಹೇಳುತ್ತದೆ. 3. "ಸರ್ವದಾ ಸರ್ವಕೃತ್ ಸರ್ವಃ ಪರಮಾತ್ಮೇತ್ಯುದಾಹೃತಃ" (ಸುಬಾಲೋಪನಿಷತ್) ಪರಮಾತ್ಮವಾಚ್ಯನಾದ ನಾರಾಯಣನು ಯಾವಾಗಲೂ ಎಲ್ಲವನ್ನೂ ಮಾಡುವವನು, ಸಮಸ್ತವೂ ಆದವನು ಎಂದು ಹೇಳಲ್ಪಡುತ್ತಾನೆ. 4. "ಸ ಇಮಾನ್ ಲೋಕಾನಸೃಜತ." (ಐ. 1. 1. 2) ಮೊದಲನೇ ಮಂತ್ರದಲ್ಲಿ ಸೃಷ್ಟಿಗೆ ಮೊದಲು ಬ್ರಹ್ಮವಾಚ್ಯನಾದ ನಾರಾಯಣನೊಬ್ಬನೇ ಇದ್ದನು ಎಂದು ಹೇಳಿ, ಈ ಮಂತ್ರದಲ್ಲಿ ಆ ನಾರಾಯಣನೇ ಈ ಸಮಸ್ತ ಪ್ರಪಂಚವನ್ನು ಸೃಷ್ಟಿಸಿದವನು, ಕಾಪಾಡುವವನು, ಸಂಹಾರ ಮಾಡುವವನು ಎಂದು ಹೇಳುತ್ತದೆ.

ಪರಬ್ರಹ್ಮನು ಸರ್ವವ್ಯಾಪಿ, ಸರ್ವಾಂತರ್ಯಾಮಿ ಎಂದರೆ ಸಕಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡಿರುವವನು.

"ದಿವ್ಯೋ ಹ್ಯಮೂರ್ತಃ ಪುರುಷಃ ಸಬಾಹ್ಯಾಭ್ಯಂತರಃ." (ಮುಂ 2. 1. 2) ಪರಮಪದದಲ್ಲಿರುವವನೂ ಪ್ರಕೃತಿಸಂಬಂಧವಾದ ದೇಹವಿಲ್ಲದವನೂ ಆದ ಪುರುಷವಾಚ್ಯನಾದ ನಾರಾಯಣನು ಸಮಸ್ತವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡಿದ್ದಾನೆ.

2. "ಅಂತಃ ಪ್ರವಿಷ್ಟಶ್ಶಾಸ್ತಾ ಜನಾನಾಂ ಸರ್ವಾತ್ಮಾ." (ಯಜುರ್ವೇದ 3. 2. 4) ಆತ್ಮನಾಮಕನಾದ ನಾರಾಯಣನು ಸಕಲ ಜೀವಿಗಳಿಗೂ ಅಂತರ್ಯಾಮಿಯಾಗಿದ್ದು ನಿಯಮಿಸುತ್ತಾನೆ.

3. "ಯ ಆತ್ಮಾನ ಮಂತರೋ ಯಮಯತಿ." (ಬೃ. 3.7.22) ಆತ್ಮಶಬ್ದದಿಂದ ಹೇಳಲ್ಪಡುವ ನಾರಾಯಣನು ಅಂತರ್ಯಾಮಿಯಾಗಿದ್ದು ಜೀವಾತ್ಮರನ್ನು ನಿಯಮಿಸುತ್ತಾನೆ.

4. ಯಚ್ಚ ಕಿಂಚಿತ್ ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತಃ ॥ (ತೈ. ನಾ 11. 8.) ಜಗತ್ತಿನಲ್ಲಿ ಯಾವದೊಂದು ಕಾಣಲ್ಪಡುತ್ತದೋ, ಯಾವದೊಂದು ಕೇಳಲ್ಪಡುತ್ತದೋ ಆ ಸಮಸ್ತವನ್ನೂ ಪರಬ್ರಹ್ಮನಾದ ನಾರಾಯಣನು ಒಳಗೂ ಹೊರಗೂ ವ್ಯಾಪಿಸಿಕೊಂಡಿದ್ದಾನೆ.

5. "ತೇನೇದಂ ಪೂರ್ಣಂ ಪುರುಷೇಣ ಸರ್ವಮ್." (ಶ್ವೇ. 3. 9. 10) ಪುರುಷಶಬ್ದದಿಂದ ಹೇಳಲ್ಪಡುವ ನಾರಾಯಣನು ಈ ಸಮಸ್ತ ವಸ್ತುಗಳನ್ನೂ ಸಂಪೂರ್ಣವಾಗಿ ವ್ಯಾಪಿಸಿಕೊಂಡಿದ್ದಾನೆ.

6. "ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ" (ಕಠ. 2. 3. 17) ಪುರುಷಶಬ್ದವಾಚ್ಯನಾದ ನಾರಾಯಣನು ಪ್ರಾಣಿಗಳಿಗೆ ಯಾವಾಗಲೂ ಅಂತರ್ಯಾಮಿಯಾಗಿ ಹೃದಯ ಕಮಲದಲ್ಲಿ ಹೆಬ್ಬೆಟ್ಟಿನ ಪ್ರಮಾಣದಲ್ಲಿ ನೆಲಸಿರುತ್ತಾನೆ.

7. "ಏಷ ಸರ್ವಭೂತಾಂತರಾತ್ಮಾ ... ದೇವ ಏಕೋ ನಾರಾಯಣಃ" (ಸುಬಾಲೋಪನಿಷತ್ತು) ಸಕಲಪ್ರಾಣಿಗಳಿಗೂ ಅಂತರಾತ್ಮನಾಗಿರುವವನೂ, ಸ್ವಯಂಪ್ರಕಾಶನೂ ಅದ್ವಿತೀಯನೂ ಆಗಿರುವವನು ನಾರಾಯಣನು.

ಸರ್ವಾಂತರ್ಯಾಮಿಯೂ, ಸರ್ವವನ್ನೂ ವ್ಯಾಪಿಸಿರುವವನು ಪರಬ್ರಹ್ಮನಾದ ನಾರಾಯಣನೇ ಎಂಬುದು ಮೇಲಿನ ಮಂತ್ರಗಳಿಂದ ಖಚಿತವಾಗುತ್ತದೆ.

(1) "ನಾರಾಯಣಪರೋ ಜ್ಯೋತಿಃ" (ತೈ) ನಾರಾಯಣನು ಪರಂಜ್ಯೋತಿ ಶಬ್ದದಿಂದ ಹೇಳಲ್ಪಡುತ್ತಾನೆ.

(2) "ಅಥ ಯ ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ." (ಛಾ. 8. 3. 4.) ಜೀವನನು ಈ ದೇಹದಿಂದ ಹೊರಟು ಪರಂಜ್ಯೋತಿ ಶಬ್ದದಿಂದ ಹೇಳಲ್ಪಡುವ ನಾರಾಯಣನನ್ನು ಹೊಂದಿ ತನಗೆ ಅಸಾಧಾರಣವಾದ ನಿಜಸ್ವರೂಪವನ್ನು ಪಡೆಯುತ್ತಾನೆ. ಜೀವಾತ್ಮನಿಗೆ ಪ್ರಕೃತಿಸಂಬಂಧವಿರುವಾಗ ಅವನ ಸ್ವಾಭಾವಿಕವಾದ ಸ್ವರೂಪವು ಅಜ್ಞಾನದಿಂದ ಮುಚ್ಚಲ್ಪಟ್ಟಿರುತ್ತದೆ. ಈ ಶರೀರದಿಂದ ಬಿಡುಗಡೆಯಾಗಿ ಪರಮಪದವನ್ನು ಹೊಂದುವಾಗ ಅಜ್ಞಾನವು ಹೋಗಿ ಸ್ವಾಭಾವಿಕವಾದ ರೂಪದಿಂದ ಪ್ರಕಾಶಿಸುತ್ತಾನೆ.

(3) ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಮ್ | ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿ ಸ್ತದಾತ್ಮವಿದೋ ವಿದುಃ || (ಮುಂ. 2. 2. 10.) ಸ್ವಯಂ ಪ್ರಕಾಶವಾದುದರಿಂದ ಹಿರಣ್ಮಯವೆನ್ನುವ ಪರಮಾತ್ಮನ ವಾಸಸ್ಥಾನವಾಗಿರುವ ಪರಮಪದದಲ್ಲಿ ಸತ್ತ್ವರಜಸ್ತಮೋಗುಣ ಗಳಿಲ್ಲದವನೂ ಪಾಪವಿಲ್ಲದವನೂ ಪರಿಶುದ್ಧನೂ ಜ್ಯೋತಿಸ್ಸುಗಳಿಗೂ ಜ್ಯೋತಿಯನ್ನು ಕೊಡುವವನೂ ಆತ್ಮಸ್ವರೂಪವನ್ನು ಅರಿತ ಜ್ಞಾನಿಗಳಿಂದ ಅರಿಯಲ್ಪಟ್ಟವನೂ ಶ್ರುತಿ ಪ್ರಸಿದ್ಧನೂ ಆದ ಪರಬ್ರಹ್ಮನಾದ ನಾರಾಯಣನು ಪ್ರಕಾಶಿಸುತ್ತಾನೆ. ಪ್ರಕಾಶವನ್ನು ಕೊಡುವ ವಸ್ತುಗಳಿಗೂ ಪ್ರಕಾಶವನ್ನುಂಟುಮಾಡುವ ನಾರಾಯಣನು ಜ್ಯೋತಿರ್ಮಯನೆಂದು ಹೇಳುತ್ತದೆ.

(4) "ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ." (ಛಾ. 3. 13. 7.) ದೇವಲೋಕಕ್ಕೆ ಮೇಲುಗಡೆ ಸ್ವಯಂಪ್ರಕಾಶವೂ ದಿವ್ಯವೂ ಆದ ಅಪ್ರಾಕೃತ ವೈಕುಂಠದಲ್ಲಿ ಜ್ಯೋತಿಸ್ಸ್ವರೂಪನಾದ ನಾರಾಯಣನು ಪ್ರಕಾಶಿಸುತ್ತಾನೆ.

(5) ನತತ್ರ ಸೂರ್ಯೋ ಭಾತಿ ನಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ | ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ || (ಕಠ. 2. 2. 15.) ಪರಮಾತ್ಮನಾದ ನಾರಾಯಣನಿರುವಲ್ಲಿ ಸೂರ್ಯನು ಪ್ರಕಾಶಿಸುವುದಿಲ್ಲ. ಚಂದ್ರ, ನಕ್ಷತ್ರಗಳು ಪ್ರಕಾಶಿಸುವುದಿಲ್ಲ. ಮಿಂಚು ಪ್ರಕಾಶಿಸುವುದಿಲ್ಲ. ಅಗ್ನಿಯು ಕಾಂತಿ ಎಲ್ಲಿರುವದು ? ಸ್ವಯಂ ಜ್ಯೋತಿರ್ಮಯನಾದ ನಾರಾಯಣನನ್ನೇ ಈ ಸೂರ್ಯ ಚಂದ್ರಾದಿಗಳು ಅನುಸರಿಸಿ ಪ್ರಕಾಶಿಸುತ್ತಾರೆ. ಆ ಪರಬ್ರಹ್ಮನ ಕಾಂತಿಯಿಂದ ಇವುಗಳೆಲ್ಲಾ ಪ್ರಕಾಶಿಸುತ್ತವೆ. ಪರಮಾತ್ಮನ ತೇಜಸ್ಸು, ಇತರ ಕಾಂತಿಗಳು ಕಾಣದಂತೆ ಮಾಡುತ್ತದೆ. ಹೇಗೆಂದರೆ ಮಿಂಚಿನ ಹುಳುವಿನ ಬೆಳಕು ರಾತ್ರಿ ಪ್ರಕಾಶಿಸುತ್ತದೆ. ಅದೇ ಬೆಳಕು ಹಗಲಿನ ಬಿಸಲಿನಲ್ಲಿ ಹೇಗೆ ಕಾಣದಂತಾಗುತ್ತದೋ ಅದೇ ರೀತಿ ಭಗವಂತನ ತೇಜಸ್ಸು ಇತರ ಕಾಂತಿಗಳನ್ನು ಮಾಡುತ್ತದೆ. ಹೇಗೆಂದರೆ ಪರಮಾತ್ಮನ ತೇಜಸ್ಸಿನ ವಿಚಾರದಲ್ಲಿ ಭಗವದ್ಗೀತೆಯಲ್ಲಿ ಒಂದು ಉದಾಹರಣೆ ಕೊಡಲ್ಪಟ್ಟಿದೆ. ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ ವಿಶ್ವರೂಪ ದರ್ಶನಮಾಡಿಸಿದಾಗ ಅದನ್ನು ಕಂಡ ಸಂಜಯನು ಹೀಗೆ ಹೇಳುತ್ತಾನೆ. "ದಿವಿ ಸೂರ್ಯ ಸಹಸ್ರಸ್ಯ ಭವೇದ್ಯುಗಪದುತ್ಥಿತಾ | ಯದಿ ಭಾಃ ಸದೃಶೀ ಸಾ ಸ್ಯಾದ್ಭಾಸಸ್ತಸ್ಯ ಮಹಾತ್ಮನಃ" || (ಗೀತೆ. 11. 12) ಆಕಾಶದಲ್ಲಿ ಸಾವಿರ ಸೂರ್ಯರ ಕಾಂತಿಯು ಒಂದೇ ಕಾಲದಲ್ಲಿ ಉದಯಿಸಿದುದಾದರೆ ಆ ಕಾಂತಿಯು ಮಹಾತ್ಮನಾದ ಆ ಭಗವಂತನ ಪ್ರಕಾಶಕ್ಕೆ ಸಮವಾಗಿ ಆಗುತ್ತವೆ. ಭಗವಂತನ ತೇಜಸ್ಸು ಮಿತಿ ಇಲ್ಲದುದು ಎಂಬುದನ್ನು ತೋರಿಸುವುದಕ್ಕಾಗಿ ಹೀಗೆ ಹೇಳಿದೆ. ಮಿತಿ ಇಲ್ಲದ ತೇಜಸ್ಸೇ ಸ್ವಭಾವವಾಗಿ ಉಳ್ಳವನು ಎಂದು ತಾತ್ಪರ್ಯ.

ಪ್ರಪಂಚದಲ್ಲಿರುವ ಮನುಷ್ಯನು ಅಪೇಕ್ಷಿಸುವುದು ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ನಾಲ್ಕು ಪುರುಷಾರ್ಥಗಳು. ಮೊದಲನೆ ಮೂರು ಅರ್ಥಗಳು ಇಹಲೋಕದಲ್ಲಿ ಅವಶ್ಯಕವಾದವು. ಇವು ಕಡೆಯ ಪುರುಷಾರ್ಥವಾದ ಮೋಕ್ಷವನ್ನು ಪಡೆಯಲು ಸಹಾಯವಾಗುವಂತೆ ಉಪಯೋಗಿಸಬೇಕಾದವು. ಇಹಲೋಕದ ಸುಖಸಂಪತ್ತುಗಳು ಶಾಶ್ವತ

ನಲ್ಲವೆಂಬುದು ಅನುಭವದಿಂದ ಎಲ್ಲರಿಗೂ ಮನದಟ್ಟಾಗಿದೆ. ಶಾಶ್ವತವಾದ ಜ್ಞಾನಾನಂದವನ್ನು ಅನುಭವಿಸುವ ಸ್ಥಾನವಾದ ಪರಮಪದವನ್ನು ಪಡೆಯುವುದೇ ಮೋಕ್ಷವೆನ್ನುವುದು. ಇದು ಜೀವಾತ್ಮನ ಅತ್ಯಂತ ಶ್ರೇಷ್ಠವಾದ ಧ್ಯೇಯವಾಗಿದೆ. ಮೋಕ್ಷವನ್ನು ಹೊಂದಲು ಜೀವಾತ್ಮನು ಮಾಡಬೇಕಾದುದನ್ನು ಉಪನಿಷತ್ತುಗಳು ವಿವರಿಸುತ್ತವೆ. ಇಂಥಾ ಪದವಿಯನ್ನು ದಯಪಾಲಿಸುವವನು ಪರಬ್ರಹ್ಮನಾದ ನಾರಾಯಣನೇ ಎಂದು ಅವು ಹೇಳುತ್ತವೆ.

1. "ಉತಾಮೃತತ್ವಸ್ಯೇಶಾನಃ" (ಪು. ಸೂಕ್ತ) ಪುರುಷನಾತ್ಮನಾದ ನಾರಾಯಣನೇ ಮೋಕ್ಷಕ್ಕೆ ಸ್ವಾಮಿಯಾದವನು.

2. ಅಣೋರಣೀಯಾನ್ಮಹತೋ ಮಹೀಯಾನಾತ್ಮಾಸ್ಯ ಜಂತೋರ್ನಿಹಿತೋ ಗುಹಾಯಾಮ್ | ತಮಕ್ರತುಃ ಪಶ್ಯತಿ ವೀತಶೋಕೋ ಧಾತುಪ್ರಸಾದಾನ್ಮಹಿಮಾನಮಾತ್ಮನಃ || (ಕಠ. 1. 2. 20) ಆತ್ಮಶಬ್ದದಿಂದ ಹೇಳಲ್ಪಡುವ ನಾರಾಯಣನು ಅಣುವಸ್ತುಗಳಿಗಿಂತಲೂ ಸೂಕ್ಷ್ಮನು. ಅತ್ಯಂತ ದೊಡ್ಡದಕ್ಕಿಂತಲೂ ದೊಡ್ಡವನು. ಸಕಲ ಜಂತುಗಳ ಅಂತರ್ಯಾಮಿ, ಎಲ್ಲಾ ಚೇತನರ ಹೃದಯ ಗುಹೆಯಲ್ಲಿರುವವನು. ಜೀವಾತ್ಮನ ಸಕಲ ದೋಷಗಳನ್ನು ಹೋಗಲಾಡಿಸುವವನು. ಚೇತನನನ್ನು ಮುಕ್ತನನ್ನಾಗಿ ಮಾಡುವವನು. ಕಲ್ಯಾಣ ಗುಣಗಳಿಗೆ ನೆಲೆಯಾದವನು ಆ ಪರಮಾತ್ಮಸ್ವರೂಪವು ಆ ಪರಮಾತ್ಮಸ್ವರೂಪವನ್ನು ಕಂಡಾಗ ಸಮಸ್ತ ದುಃಖಗಳಿಂದ ಬಿಡುಗಡೆ ಹೊಂದಿ ಆನಂದವನ್ನು ಅನುಭವಿಸುವನು. ಆತನನ್ನು ಕಾಣಬೇಕಾದರೆ ಆತನ ಅನುಗ್ರಹ ಉಂಟಾಗಬೇಕಲ್ಲದೆ ಬೇರೆ ಮಾರ್ಗವೇ ಇಲ್ಲ. ಮೋಕ್ಷವು ಲಭಿಸುವುದು ನಾರಾಯಣನ ಅನುಗ್ರಹದಿಂದಲೇ ಎಂದು ಈ ಮಂತ್ರ ತಿಳಿಸುತ್ತದೆ.

3. "ಯಮೇವೈಷ ವೃಣುತೇ ತೇನ ಲಭ್ಯಃ" (ಕಠ 1.2.23) ಯಾವ ಚೇತನನನ್ನು ಪರಮಾತ್ಮನು ಅನುಗ್ರಹಿಸುತ್ತಾನೋ ಅಂಥವನಿಗೆ ನಾರಾಯಣನು ಲಭ್ಯನು.

4. "ತಮೇವೈಕಂ ಜಾನಥಾತ್ಮಾನ ಮನ್ಯಾವಾಚೋ ವಿಮುಂಚಥ ಅಮೃತಸ್ಯೈಷಸೇತುಃ" (ಮುಂ. 2. 2. 5) ಆ ಅದ್ವಿತೀಯನಾದ ಪರಬ್ರಹ್ಮನೇ ಆತ್ಮನಾಮಕನಾದ ನಾರಾಯಣನೆಂದು ತಿಳಿದುಕೊಳ್ಳುವನಾಗು. ಇತರ ವಿಷಯಗಳನ್ನು ಬಿಡಬೇಕು. ಆ ಪರಮಪುರುಷನೇ ಮೋಕ್ಷಕ್ಕೆ ಸೇತುವೆಯಾಗಿರುವವನು. ಮೋಕ್ಷವು ಸಂಸಾರ ಸಾಗರಕ್ಕೆ ಎದುರು ದಡವೆಂದು ಹೇಳಿದೆ. ಅದನ್ನು ಅನುಗ್ರಹಿಸಲು ಭಗವಂತನು ಕಾರಣನಾಗಿರುವುದರಿಂದ ಸಾಗರವನ್ನು ದಾಟಲು ಸಹಾಯನಾದ ಸೇತುವೆಯು ಭಗವಂತನೆಂದು ಹೇಳಿದೆ. ಆದುದರಿಂದ ಮೋಕ್ಷಪ್ರದನಾದ ನಾರಾಯಣನನ್ನೇ ಉಪಾಸನೆ ಮಾಡಬೇಕೆಂದು ಹೇಳುತ್ತದೆ.

**ಪರಬ್ರಹ್ಮನು ನಿತ್ಯನು** :— ಪರಬ್ರಹ್ಮನು ನಿತ್ಯನು ಎಂದರೆ ಎಲ್ಲಾ ಕಾಲಗಳಲ್ಲಿಯೂ ಶಾಶ್ವತವಾಗಿರುವಂಥವನು. ಪ್ರಕೃತಿ ಮಂಡಲದಲ್ಲಿ ಈಗಿನ ಕಾಲ (ವರ್ತಮಾನಕಾಲ) ಹಿಂದೆ ಕಳೆದುಹೋದಕಾಲ (ಭೂತಕಾಲ) ಮುಂದೆ ಬರುವ ಕಾಲ (ಭವಿಷ್ಯತ್ಕಾಲ) ಎಂದು ಕಾಲವು ವಿಭಾಗ ಮಾಡಲ್ಪಟ್ಟಿದೆ. ಪ್ರಕೃತಿ ಮಂಡಲದ ಸಕಲ ವಸ್ತುಗಳೂ ಈ ಕಾಲವಿಭಾಗಕ್ಕೆ ಒಳಪಟ್ಟಿವೆ. ಪರಮಾತ್ಮನು ಕಾಲಕ್ಕೆ ಒಳಪಡದವನು. ಆದುದರಿಂದಲೇ ಅವನನ್ನು ನಿತ್ಯನೆಂದು ಹೇಳಿದೆ. "ಕಾಲಕಾಲಃ" ಕಾಲಕ್ಕೆ ನಿಯಾಮಕನು ಎಂದು ಶ್ವೇತಾಶ್ವತರ ಉಪನಿಷತ್ತು ಹೇಳುತ್ತದೆ. "ಈಶಾನಂ ಭೂತ ಭವ್ಯಸ್ಯ" ಭೂತ. ಭವಿಷ್ಯತ್ಕಾಲಗಳಿಗೆ ನಿಯಾಮಕನು ಎಂದು ಕಠೋಪನಿಷತ್ತು ತಿಳಿಸುತ್ತದೆ. "ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ" (ಶ್ವೆ. ನಾ.) ತೇಜೋಮಯನಾದ ಪುರುಷ ವಾಚ್ಯನಾದ ನಾರಾಯಣನಿಂದ ನಿಮಿಷವೇ ಮೊದಲಾದ ಸಮಸ್ತ ಕಾಲಗಳು ಉಂಟಾದವು. "ಪುರುಷ ಏವೇದಗ್‌ಂ ಸರ್ವಮ್ | ಯದ್ಭೂತಂ ಯಚ್ಚ ಭವ್ಯಮ್ |" (ಪುರುಷಸೂಕ್ತ) ಈಗಿನ ಕಾಲ, ಹಿಂದಿನ ಕಾಲ, ಮುಂದೆ ಬರುವ ಕಾಲ ಎಂಬ ಮೂರು ಕಾಲಗಳಲ್ಲಿರುವ ವಸ್ತುಗಳೆಲ್ಲವೂ ಪುರುಷನಾದ ನಾರಾಯಣನೇ. ಎಲ್ಲಾ ಕಾಲಗಳಲ್ಲಿಯೂ ನಾರಾಯಣನು ಸಮಸ್ತ ವಸ್ತುಗಳನ್ನೂ ತನ್ನ ಶರೀರವಾಗುಳ್ಳವನೆಂದು ಈ ಮಂತ್ರ ಹೇಳುತ್ತದೆ.

ಪರಬ್ರಹ್ಮಕ್ಕೆ ಸಮಾನವಾದುದಾಗಲೀ, ಅದಕ್ಕಿಂತ ಮೇಲಾದುದಾಗಲೀ ಯಾವುದೂ ಇಲ್ಲ:—

1. "ಪುರುಷಾನ್ನ ಪರಂ ಕಿಂಚಿತ್ಸಾ ಕಾಷ್ಠಾ ಸಾ ಪರಾಗತಿಃ" (ಕಠ. 1. 3. 11). ಪುರುಷನಾಮಕನಾದ ನಾರಾಯಣನಿಗಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲ. ಆತನು ಪರಮ ಶ್ರೇಷ್ಠನು. ಆತನೇ ಹೊಂದಲ್ಪಡತಕ್ಕವನು.

2. "ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ." (ಶ್ವೇ. 6. 8.) ಪರಮಾತ್ಮನಾದ ನಾರಾಯಣನಿಗೆ ಸಮಾನವಾದುದೂ ಮೇಲಾದುದೂ ಯಾವುದೂ ಕಾಣಲ್ಪಡುವದಿಲ್ಲ.

3. "ಈಶಾನಸ್ಸರ್ವವಿದ್ಯಾನಾಮೀಶ್ವರಸ್ಸರ್ವಭೂತಾನಾಂ ಬ್ರಹ್ಮಾಧಿಪತಿ ಬ್ರಹ್ಮಣೋಽಧಿಪತಿ ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಮ್." (ತೈ. ನಾ.) ಸಮಸ್ತ ವಿದ್ಯೆಗಳಿಗೂ ಸ್ವಾಮಿಯೂ, ಸಕಲ ಪ್ರಾಣಿಗಳ ನಿಯಾಮಕನೂ, ವೇದಗಳಿಗೆ ನಾಯಕನೂ, ಚತುರ್ಮುಖ ಬ್ರಹ್ಮನಿಗೆ ಅಂತರಾತ್ಮನೂ, ಎಲ್ಲಾ ಕಾಲದಲ್ಲೂ ಮಂಗಳಕರನೂ, ಓಂಕಾರದ ಸಾರಭೂತನೂ ಆದ ನಾರಾಯಣನು ನಮಗೆ ಮಂಗಳವನ್ನುಂಟುಮಾಡುವನಾಗಲಿ. ಈ ಮಂತ್ರವು ನಾರಾಯಣನ ಸರ್ವಶ್ರೇಷ್ಠತೆಯನ್ನು ನಿರೂಪಿಸುತ್ತದೆ.

4. "ಯಸ್ಮಾತ್ಪರಂ ನಾಪರಮಸ್ತಿ ಕಿಂಚಿದ್ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್" (ಮ. 1. 1. 7) ಪುರುಷನಾಮಕನಾದ ನಾರಾಯಣನಿಗಿಂತ ಮೇಲಾದುದು ಯಾವುದೂ ಇಲ್ಲ. ಆತನಿಗಿಂತ ಸೂಕ್ಷ್ಮವಾದುದಾಗಲೀ, ದೊಡ್ಡದಾದುದಾಗಲೀ ಇರುವುದಿಲ್ಲ.

ಇದುವರೆವಿಗೆ ಪರಬ್ರಹ್ಮಲಕ್ಷಣಗಳನ್ನು ವಿವರಿಸುವ ಮಂತ್ರಗಳನ್ನು ಅನೇಕ ಉಪನಿಷತ್ತುಗಳಿಂದ ಉದಾಹರಣೆಯಾಗಿ ಕೊಟ್ಟಿದೆ. ಆ ಮಂತ್ರಗಳಲ್ಲಿ ಪರಬ್ರಹ್ಮ ಲಕ್ಷಣಗಳನ್ನು ವಿವರಿಸುವ ಶಬ್ದಗಳೆಲ್ಲವೂ ಹೇಗೆ ನಾರಾಯಣನಿಗೆ ಅನ್ವಯವಾಗುತ್ತವೆ ಎಂಬುದನ್ನು ಸ್ಪಷ್ಟಪಡಿಸಿದೆ, ಪರಬ್ರಹ್ಮ

ಲಕ್ಷಣಗಳೆಲ್ಲವೂ ನಾರಾಯಣನಿಗೇ ಅನ್ವಯವಾಗುವುದರಿಂದ ಆತನೇ ಪರಬ್ರಹ್ಮನೆಂದು ನಿಸ್ಸಂದೇಹವಾಗಿ ಮನದಟ್ಟಾಗುತ್ತದೆ.

ಮುಂದೆ ಪ್ರತಿಯೊಂದು ಉಪನಿಷತ್ತೂ ನಾರಾಯಣನೇ ಪರಬ್ರಹ್ಮನೆಂದು ನಿರ್ಣಯಿಸಿರುವುದನ್ನು ಸ್ಪಷ್ಟಪಡಿಸಲು ಪ್ರತಿಯೊಂದು ಉಪನಿಷತ್ತಿನಿಂದಲೂ ಕೆಲವು ಮಂತ್ರಗಳನ್ನು ಕೊಟ್ಟು ಅವುಗಳ ಅರ್ಥವನ್ನು ಸ್ಪಷ್ಟವಾಗಿ ವಿವರಿಸಲಾಗಿದೆ.

ಈಶಾವಾಸ್ಯೋಪನಿಷತ್ :—

ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನು ಪಶ್ಯತಿ | ಸರ್ವಭೂತೇಷು ಚಾತ್ಮಾನಂ ತತೋಽವಿಜಿಗುಪ್ಸತೇ || 6 || ಯಾವನು ಸಮಸ್ತ ಭೂತಗಳನ್ನೂ ಆತ್ಮಶಬ್ದವಾಚ್ಯನಾದ ನಾರಾಯಣನಲ್ಲಿಯೇ ಕಾಣುತ್ತಾನೋ ಮತ್ತು ಸಮಸ್ತ ಭೂತಗಳಲ್ಲಿ ನಾರಾಯಣನನ್ನು ಕಾಣುತ್ತಾನೋ ಅವನು ಯಾರನ್ನೂ ನಿಂದಿಸುವುದಿಲ್ಲ. ನಾರಾಯಣನು ಸಮಸ್ತವನ್ನೂ ವ್ಯಾಪಿಸಿಕೊಂಡು ಅವುಗಳ ಅಂತರ್ಯಾಮಿಯಾಗಿ ನೆಲಸಿರುವನು. ಸಕಲ ವಸ್ತುಗಳಿಗೂ ಆಧಾರನಾಗಿ, ನಿಯಾಮಕನಾಗಿ, ರಕ್ಷಕನಾಗಿರುವನು.

2. ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ ಯೋಽಸಾವಸೌ ಪುರುಷಃ ಸೋಽಹಮಸ್ಮಿ || 6 | ನಿರತಿಶಯ ಸೌಂದರ್ಯವೂ ಭೋಗ್ಯವೂ, ಪವಿತ್ರವೂ, ಆನಂದದಾಯಕವೂ, ಶುಭಕರವೂ, ಮಂಗಳಕರವೂ ಆದ ಆ ದಿವ್ಯ ರೂಪವನ್ನು ನೋಡುತ್ತೇನೆ. ಪುರುಷವಾಚ್ಯನಾದ ಆ ನಾರಾಯಣನೇ ಅಂತರ್ಯಾಮಿಯಾಗಿ ನನ್ನಲ್ಲಿ ನೆಲಸಿರುವನು.

ಕಠೋಪನಿಷತ್ :—

ಅಂಗುಷ್ಠಮಾತ್ರಃ ಪುರುಷೋಽನ್ತರಾತ್ಮಾ | ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ (2. 2. 17) ಪರಮ ಪುರುಷನಾದ ನಾರಾಯಣನು ಜೀವನಿಗೆ ಯಾವಾಗಲೂ ಅಂತರಾತ್ಮನಾಗಿದ್ದುಕೊಂಡು ಹೃದಯ ಕಮಲದಲ್ಲಿ ಹೆಬ್ಬೆರಳಿನ ಪ್ರಮಾಣದಲ್ಲಿ ನೆಲೆಸಿದ್ದಾನೆ. ಇದು ನಾರಾಯಣನ ಸರ್ವಾಂತರ್ಯಾಮಿತ್ವವನ್ನು ಹೇಳುತ್ತದೆ.

2. ವಿಜ್ಞಾನ ಸಾರಥಿರ್ಯಸ್ತು । ಮನಃ ಪ್ರಗ್ರಹವಾನ್ನರಃ । ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ ॥ (3,9) ಒಳ್ಳೆಜ್ಞಾನದಿಂದ ಮನಸ್ಸನ್ನು ಸ್ವಾಧೀನಪಡಿಸಿಕೊಂಡಿರುವ ಚೇತನನು ವಿಷ್ಣುಸ್ಥಾನವಾದ ಪರಮಪದವನ್ನು ಹೊಂದುತ್ತಾನೆ.

ಮಹತಃ ಪರಮವ್ಯಕ್ತಮವ್ಯಕ್ತಾತ್ಪುರುಷಃ ಪರಃ । ಪುರುಷಾನ್ನ ಪರಂ ಕಿಂಚಿತ್ಸಾ ಕಾಷ್ಠಾ ಸಾ ಪರಾಗತಿಃ ॥ (3. 11) ಅವ್ಯಕ್ತವು ಮಹತ್ತಕ್ಕಿಂತ ಶ್ರೇಷ್ಠವು, ಪುರುಷನಾಮಕನಾದ ನಾರಾಯಣನು ಅವ್ಯಕ್ತನಿಗಿಂತ ಶ್ರೇಷ್ಠನು. ಪುರುಷನಿಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ. ಆತನು ಎಲ್ಲಕ್ಕಿಂತಲೂ ಶ್ರೇಷ್ಠನು. ಆತನು ಎಲ್ಲರಿಗೂ ಉತ್ತಮವಾದ ಗತಿಯಾಗಿರುವಂತಾವನು.

ಪ್ರಶ್ನೋಪನಿಷತ್ :—

ಸ ಯಥಾ ಸೋಮ್ಯ ವಯಾಂಸಿ ವಾಸೋವೃಕ್ಷಂ ಸಂಪ್ರತಿಷ್ಠಂತೇ । ಏವಂ ಹ ವೈ ತತ್ಸರ್ವಂ ಪರ ಆತ್ಮನಿ ಸಂಪ್ರತಿಷ್ಠತೇ ॥ (ಪ್ರಶ್ನ. 4. 7.) ಪಕ್ಷಿಗಳು ತಮ್ಮ ವಾಸಸ್ಥಳವಾದ ಮರವನ್ನು ಯಾವ ಪ್ರಕಾರ ಸೇರಿಕೊಳ್ಳುತ್ತವೋ ಅದೇ ಪ್ರಕಾರ ಚರಾಚರಾತ್ಮಕವಾದ ಈ ಸಮಸ್ತವೂ ಪರಮಾತ್ಮನಾದ ನಾರಾಯಣನಲ್ಲಿ ಸೇರಿಕೊಳ್ಳುತ್ತದೆ.

ವಿಶ್ವರೂಪಂ ಹರಿಣಂ ಜಾತವೇದಸಂ, ಪರಾಯಣಂ ಜ್ಯೋತಿರೇಕಂ ತಪಂತಮ್ । ಸಹಸ್ರರಶ್ಮಿಶ್ಶತಧಾ ವರ್ತಮಾನಃ । ಪ್ರಾಣಃ ಪ್ರಜಾನಾಮುದಯತ್ಯೇಷ ಸೂರ್ಯಃ ॥ (ಪ್ರಶ್ನ. 1. 8.) ಸಕಲವನ್ನೂ ಶರೀರವಾಗುಳ್ಳವನು, ಸಮಸ್ತ ವಿಜ್ಞಾನಗಳಿಗೂ ಕಾರಣವಾದ ವೇದಗಳನ್ನು ಪ್ರಕಾಶಪಡಿಸಿದವನು, ಸಕಲ ತೇಜೋರೂಪಿಯಾಗಿ ಪ್ರಕಾಶಿಸುವವನು. ಹೀಗೆ ಅನೇಕ ಗುಣಗಳಿಗೆ ಆಶ್ರಯನಾಗಿರುವ ಪರಮಾತ್ಮನಾದ ಹರಿ ವಿಷ್ಣುವೆ ನಾರಾಯಣನನ್ನು ಅನುಸರಿಸುವ ಜೀವಾತ್ಮರು ಸಮಸ್ತವನ್ನೂ ತಿಳಿದುಕೊಂಡು ಆತನ ಕೃಪೆಯಿಂದ ಪ್ರಕಾಶಿಸುತ್ತಾರೆ. ಈ ಮಂತ್ರದ ಪೂರ್ವಾರ್ಧದ ಪ್ರತಿಯೊಂದು ಪದವೂ ನಾರಾಯಣನನ್ನೇ ಹೇಳುತ್ತದೆ.

(1) **ವಿಶ್ವರೂಪಮ್** :— ಪ್ರಪಂಚವೇ ಶರೀರವಾಗುಳ್ಳವನು. ಅವನು ಯಾರೆಂದರೆ, " ವಿಶ್ವರೂಪಾಯ ವೈ ನಮಃ " ಪ್ರಪಂಚವೇ ದೇಹವಾಗುಳ್ಳ ನಾರಾಯಣನಿಗೆ ನಮಸ್ಕಾರ. " ನಾರಾಯಣಂ ವಿಶ್ವಾತ್ಮಾನಂ " ನಾರಾಯಣನಿಗೆ ಪ್ರಪಂಚವೇ ಶರೀರವು (ಎಂದು ಪುರುಷಸೂಕ್ತ ಹೇಳುತ್ತದೆ.) ಹೀಗೆ " ವಿಶ್ವರೂಪಮ್ " ಶಬ್ದವು ನಾರಾಯಣನನ್ನು ಹೇಳುತ್ತದೆ. (2) **ಹರಿಣಮ್** :— ಆಶ್ರಿತರ ಕಷ್ಟವನ್ನು ಪರಿಹಾರಮಾಡುವ ವಿಷ್ಣು, ಎಂದರೆ ನಾರಾಯಣನು " ವಿಶ್ವಂ ನಾರಾಯಣಂ ಹರಿಮ್ " ಪ್ರಪಂಚವೇ ನಾರಾಯಣನಾದ ಹರಿ ಎಂದು ನಾರಾಯಣಸೂಕ್ತ ತಿಳಿಸುತ್ತದೆ. (3) **ಜಾತವೇದಸಮ್** :— ವೇದಗಳಿಗೆ ಉತ್ಪತ್ತಿಸ್ಥಾನವಾದವನು. " ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ " (ಶ್ವೇ) ಪರಮಾತ್ಮನಾದ ನಾರಾಯಣನು ಮೊದಲು ಚತುರ್ಮುಖ ಬ್ರಹ್ಮನನ್ನು ಸೃಷ್ಟಿಸಿ ಅವನಿಗೆ ವೇದಗಳನ್ನು ಉಪದೇಶ ಮಾಡಿದನು. ವೇದಗಳನ್ನು ಪ್ರಕಾಶಪಡಿಸಿದ ನಾರಾಯಣನನ್ನೇ ಜಾತವೇದಸಂ ಎಂದು ಹೇಳಿದೆ. (4) " **ಪರಾಯಣಮ್** " ಸಮಸ್ತಕ್ಕೂ ಗತಿಯಾದವನು, ಜೀವಾತ್ಮನು ಪಡೆಯಬೇಕಾದವನು. " ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮ್. " (ನಾರಾಯಣಸೂಕ್ತ) ದಲ್ಲಿ ಹೇಳಿರುವ ನಾರಾಯಣನನ್ನೇ ಪರಾಯಣಮ್ ಶಬ್ದವು ಹೇಳುತ್ತದೆ.

" ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಂ " (ಶ್ರು. ನಾ.) ಮುಖ್ಯವಾಗಿ ಅರಿಯಬೇಕಾದವನೂ, ಪ್ರಪಂಚಕ್ಕೆಲ್ಲಾ ಆತ್ಮನಾಗಿಯೂ ಎಂದರೆ ಪ್ರಪಂಚವೇ ಶರೀರವಾಗುಳ್ಳವನೂ ಸಮಸ್ತಕ್ಕೂ ಗತಿಯೂ ಹೊಂದಬೇಕಾದವನೂ ನಾರಾಯಣನೇ. ಆದುದರಿಂದ " ಪರಾಯಣಂ " ಶಬ್ದವು ನಾರಾಯಣನಿಗೇ ಅನ್ವಯಿಸುತ್ತದೆ. (5) ಜ್ಯೋತಿಃ ಜ್ಯೋತಿರ್ಮಯನು. " ನಾರಾಯಣ ಪರೋ ಜ್ಯೋತಿಃ " ಎಂಬ ಶ್ರುತಿ ವಾಕ್ಯವನ್ನು ನಿರೂಪಿಸುತ್ತದೆ. (6) ಏಕಮ್ : ಅದ್ವಿತೀಯನು. " ದಿವ್ಯೋ ದೇವ ಏಕೋ ನಾರಾಯಣಃ " ಎಂದು ಹೇಳಿರುವ ನಾರಾಯಣನನ್ನೇ ತಿಳಿಸುತ್ತದೆ.

**ಮುಂಡಕೋಪನಿಷತ್:-**

(1) "ಸಯೋಽಹ ವೈ ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ." (3. 2. 9) ಪ್ರಸಿದ್ಧನಾದ ಪರಬ್ರಹ್ಮವಾಚ್ಯನಾದ ನಾರಾಯಣನನ್ನು ಧ್ಯಾನದಿಂದ ಸಾಕ್ಷಾತ್ಕಾರ ಮಾಡಿದವನು ನಾರಾಯಣನಂತೆಯೇ ಆಗುತ್ತಾನೆ. (2) ತಸ್ಮೈ ಸವಿದ್ವಾನುಪಸನ್ನಾಯ ಸಮ್ಯಕ್ಪ್ರಶಾಂತ ಚಿತ್ತಾಯ ಶಮಾನ್ವಿತಾಯ । ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ ತತ್ವತೋ ಬ್ರಹ್ಮವಿದ್ಯಾಮ್ ॥ (1. 2. 13.) ಪರಬ್ರಹ್ಮನಿಷ್ಠನಾದ ಆಚಾರ್ಯನು ಬ್ರಹ್ಮಜ್ಞಾನಕ್ಕೆ ಅವಶ್ಯಕವಾದ ಉಪದೇಶವನ್ನು ಪಡೆಯಲು, ತನ್ನ ಸಮೀಪಕ್ಕೆ ಬಂದ ಶಿಷ್ಯನು ಬಾಹ್ಯೇಂದ್ರಿಯ ಮತ್ತು ಅಂತರಿಂದ್ರಿಯಗಳನ್ನು ಜಯಿಸಿ ಶಾಂತಚಿತ್ತನಾಗಿರುವುದನ್ನರಿತು, ಯಾವ ವಿದ್ಯೆಯಿಂದ ನಿತ್ಯವೂ ನಾಶವಿಲ್ಲದುದೂ ಆದ ಪರಮಪುರುಷನಾದ ನಾರಾಯಣನನ್ನು ತಿಳಿದುಕೊಳ್ಳುತ್ತಾನೋ ಅಂತಹ ಬ್ರಹ್ಮವಿದ್ಯೆಯನ್ನು ಯಥಾರ್ಥವಾಗಿ ಉಪದೇಶಮಾಡುತ್ತಾನೆ. ಈ ಮಂತ್ರದಲ್ಲಿ ಆಚಾರ್ಯರು ಉಪದೇಶಮಾಡಬೇಕಾದುದು ಮತ್ತು ಶಿಷ್ಯನು ಅರಿಯಬೇಕಾದುದು ಪರಬ್ರಹ್ಮನಾದ ನಾರಾಯಣನನ್ನು. ಉಪದೇಶಮಾಡುವಾತನು ಬ್ರಹ್ಮನಿಷ್ಠನಾಗಿರಬೇಕು, ಉಪದೇಶಪಡೆಯುವಂತಹವನು ಇಂದ್ರಿಯಗಳನ್ನು ಜಯಿಸಿ ಶಾಂತಚಿತ್ತನಾಗಿರಬೇಕೆಂದು ಹೇಳಿದೆ. 3. ಯಃ ಸರ್ವಜ್ಞಃ ಸರ್ವವಿದ್ಯಸ್ಯೈಷ ಮಹಿಮಾ ಭುವಿ । ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾ ಪ್ರತಿಷ್ಠಿತಃ ॥ (2. 2. 7) ಯಾವನು ಸಮಸ್ತವನ್ನು ಅರಿತವನೋ, ಯಾವನು ಸಮಸ್ತವಸ್ತು ವಿವರವನ್ನು ಅರಿತವನೋ ಪ್ರಪಂಚದಲ್ಲಿ ಇಂಥಾ ಮಹಿಮೆಯುಳ್ಳ ಆತ್ಮವಾಚ್ಯನಾದ ನಾರಾಯಣನು ಶ್ರೇಷ್ಠವಾದ ಪರಬ್ರಹ್ಮಪಟ್ಟಣವಾದ ಪರಮಪದದಲ್ಲಿ ನೆಲಸಿರುವನು. 4. ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ । .... ತಥಾಕ್ಷರಾತ್ಸಂಭವತೀಹ ವಿಶ್ವಮ್ ॥ (1. 1. 8) ಜೇಡರಹುಳು ತನ್ನ ದೇಹದಿಂದ ನೂಲನ್ನುಂಟುಮಾಡಿ ಪುನಃ ಅದನ್ನು ತನ್ನ ದೇಹಕ್ಕೆ ಎಳೆದುಕೊಳ್ಳುವಂತೆ ಪುರುಷನಾದ ನಾರಾಯಣನಿಂದ ಈ ಪ್ರಪಂಚವು

ಉತ್ಪತ್ತಿಯಾಗಿ ಅವನಲ್ಲಿಯೇ ಲಯವಾಗುವುದು. ಸೃಷ್ಟಿ, ಸ್ಥಿತಿ, ಲಯಗಳಿಗೆ ನಾರಾಯಣನೇ ಕಾರಣನೆಂದು ಈ ಮಂತ್ರವು ಹೇಳುತ್ತದೆ.

(5) ಯಸ್ಮಾತ್ಪರಂ ನಾಪರಮಸ್ತಿ ಕಿಂಚಿದ್ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್ | ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಸ್ತೇನೇದಂ ಪೂರ್ಣಂ ಪುರುಷೇಣ ಸರ್ವಮ್ || (1. 1. 7.) ಪುರುಷನಾದ ನಾರಾಯಣನಿಗಿಂತ ಮೇಲಾದುದು ಯಾವುದೂ ಇಲ್ಲ. ಅವನೇ ಶ್ರೇಷ್ಠತಮನು. ಹೇಗೆಂದರೆ ಅತಿ ಸೂಕ್ಷ್ಮ ವಸ್ತುವಿಗಿಂತಲೂ ಸೂಕ್ಷ್ಮನಾದವನು. ಅದರಿಂದ ಸಮಸ್ತ ವಸ್ತುಗಳ ಒಳಗೆ ವ್ಯಾಪಿಸಿಕೊಂಡು ಸರ್ವಾಂತರ್ಯಾಮಿ ಯಾಗಿರುವನು. ದೊಡ್ಡದಕ್ಕಿಂತಲೂ ದೊಡ್ಡವನಾದುದರಿಂದ ಸಮಸ್ತ ಪ್ರಪಂಚವೂ ಅವನಲ್ಲಿ ಅಡಗಿರುವದು. ಅದ್ವಿತೀಯನಾಗಿರುವುದರಿಂದ ಅವನಿಗೆ ಸ್ವಾಮಿಯಾದವನಿಲ್ಲ. ಚರಾಚರಾತ್ಮಕ ಪ್ರಪಂಚವನ್ನು ಪೂರ್ಣವಾಗಿ ವ್ಯಾಪಿಸಿಕೊಂಡು ಪರಮಪದದಲ್ಲಿ ನೆಲಸಿರುತ್ತಾನೆ.

ಐತರೇಯೋಪನಿಷತ್:—

"ಆತ್ಮಾ ವಾ ಇದಮೇಕ ಏವಾಗ್ರ ಆಸೀತ್ ನಾನ್ಯತ್ಕಿಂಚನ ಮಿಷತ್ ಸ ಈಕ್ಷತ ಲೋಕಾನ್ನು ಸೃಜಾ ಇತಿ ಸ ಇಮಾಂ ಲ್ಲೋಕಾನಸೃಜತ." ಸೃಷ್ಟಿಗೆ ಮೊದಲು ಇದೆಲ್ಲವೂ (ಚರ ಅಚರ) ಶರೀರವಾಗುಳ್ಳ ಆತ್ಮಶಬ್ದ ವಾಚ್ಯನಾದ ನಾರಾಯಣನೊಬ್ಬನು ಮಾತ್ರವೇ ಇದ್ದನು. ಬೇರೆ ಮತ್ತೊಂದೂ ಇರಲಿಲ್ಲ. ಆ ಪರಮಾತ್ಮನು ಪ್ರಪಂಚವನ್ನು ಸೃಷ್ಟಿಸಲು ಸಂಕಲ್ಪಮಾಡಿದನು. ಈ ಸಮಸ್ತ ಲೋಕವನ್ನೂ ಸೃಷ್ಟಿಸಿದನು.

ತೈತ್ತಿರೀಯ ಉಪನಿಷತ್:—

(1) ಸ ಯ ಏಷೋಽಂತರ್ಹೃದಯ ಆಕಾಶಃ | ತಸ್ಮಿನ್ನಯಂ ಪುರುಷೋ ಮನೋಮಯಃ || ಹೃದಯ ಕಮಲ ಮಧ್ಯದಲ್ಲಿ ನಿರ್ಮಲವಾದ ಮನಸ್ಸಿನಿಂದ ಅರಿಯತಕ್ಕವನಾಗಿ ಪ್ರಕಾಶಮಾನನಾ

ಗಿಂತಕ್ಕವನೇ ಪುರುಷ ಶಬ್ದವಾಚ್ಯ ನಾರಾಯಣನು. (2) "ಸತ್ಯಂ ಜ್ಞಾನಮನಂತಂ ಬ್ರಹ್ಮ" ಬ್ರಹ್ಮಶಬ್ದ ವಾಚ್ಯನಾದ ನಾರಾಯಣನು ಶಾಶ್ವತನೂ ಜ್ಞಾನಸ್ವರೂಪನೂ ದೇಶ ಕಾಲ ವಸ್ತು ಪರಿಚ್ಛೇದವಿಲ್ಲದವನೂ ಆಗಿರುವನು. (3) "ನಾರಾಯಣ ಪರಂ ಬ್ರಹ್ಮ" ನಾರಾಯಣನೇ ಪರಬ್ರಹ್ಮನು. (4) "ಬ್ರಹ್ಮವಿದಾಪ್ನೋತಿ ಪರಂ" ಪರಬ್ರಹ್ಮನಾದ ನಾರಾಯಣನನ್ನು ಸಾಕ್ಷಾತ್ಕಾರ ಮಾಡಿದವನು ಮೋಕ್ಷವನ್ನು ಪಡೆಯುತ್ತಾನೆ. (5) "ಆನಂದೋ ಬ್ರಹ್ಮ" ಪರಬ್ರಹ್ಮನಾದ ನಾರಾಯಣನು ಆನಂದಸ್ವರೂಪನು. (6) ಯಚ್ಚ ಕಿಂಚಿತ್ ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತಃ ॥ ಈ ಲೋಕದಲ್ಲಿ ಯಾವುದೊಂದು ಕಾಣಲ್ಪಡುತ್ತದೋ, ಕೇಳಲ್ಪಡುವುದೋ ಆ ಎಲ್ಲಾ ವಸ್ತುಗಳನ್ನು ಒಳಗೂ ಹೊರಗೂ ನಾರಾಯಣನು ವ್ಯಾಪಿಸಿಕೊಂಡು ಇರುತ್ತಾನೆ.

ಬೃಹದಾರಣ್ಯಕೋಪನಿಷತ್:-

(1) "ಸರ್ವಸ್ಯ ವಶೀ ಸರ್ವಸ್ಯೇಶಾನಃ" ಆತ್ಮಶಬ್ದ ವಾಚ್ಯನಾದ ನಾರಾಯಣನು ಸಮಸ್ತವನ್ನು ಅಧೀನ ಪಡಿಸಿಕೊಂಡಿರುವನು. ಸಕಲಕ್ಕೂ ಸ್ವಾಮಿಯಾದವನು. (2) "ವಿಜ್ಞಾನಮಾನಂದಂ ಬ್ರಹ್ಮ" ಪರಬ್ರಹ್ಮನಾದ ನಾರಾಯಣನು ಸರ್ವಜ್ಞನಾಗಿಯೂ ಆನಂದಮಯನಾಗಿಯೂ ಇರುತ್ತಾನೆ. (3) "ಅಸ್ಮಿನ್ನಾತ್ಮನಿ ತೇಜೋಮಯೋಽಮೃತಮಯಃ ಪುರುಷಃ" ಈ ಆತ್ಮನಲ್ಲಿ ತೇಜೋಮಯನೂ ಅಮೃತಮಯನೂ ಆಗಿರುವಂತಹವನು ಪುರುಷನಾದ ನಾರಾಯಣನು. ಇಲ್ಲಿ ನಾರಾಯಣನು ಸರ್ವಾಂತರ್ಯಾಮಿಯೆಂದು ಹೇಳಿದೆ. (4) "ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" ಆತ್ಮಶಬ್ದ ವಾಚ್ಯನಾದ ನಾರಾಯಣನು ಕೇಳಲ್ಪಡತಕ್ಕವನು, ಧ್ಯಾನಿಸಲ್ಪಡತಕ್ಕವನು ಸಾಕ್ಷಾತ್ಕಾರ ಮಾಡಲ್ಪಡತಕ್ಕವನು. ಇಂದ್ರಿಯಗಳಿಗೆ ನಾರಾಯಣನನ್ನೇ ವಿಷಯವನ್ನಾಗಿ ಮಾಡಿಕೊಂಡು ಧ್ಯಾನದಿಂದ ಆತನನ್ನು ಸಾಕ್ಷಾತ್ಕಾರ ಮಾಡಬೇಕು.

ಛಾಂದೋಗ್ಯ ಉಪನಿಷತ್ ತಿಳಿಸುವುದೇನೆಂದರೆ :-

(1) "ಯ ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ." ತೇಜಸ್ಸ್ವರೂಪಿಯೂ, ರಮಣೀಯರೂಪನೂ ಪುರುಷನಾಮಕನೂ ಆದ ನಾರಾಯಣನು ಸೂರ್ಯಮಂಡಲ ಮಧ್ಯದಲ್ಲಿ ಜ್ಞಾನಿಗಳಿಂದ ಕಾಣಲ್ಪಡುತ್ತಾನೆ. (2) "ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ" ಸೂರ್ಯಕಿರಣಗಳಿಂದ ವಿಕಾಸ ಮಾಡಲ್ಪಟ್ಟ ಕಮಲದಂತಿರುವುವು ಆತನ ಕಣ್ಣುಗಳು. (3) "ತಾವಾನಸ್ಯ ಮಹಿಮಾ । ತತೋ ಜ್ಯಾಯಾಂಶ್ಚ ಪೂರುಷಃ ॥ ಪಾದೋಽಸ್ಯ ಸರ್ವಾಣಿ ಭೂತಾನಿ । ತ್ರಿಪಾದಸ್ಯಾಮೃತಂ ದಿವಿ ॥ (ಛಾ. 3.12.6.) ಪುರುಷ ಶಬ್ದದಿಂದ ಹೇಳಲ್ಪಡುವ ನಾರಾಯಣನು (ಹಿಂದಿನ ಮಂತ್ರಗಳಲ್ಲಿ ವರ್ಣಿಸಿರುವುದಕ್ಕಿಂತ) ಅಧಿಕ ಮಹಿಮೆಯುಳ್ಳವನು. ಚೇತನಾಚೇತನದಿಂದ ಕೂಡಿದ ಪ್ರಪಂಚವು ಆತನ ಅಲ್ಪವಾದ ಭಾಗವಾಗಿರುವುದು. ಆತನ ಅಮೃತವಾದ ಅಧಿಕ ಭಾಗವು ಪರಮ ಪದದಲ್ಲಿರುವುದು. (4) "ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ" (3.14.1.) ಸಮಸ್ತವೂ ಬ್ರಹ್ಮನಾಮಕವಾದ ನಾರಾಯಣನೇ ಎಂದರೆ ಎಲ್ಲವೂ ಆತನ ಶರೀರವಾಗಿರುವುದು. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನು ಆತನೇ. (5) "ಐತದಾತ್ಮ್ಯಮಿದಂ ಸರ್ವಂ, ತತ್ಸತ್ಯಮ್" (6.6.)- ಈ ಸಕಲವೂ ಆತ್ಮನಾಮಕನಾದ ನಾರಾಯಣನ ಶರೀರವು. ಅದು ಸತ್ಯ. (6) "ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ." ಈ ಸ್ವರ್ಗಕ್ಕೆ ಹೊರಗೆ ಪ್ರಕಾಶಮಾನವಾಗಿ ಬೆಳಗುವ ದಿವ್ಯವಾದ ಅಪ್ರಾಕೃತ ವೈಕುಂಠದಲ್ಲಿ ಜ್ಯೋತಿಶ್ಶಬ್ದದಿಂದ ಹೇಳಲ್ಪಡುವ ನಾರಾಯಣನು ಪ್ರಕಾಶಿಸುತ್ತಾನೆ.

ಶ್ವೇತಾಶ್ವತರೋಪನಿಷತ್ :-

(1) ಯಸ್ಮಾತ್ ಪರಂ ನಾಪರಮಸ್ತಿ ಕಿಂಚಿತ್ ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್ ॥ ಪುರುಷನಾಮಕನಾದ ನಾರಾ-

ಯಣನಿಗಿಂತ ಶ್ರೇಷ್ಠನಾದವನು ಯಾರೂ ಇಲ್ಲ. ಅವನಿಗಿಂತ ಸೂಕ್ಷ್ಮವಾದುದಾಗಲೀ, ದೊಡ್ಡದಾದುದಾಗಲೀ ಇರುವದಿಲ್ಲ. ಹಾಗೆಂದರೆ ಆತನು ಸರ್ವವ್ಯಾಪಕನು. ಸರ್ವನಿಯಾಮಕನು. ಆದುದರಿಂದ ಆತನಿಗಿಂತ ಮೇಲಾದುದು ಯಾವುದೂ ಇರುವುದಿಲ್ಲ. (2) "ತೇನೇದಂ ಪೂರ್ಣಂ ಪುರುಷೇಣ ಸರ್ವಮ್." ಈ ಸಮಸ್ತವೂ ಪುರುಷನಿಂದ ತುಂಬಲ್ಪಟ್ಟಿದೆ. (3) "ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ." ನಾರಾಯಣನಿಗೆ ಸಮಾನನಾಗಲೀ, ಅಧಿಕನಾಗಲೀ ಯಾವನೂ ಕಾಣಲ್ಪಡುವದಿಲ್ಲ. (4) ವೇದಾಹಮೇತಂ ಪುರುಷಂ ಮಹಾಂತಮಾದಿತ್ಯವರ್ಣಂ ತಮಸಃ ಪರಸ್ತಾತ್ | ತಮೇವ ವಿದಿತ್ವಾತಿ ಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಽಯನಾಯ || (3. 8.) ತಮಸ್ಸೆಂದು ಹೇಳಲ್ಪಡುವ ಮೂಲಪ್ರಕೃತಿಗೆ ಮೇಲುಗಡೆ ಇರುವ ಪರಮಪದದಲ್ಲಿ, ಸೂರ್ಯ ತೇಜಸ್ಸಿನಂತ ಪ್ರಕಾಶಮಾನನಾಗಿ ಹೊಳೆಯುತ್ತಿರುವ ಸುಖಮಯನಾಗಿಯೂ ಕಲ್ಯಾಣಗುಣಗಣ ಪರಿಪೂರ್ಣನೂ ಪುರುಷಶಬ್ದ ವಾಚ್ಯನಾದ ನಾರಾಯಣನನ್ನು ಮಾನವ ಜೀವಾತ್ಮನು ಪರಮಾತ್ಮಧ್ಯಾನದಲ್ಲಿ ಅಧಿಕ ಪ್ರೀತಿಯುಳ್ಳವನಾಗಿ ಭಕ್ತಿಯೋಗದಿಂದ ಸಾಕ್ಷಾತ್ಕಾರ ಮಾಡುತ್ತಾನೋ ಅವನು ಜನನಮರಣವೆಂಬ ಸಂಸಾರವನ್ನು ದಾಟಿ ಮೋಕ್ಷವನ್ನು ಪಡೆಯುತ್ತಾನೆ. ಮೋಕ್ಷಕ್ಕೆ ಬೇರೆ ಮಾರ್ಗವಿಲ್ಲ. (5) ಏತಜ್ಜ್ಞೇಯಂ ನಿತ್ಯಮೇವಾತ್ಮಸಂಸ್ಥಮ್ | ನಾತಃ ಪರಂ ವೇದಿತವ್ಯಂ ಹಿ ಕಿಂಚಿತ್ || ಸಕಲ ಜೀವಾಂತರ್ಯಾಮಿಯಾಗಿ ಹೃದಯ ಕಮಲದಲ್ಲಿ ವಾಸಮಾಡಿಕೊಂಡಿರುವ ಆತ್ಮಶಬ್ದ ವಾಚ್ಯನಾದ ನಾರಾಯಣನೇ ಉಪಾಸನೆ ಮಾಡಲ್ಪಡತಕ್ಕವನು. ಆತನನ್ನು ಬಿಟ್ಟು ಬೇರೆ ಉಪಾಸನೆ ಮಾಡಲ್ಪಡತಕ್ಕ ವಸ್ತು ಯಾವುದೂ ಇಲ್ಲ.

ಉಪನಿಷತ್ತುಗಳು ವೇದಗಳ ಶಿರಸ್ಸೆಂದು ಪ್ರಸಿದ್ಧಿ ಇವೆ. ಅವು ಸಮಸ್ತ ಪ್ರಪಂಚದ ಮೂಲವನ್ನು ವಿಧಿಸುತ್ತವೆ. ಮೂರು ತತ್ವಗಳನ್ನು ಅವು ಒಳಗೊಂಡಿವೆ. 1. ಮುಮುಕ್ಷುವಾದವ ಚೇತನನು ಜೀವಾತ್ಮ ಪರಮಾತ್ಮಗಳ ನಿಶ್ಚಿತಾರ್ಥಜ್ಞಾನವನ್ನು ಸಂಪಾದಿಸಬೇಕು.

2. ತನ್ನ ವರ್ಣಾಶ್ರಮಕ್ಕೆ ಅನುಗುಣವಾದ ಕರ್ಮಗಳನ್ನು ಆಚರಿಸಿಕೊಂಡು ಭಕ್ತಿಪೂರ್ವಕ ಪರಮ ಪುರುಷನ ಪಾದಕಮಲಗಳ ಧ್ಯಾನ, ಅರ್ಚನೆ ನಮಸ್ಕಾರಗಳಲ್ಲಿ ನಿರತನಾಗಬೇಕು. 3. ಹೀಗೆ ಉಂಟಾದ ಜ್ಞಾನವೇ ಅವನಿಗೆ ನಿರತಿಶಯಾನಂದವನ್ನುಂಟುಮಾಡಿ ಮೋಕ್ಷ ಸಾಧನವಾಗುವುದು.

ಜೀವಾತ್ಮನು ಅನಾದಿ ಅಜ್ಞಾನಪೂರ್ವಕ ಮಾಡಿದ ಪುಣ್ಯ ಪಾಪ ಕರ್ಮಗಳಿಂದ ಬದ್ಧನಾಗಿರುವನು. ಈ ಕರ್ಮರಾಶಿಯು ಜನನ ಮರಣದಿಂದ ಕೂಡಿದ ನಾನಾಜನ್ಮಗಳು ಜೀವಾತ್ಮನಿಗೆ ಉಂಟಾಗಲು ಕಾರಣವಾಗಿರುವುದು. ನಾನಾ ವಿಧವಾದ ದೇಹಗಳನ್ನು ಪಡೆಯುವ ಜೀವಾತ್ಮನು ತಾನೇ ಆಯಾ ದೇಹವೆಂಬ ಮೋಹಕ್ಕೆ ಒಳಗಾಗುವನು. ಇಹಲೋಕದಲ್ಲಿ ಜನ್ಮತಾಳುವುದರಿಂದುಂಟಾಗುವ ಭಯಗಳಿಗೆಲ್ಲಾ ಈ ಮೋಹವೇ ಕಾರಣವಾಗಿರುವುದು. ಈ ಭಯಗಳನ್ನು ನಾಶಪಡಿಸುವುದೇ ಎಲ್ಲಾ ಉಪನಿಷತ್ತುಗಳ ಧ್ಯೇಯವಾಗಿದೆ.

ಭಯ ನಾಶಪಡಿಸಲು ಅವು ಮಾಡುವ ಉಪದೇಶ ವೇನೆಂದರೆ— 1 ದೇಹಕ್ಕಿಂತ ಭಿನ್ನನಾಗಿರುವುದೇ ಜೀವಾತ್ಮನ ಪ್ರಧಾನ ಸ್ವರೂಪ. 2 ಆತ್ಮನ ಸ್ವರೂಪ ಸ್ವಭಾವ. 3 ಚೇತನ ಅಚೇತನಗಳ ಅಂತರ್ಯಾಮಿಯಾಗಿ ಅವುಗಳನ್ನು ನಿಯಮಿಸುವ ಪರಮಾತ್ಮ ಸ್ವರೂಪ. 4 ಪರಮಾತ್ಮ ಸ್ವಭಾವ. 5 ಪರಮಾತ್ಮನ ಉಪಾಸನೆ. 6 ಈ ಉಪಾಸನೆಯಿಂದುಂಟಾಗುವ ಫಲ. ಅದೇನೆಂದರೆ ಆತ್ಮನ ನಿಜಸ್ವರೂಪ ಪ್ರಕಾಶ. ಅದರಿಂದ ಮಿತಿಯಿಲ್ಲದ ಅತಿಶಯವಾದ ಆನಂದ ಸ್ವರೂಪನಾದ ಪರಬ್ರಹ್ಮನ ಅನುಭವಪ್ರಾಪ್ತಿ.

ದೇವ ಮನುಷ್ಯಾದಿ ದೇಹಗಳು ಪ್ರಕೃತಿ ಪರಿಣಾಮವಾಗಿರುವುದರಿಂದ ಯಾವಾಗಲೂ ಬದಲಾವಣೆಯಾಗುತ್ತಿರುವುದೇ ಅವುಗಳ ಸ್ವಭಾವವಾಗಿರುವುದು... ಈ ವಿಧವಾದ ವ್ಯತ್ಯಾಸವಿಲ್ಲದಿರುವುದೇ ವಾತ್ಮ ಸ್ವರೂಪವಾಗಿದೆ. ಅದು ಜ್ಞಾನಾನಂದ ಗುಣಗಳಿಂದ ಕೂಡಿ

ದುದು. ಕರ್ಮ ಭೇದದಿಂದುಂಟಾಗಿರುವ ಭೇದಗಳು ನಾಶವಾದಾಗ ಆತ್ಮನ ನಿಜವಾದ ಸ್ವರೂಪವು ಪ್ರಕಾಶ ವಾಗುವುದು. ಅದನ್ನು ವರ್ಣಿಸಲಾಗುವುದಿಲ್ಲ. ತನಗೆ ತಾನೇ ಗೋಚರ ವಾಗುವಂತಹುದು. ಜ್ಞಾನ ಸ್ವರೂಪವಾದುದು. ಈ ಪ್ರಧಾನವಾದ ಸ್ವರೂಪವು ಎಲ್ಲಾ ಆತ್ಮಗಳಿಗೂ ಸಮಾನವಾದುದು.

ಚೇತನಾಚೇತನಗಳಿಂದ ಕೂಡಿ ಮೇಲೆ ಹೇಳಿದ ಸ್ವರೂಪವುಳ್ಳ ಈ ಪ್ರಪಂಚಕ್ಕೆ ಆಧಾರನು, ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನು. ಬದ್ಧ ಚೇತನರ ಸಂಸಾರ ನಿವರ್ತಿ ಮಾಡುವವನು ಪರಮಾತ್ಮನೇ ಆಗಿರುವನು. ಆ ಪರಮ ಪುರುಷನು ತ್ಯಾಜ್ಯವಸ್ತುಗಳೆಲ್ಲಕ್ಕೂ ವಿರುದ್ಧನು, ಎಲ್ಲಾ ಕಲ್ಯಾಣಗಳಿಗೂ ಅಸಾಧಾರಣವಾದ ಆಶ್ರಯನು, ತನಗಿಂತ ಬೇರೆಯಾದ ಸಮಸ್ತ ಚೇತನ ಅಚೇತನ ವಸ್ತುಗಳಿಗಿಂತ ವಿಲಕ್ಷಣವಾದ ಅನಂತಜ್ಞಾನ ಆನಂದಗಳೇ ಸ್ವರೂಪವಾಗಿರುವವನು. ಮಿತಿಯಿಲ್ಲದಷ್ಟು ಅತಿಶಯವಾದ ಎಣಿಸಲಾಗದ ಕಲ್ಯಾಣಗುಣಗಣಗಳುಳ್ಳವನು, ಸನಾತನ, ಪರಬ್ರಹ್ಮ, ಪರಂಜ್ಯೋತಿ, ಪರತತ್ತ್ವ, ಪರಮಾತ್ಮ, ಸತ್ ಇವೇ ಮೊದಲಾದ ಶಬ್ದಗಳಿಂದ ಸಕಲ ವೇದಾಂತಗಳಿಂದ ಅರಿಯಲ್ಪಟ್ಟಿರುವವನು. ಇವನೇ ಭಗವಂತನಾದ ನಾರಾಯಣನು, ಪುರುಷೋತ್ತಮನು, ಚೇತನ ಅಚೇತನ ವಸ್ತುಗಳ ಅಂತರ್ಯಾಮಿಯಾಗಿ ಅವುಗಳನ್ನು ನಿಯಮಿಸುವಂತಹವನು. ಅವುಗಳು ಅವನಶಕ್ತಿ, ಅವನ ಅಂಶ, ಅವನ ವಿಭೂತಿ, ಅವನ ರೂಪ, ಅವನ ಶರೀರ ಎಂದು ವೇದಾಂತಗಳು ವರ್ಣಿಸುತ್ತವೆ. ಮತ್ತು ಅವುಗಳು ಪರಮಾತ್ಮನೊಡನೆ ಸೇರಿ-ಒಂದೇಯಾಗಿವೆ ಎಂಬುದನ್ನು ದೃಢಪಡಿಸುತ್ತವೆ.

ನಾರಾಯಣೋಪನಿಷತ್ತು, ನಾರಾಯಣನೇ ಪರಬ್ರಹ್ಮನೆಂದು ಸ್ಥಾಪಿಸಿರುವುದು ಅದನ್ನು ಅರ್ಥಸಹಿತ ಅಧ್ಯಯನಮಾಡುವವರಿಗೆ ಸ್ಪಷ್ಟವಾಗಿ ಮನದಟ್ಟಾಗದಿರಲಾರದು. ಮತ್ತು ಅನೇಕ ಉಪನಿಷತ್ತುಗಳಿಂದ ಉದಹರಿಸಿರುವ ಮಂತ್ರಗಳು ನಾರಾಯಣನಿಗೆ ಅನ್ವಯವಾಗುವ ವಿವಿಧ

ಶಬ್ದಗಳಿಂದ ನಾರಾಯಣನೇ ಪರಬ್ರಹ್ಮನೆಂದು ನಿರ್ಣಯಿಸಿರುವುದನ್ನು ವಿಶದವಾಗಿ ವಿವರಿಸಿದೆ. ಆದುದರಿಂದ ಸಕಲ ವೇದ ವೇದಾಂತಗಳು ಪ್ರತಿಪಾದಿಸುವ ಪರಬ್ರಹ್ಮನು ನಾರಾಯಣನೇ ಆಗಿದ್ದಾನೆ. ಈ ಉಪನಿಷತ್ತನ್ನೂ, ಮಂತ್ರಗಳನ್ನೂ ಅರ್ಥಸಹಿತ ಅನನ್ಯ ಮನಸ್ಕರಾಗಿ ಮನನ ಮಾಡುವುದರಿಂದ ಮೇಲೆ ವಿವರಿಸಿರುವ ವಿಷಯವು ಮನಸ್ಸಿಗೆ ಸ್ಪಷ್ಟವಾಗಿ ಪ್ರಕಾಶಿಸಿ ತೃಪ್ತಿ, ಶಾಂತಿ, ಸಂತೋಷಗಳು ನಾರಾಯಣನ ಅನುಗ್ರಹದಿಂದ ಉಂಟಾಗುವುದು.

ಓಂನಮೋ ನಾರಾಯಣಾಯ ನಮಃ

ಓಂ ಶಾಂತಿಶ್ಶಾಂತಿಶ್ಶಾಂತಿಃ.

## ಉಪನಿಷತ್ತುಗಳ ಹೆಸರು

| | | | |
|---|---|---|---|
| ಈ | = | ಈಶಾವಾಸ್ಯ | |
| ಕಠ | = | ಕಠ | |
| ಮುಂ | = | ಮುಂಡಕ | |
| ಮಾಂ | = | ಮಾಂಡೂಕ್ಯ | |
| ಪ್ರ | = | ಪ್ರಶ್ನ | |
| ಐ | = | ಐತರೇಯ | |
| ಶ್ವೇ | = | ಶ್ವೇತಾಶ್ವತರ | |
| ಛಾ | = | ಛಾಂದೋಗ್ಯ | |
| ತೈ | = | ತೈತ್ತಿರೀಯ | |
| ತೈ.ಶಿ | = | " | ಶಿಕ್ಷಾವಲ್ಲಿ |
| ತೈ.ಭೃ | = | " | ಭೃಗುವಲ್ಲಿ |
| ತೈ.ಆ | = | " | ಆನಂದವಲ್ಲಿ |
| ತೈ.ನಾ | = | " | ನಾರಾಯಣವಲ್ಲಿ |

|| ಹರಿಃ ಓಮ್ ||

# ನಾರಾಯಣೋಪನಿಷತ್

ಅಥ ಪುರುಷೋ ಹ ವೈ ನಾರಾಯಣೋಽಕಾಮಯತ ಪ್ರಜಾಸ್ಸೃಜೇಯೇತಿ | ನಾರಾಯಣಾತ್ಪ್ರಾಣೋ ಜಾಯತೇ | ಮನಸ್ಸರ್ವೇಂದ್ರಿಯಾಣಿ ಚ | ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ | ನಾರಾಯಣಾದ್ಬ್ರಹ್ಮಾ ಜಾಯತೇ | ನಾರಾಯಣಾದ್ರುದ್ರೋ ಜಾಯತೇ | ನಾರಾಯಣಾದಿಂದ್ರೋ ಜಾಯತೇ | ನಾರಾಯಣಾತ್ಪ್ರಜಾಪತಯಃ ಪ್ರಜಾಯಂತೇ | ನಾರಾಯಣಾದ್ದ್ವಾದಶಾದಿತ್ಯಾ ರುದ್ರಾ ವಸವಸ್ಸರ್ವಾಣಿ ಚ ಛಂದಾಗ್ಂಸಿ | ನಾರಾಯಣಾದೇವ ಸಮುತ್ಪದ್ಯಂತೇ | ನಾರಾಯಣೇ ಪ್ರಲೀಯಂತೇ | ನಾರಾಯಣೇ ಪ್ರವರ್ತಂತೇ ||

ಓಮ್ ಅಥ ನಿತ್ಯೋ ನಾರಾಯಣಃ | ಬ್ರಹ್ಮಾ ನಾರಾಯಣಃ | ಶಿವಶ್ಚ ನಾರಾಯಣಃ | ಶಕ್ರಶ್ಚ ನಾರಾಯಣಃ | ದ್ಯಾವಾಪೃಥಿವ್ಯೌ ಚ ನಾರಾಯಣಃ | ಕಾಲಶ್ಚ ನಾರಾಯಣಃ | ದಿಶಶ್ಚ ನಾರಾಯಣಃ | ಊರ್ಧ್ವಶ್ಚ ನಾರಾಯಣಃ | ಅಧಶ್ಚ ನಾರಾಯಣಃ | ಅಂತರ್ಬಹಿಶ್ಚ ನಾರಾಯಣಃ | ನಾರಾಯಣ ಏವೇದಗ್ಂ ಸರ್ವಮ್ | ಯದ್ಭೂತಂ ಯಚ್ಚ ಭವ್ಯಮ್ | ನಿಷ್ಕಲೋ ನಿರಂಜನೋ ನಿರ್ವಿಕಲ್ಪೋ ನಿರಾ

ಖ್ಯಾತ ಶ್ಶುದ್ಧೋ ದೇವ ಏಕೋ ನಾರಾಯಣಃ | ನ ದ್ವಿತೀಯೋಽಸ್ತಿ ಕಶ್ಚಿತ್ | ಯ ಏವಂ ವೇದ | ಸ ವಿಷ್ಣುರೇವ ಭವತಿ ಸ ವಿಷ್ಣುರೇವ ಭವತಿ ||

ಓಮಿತ್ಯಗ್ರೇ ವ್ಯಾಹರೇತ್ | ನಮ ಇತಿ ಪಶ್ಚಾತ್ | ನಾರಾಯಣಾಯೇತ್ಯುಪರಿಷ್ಟಾತ್ | ಓಮಿತ್ಯೇಕಾಕ್ಷರಮ್ | ನಮ ಇತಿ ದ್ವೇ ಅಕ್ಷರೇ | ನಾರಾಯಣಾಯೇತಿ ಪಂಚಾಕ್ಷರಾಣಿ | ಏತದ್ವೈ ನಾರಾಯಣಸ್ಯಾಷ್ಟಾಕ್ಷರಂ ಪದಮ್ | ಯೋ ಹ ವೈ ನಾರಾಯಣಸ್ಯಾಷ್ಟಾಕ್ಷರಂ ಪದಮಧ್ಯೇತಿ | ಅನಪಬ್ರುವಸ್ಸರ್ವಮಾಯುರೇತಿ | ವಿಂದತೇ ಪ್ರಾಜಾಪತ್ಯಗ್ಂ ರಾಯಸ್ಪೋಷಂ ಗೌಪತ್ಯಮ್ | ತತೋಽಮೃತತ್ವಮಶ್ನುತೇ ತತೋಽಮೃತತ್ವಮಶ್ನುತ ಇತಿ | ಯ ಏವಂ ವೇದ ||

ಪ್ರತ್ಯಗಾನಂದಂ ಬ್ರಹ್ಮಪುರುಷಂ ಪ್ರಣವಸ್ವರೂಪಮ್ | ಅಕಾರ ಉಕಾರ ಮಕಾರ ಇತಿ | ತಾನೇಕಧಾ ಸಮಭರತ್ತದೇತದೋಮಿತಿ | ಯಮುಕ್ತ್ವಾ ಮುಚ್ಯತೇ ಯೋಗೀ ಜನ್ಮಸಂಸಾರಬಂಧನಾತ್ | ಓಂ ನಮೋ ನಾರಾಯಣಾಯೇತಿ ಮಂತ್ರೋಪಾಸಕಃ | ವೈಕುಂಠಭುವನಲೋಕಂ ಗಮಿಷ್ಯತಿ | ತದಿದಂ ಪರಂ ಪುಂಡರೀಕಂ ವಿಜ್ಞಾನಘನಮ್ | ತಸ್ಮಾತ್ತಡಿದಾಭಮಾತ್ರಮ್ | ಬ್ರಹ್ಮಣ್ಯೋ ದೇವಕೀಪುತ್ರೋ ಬ್ರಹ್ಮಣ್ಯೋ ಮಧುಸೂದನೋಮ್ | ಸರ್ವಭೂತಸ್ಥಮೇಕಂ

ನಾರಾಯಣಾಯ ನಮಃ | ಕಾರಣರೂಪಮಕಾರ ಪರಬ್ರಹ್ಮೋಮ್ |

ಏತದಥರ್ವ ಶಿರೋ ಯೋಽಧೀತೇ | ಪ್ರಾತರಧೀಯಾನೋ ರಾತ್ರಿ
ಕೃತಂಪಾಪಂ ನಾಶಯತಿ | ಸಾಯಮಧೀಯಾನೋ ದಿವಸ ಕೃತಂ
ಪಾಪಂ ನಾಶಯತಿ | ಮಾಧ್ಯಂದಿನಮಾದಿತ್ಯಾಭಿ ಮುಖೋಽಧೀಯಾನಃ
ಪಂಚಪಾತಕ ಉಪಪಾತಕಾತ್ಪ್ರಮುಚ್ಯತೇ | ಸರ್ವವೇದ ಪಾರಾಯಣ
ಪುಣ್ಯಂ ಲಭತೇ | ನಾರಾಯಣ ಸಾಯುಜ್ಯ ಮವಾಪ್ನೋತಿ ನಾರಾಯಣ
ಸಾಯುಜ್ಯಮವಾಪ್ನೋತಿ | ಯ ಏವಂ ವೇದ | ಇತ್ಯುಪನಿಷತ್ |
ಹರಿಃ ಓಮ್ |

ಶ್ರೀ ಕೃಷ್ಣಾರ್ಪಣಮಸ್ತು



ಮೈಸೂರು: ಕಾರೊನೇಷನ್ ಪ್ರೆಸ್ಸಿನಲ್ಲಿ ಜಿ. ಆರ್. ಜೋಯಿಸ್ಸರ್
ಅವರಿಂದ ಮುದ್ರಿಸಲ್ಪಟ್ಟಿದೆ.

# ಶೋಧನ ಪತ್ರ

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| 3 | 12 | ದೇವತೆಗಳ | ವೇದಗಳ |
| 5 | 22 | ವಾಚ್ಯವೆಂದು | ವಾಚ್ಯನೆಂದು |
| 6 | 20 | ಹೇಳಲಾರದವನು | ಹೇಳಲಾಗದವನು |
| 11 | 21 | ಶರೀರವನ್ನುಳಪ್ಪ | ಶರೀರವನ್ನುಳ್ಳವ |
| 16 | 4 | ಸಮುದ್ಪದ್ಯಂತೇ | ಸಮುತ್ಪದ್ಯಂತೇ |
| 20 | 24 | ನಿರ್ವಿಕಲ್ಪೊ | ನಿರ್ವಿಕಲ್ಪೋ |
| 26 | 14 | ಸರ್ವಗತಃ | ಸರ್ವತಃ |
| 28 | 14 | ಅಂಥಾ | ಅಂತಾ |
| 28 | 15 | (9) | (6) |
| 28 | 15 | (ಶ್ರೈ. ಸಾ. 5) | (ತ್ರೈ. ನಾ. 5) |
| 44 | 7 | ಚಿತ್ತಚಾಂಚಲ್ಯವಿದೆ | ಚಿತ್ತ ಚಾಂಚಲ್ಯವಿಲ್ಲದೆ |
| 47 | 20 | ಮನೋಮಯಕ್ಚಿ | ಮನೋಮಯಃ |

## ಇವರಲ್ಲಿ ದೊರೆಯುವ ಇತರ ಪುಸ್ತಕಗಳು.

1. ಪುರುಷಸೂಕ್ತ — ಮುದ್ರಣದಲ್ಲಿದೆ

2. ವಿಶಿಷ್ಟಾದ್ವೈತಸಾರ
   ಚಿಕ್ಕದೇವರಾಜ ಬಿನ್ನಪದ ಉಪನ್ಯಾಸ ಮಾಲೆ — 1-4-0

3. ಚಿಕ್ಕದೇವರಾಜ ಬಿನ್ನಪ
   ತಮಿಳು, ಇಂಗ್ಲೀಷು ಅನುವಾದ ಸಹಿತ. — 5-0-0